Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–17 | ಸಂಚಿಕೆ–46 | ನವೆಂಬರ್ 13–19, 2023 | ಪುಟ 16 | ರೂ. 10/–
Volume-17 | Issue-46 | November 13-19, 2023 | Pages:16 | Price: 10/-





ಕಟ್ಟಡ ಕಾರ್ಮಿಕರ ಮಕ್ಕಳ ಸ್ಕಾಲರ್‌ಶಿಪ್‌ಗೆ ಸಂಚಕಾರ



'ಬಿಟ್ಟಿ ಭಾಗ್ಯ'ಗಳು 'ಬಿಟ್ಟಿ'ಯೇನಲ್ಲ

ರಾಜ್ಯಪಾಲರ ನಿರಂಕುಶ ನಡೆಗೆ ಕೊನೆ ಇಲ್ಲವೇ?

ಐದು ರಾಜ್ಯಗಳ ಚುನಾವಣೆ: ಮೃದು ಹಿಂದುತ್ವ ನೆಚ್ಚಿಕೊಂಡ ಕಾಂಗ್ರೆಸ್



ಐದು ರಾಜ್ಯಗಳ ವಿಧಾನಸಭಾ ಚುನಾವಣೆ ಮೃದು ಹಿಂದುತ್ವವನ್ನೇ ನೆಚ್ಚಿಕೊಂಡಿರುವ ಕಾಂಗ್ರೆಸ್

ಉತ್ತರ ಭಾರತದ ಮೂರು ರಾಜ್ಯಗಳಲ್ಲಿ ವಿಧಾನಸಭೆ ಚುನಾವಣೆ ನಡೆಯುತ್ತಿದೆ. ಇಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಯಾವ ವ್ಯತ್ಯಾಸವೂ ಕಾಣುತ್ತಿಲ್ಲ. ಬಿಜೆಪಿಯ ಹಿಂದುತ್ವ ನೀತಿಗಳನ್ನು ಎದುರಿಸಲು ಕಾಂಗ್ರೆಸ್ ರಾಷ್ಟ್ರೀಯ ನಾಯಕರು ಮೃದು ಹಿಂದುತ್ವವನ್ನೇ ನೆಚ್ಚಿಕೊಂಡಿದ್ದರೆ, ಈ ಮೂರೂ ರಾಜ್ಯಗಳಲ್ಲಿ ಕಾಂಗ್ರೆಸ್ ಪ್ರಚಾರ ಅದನ್ನೂ ಮೀರಿ ನಡೆದಿದೆ. ಮಧ್ಯಪ್ರದೇಶದ ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿ ಅಭ್ಯರ್ಥಿ ಕಮಲ್ ನಾಥ್ ಅವರು ರಾಮ ಮಂದಿರ ನಿರ್ಮಾಣಕ್ಕೆ ರಾಜೀವ್ ಗಾಂಧಿ ಅವರೇ ದಾರಿ ಮಾಡಿಕೊಟ್ಟರು ಎಂದು ಪ್ರತಿಪಾದಿಸಿದರು. ಗೋವಿನ ರಾಜಕಾರಣ ಮತ್ತು ದಲಿತ-ಅಲ್ಪಸಂಖ್ಯಾತ ವಿರೋಧಿ ವಿಚಾರದಲ್ಲಿ ಎರಡೂ ಪಕ್ಷಗಳು ಒಂದೇ. ಕಾಂಗ್ರೆಸ್ ಮತ್ತು ಬಿಜೆಪಿ ಒಳಗಿನ ಗುಂಪು ಕದನ ಮತ್ತು ಬಂಡಾಯದಲ್ಲಿಯೂ ಒಂದನ್ನೊಂದು ಮೀರಿಸುತ್ತಿವೆ. ಮಧ್ಯಪ್ರದೇಶದಲ್ಲಿ ಬಿಜೆಪಿ 35 ನಾಯಕರನ್ನು ಪಕ್ಷದಿಂದ ಅಮಾನತುಗೊಳಿಸಿದ್ದರೆ, ಕಾಂಗ್ರೆಸ್ 39 ನಾಯಕರ ವಿರುದ್ಧ ಕ್ರಮ ಕೈಗೊಂಡಿದೆ. ಎರಡೂ ಪಕ್ಷಗಳ ಬಂಡಾಯಗಾರರು ಮೂರು ರಾಜ್ಯಗಳ ಚುನಾವಣಾ ಫಲಿತಾಂಶದ ಮೇಲೆ ಪರಿಣಾಮ ಬೀರುವಂತಿದ್ದಾರೆ. ರಾಜಸ್ಥಾನ ಮತ್ತು ಛತ್ತೀಸ್‌ಗಢದಲ್ಲಿ ಅಧಿಕಾರ ಉಳಿಸಿಕೊಳ್ಳಲು ಮತ್ತು ಮಧ್ಯಪ್ರದೇಶದಲ್ಲಿ ಪಕ್ಷಾಂತರದ ಕಾರಣದಿಂದ ಕಳೆದುಹೋದ ಅಧಿಕಾರವನ್ನು ಮರಳಿ ಪಡೆಯಲು ಕಾಂಗ್ರೆಸ್ ಪ್ರಯತ್ನಿಸುತ್ತಿದೆ. ಲೋಕಸಭೆ ಚುನಾವಣೆಗೂ ಮುನ್ನ ಮೂರೂ ರಾಜ್ಯಗಳಲ್ಲಿ ಅಧಿಕಾರಕ್ಕೆ ಬರುವುದು ಬಿಜೆಪಿಯ ಯೋಜನೆಯಾಗಿದೆ. ಇದೇ ವೇಳೆಗೆ ಚುನಾವಣೆ ನಡೆಯುತ್ತಿರುವ ತೆಲಂಗಾಣ ಮತ್ತು



ಮಿಜೋರಾಂನಲ್ಲಿ ಬಿಜೆಪಿಗೆ ಕಡಿಮೆ ಪ್ರಭಾವವಿದೆ.

ಛತ್ತೀಸ್‌ಗಢದಲ್ಲಿ ಮೊದಲ ಹಂತ ಮುಗಿದಿದೆ

ಮಧ್ಯಪ್ರದೇಶದಿಂದ ಬೇರ್ಪಡಿಸಿ ನವೆಂಬರ್ 1, 2000 ರಂದು ರಚನೆಯಾದ ಛತ್ತೀಸ್‌ಗಢದಲ್ಲಿ ಮಾವೋವಾದಿ ಪೀಡಿತ ಪ್ರದೇಶಗಳು ಸೇರಿದಂತೆ, 20 ಕ್ಷೇತ್ರಗಳಲ್ಲಿ ನವೆಂಬರ್ 7ರಂದು ಮತದಾನ ನಡೆದಿದೆ. ಪ್ರಚಾರದ ಕೊನೆಯ ದಿನಗಳಲ್ಲಿ, ಜಾರಿ ನಿರ್ದೇಶನಾಲಯವು (ಇಡಿ) ಮುಖ್ಯಮಂತ್ರಿ ಭೂಪೇಶ್ ಬಾಗಲ್ ಅವರು 'ಮಹಾದೇವ್ ಬೆಟ್ಟಿಂಗ್ ಆ್ಯಪ್' ಹಗರಣದಲ್ಲಿ ಭಾಗಿಯಾಗಿದ್ದಾರೆ ಎಂದು ಆರೋಪಿಸಲು ಮುಂದಾಯಿತು. ಇದು ತೀವ್ರ ವಾಗ್ವಾದಗಳಿಗೆ ಕಾರಣವಾಯಿತು. ಇತರ ಜಾತ್ಯತೀತ ಪಕ್ಷಗಳು ಆಳುವ ರಾಜ್ಯಗಳಲ್ಲಿ ಇಡಿ ಹಸ್ತಕ್ಷೇಪವನ್ನು ಪ್ರೋತ್ಸಾಹಿಸುತ್ತಿರುವ ಕಾಂಗ್ರೆಸ್‌ಗೆ ಛತ್ತೀಸ್‌ಗಢದಲ್ಲಿ ಇದು ಅನಿರೀಕ್ಷಿತ ಹೊಡೆತವಾಗಿದೆ. ಎಲ್ಲ ಕಾಂಗ್ರೆಸ್ ನಾಯಕರು ಕೇಂದ್ರ ಮತ್ತು ಇಡಿಯನ್ನು ಖಂಡಿಸಿದ್ದಾರೆ. ಇನ್ನೊಂದೆಡೆ ಬಿಜೆಪಿಯ ಪ್ರಚಾರದ ನೇತೃತ್ವ ವಹಿಸಿರುವ ಪ್ರಧಾನಿ ನರೇಂದ್ರ ಮೋದಿಯವರು, ಇಡಿ ಆರೋಪವನ್ನೇ ಅಸ್ತ್ರವಾಗಿ ಬಳಸಿಕೊಂಡು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸುತ್ತಿದ್ದಾರೆ.

ಅರಣ್ಯ ಹಕ್ಕು ಕಾಯಿದೆ ಮೂಲಕ ಛತ್ತೀಸ್‌ಗಢ ಸರ್ಕಾರ ಆದಿವಾಸಿಗಳನ್ನು ವಂಚಿಸುತ್ತಿದೆ ಎಂದು ಆರೋಪಿಸಿ ಮಾಜಿ ಕೇಂದ್ರ ಸಚಿವ ಅರವಿಂದ್ ನೇತಮ್ ರಚಿಸಿರುವ ಹಮರ್ ರಾಜ್ ಪಕ್ಷ 50 ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದೆ. ಕೆಲವೆಡೆ ಎಡಪಕ್ಷಗಳಿಗೂ ಬೆಂಬಲವಿದೆ. ಇಂದಿರಾಗಾಂಧಿ ಸಂಪುಟದ ಸದಸ್ಯರಾಗಿದ್ದ ಅರವಿಂದ್ ನೇತಮ್ ಕಾಂಗ್ರೆಸ್ ಭವಿಷ್ಯಕ್ಕೆ ದೊಡ್ಡ ಸವಾಲಾಗಿದ್ದಾರೆ. ಎರಡು ಕೋಟಿಗೂ ಹೆಚ್ಚು ಮತದಾರರನ್ನು ಹೊಂದಿರುವ ಛತ್ತೀಸ್ ಗಢದಲ್ಲಿ ಉಳಿದ 70 ಸ್ಥಾನಗಳಿಗೆ ಇದೇ ತಿಂಗಳ 17ರಂದು ಮತದಾನ ನಡೆಯಲಿದೆ. ಸಿಪಿಐ(ಎಂ) ಎರಡನೇ ಹಂತದಲ್ಲಿ ಮೂರು ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದೆ.

ಕಮಲ್ ನಾಥ್ ರಿಂದ ಸಂಕುಚಿತ ರಾಜಕಾರಣ

ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ ಹೈಕಮಾಂಡ್ ಗೆ ತನ್ನ ಪಕ್ಷದ ಮೇಲೆ ಹಿಡಿತವಿಲ್ಲ. ಇಲ್ಲಿ ಈ ತಿಂಗಳ 17 ರಂದು ಎಲ್ಲಾ 230 ಸ್ಥಾನಗಳಿಗೆ ಮತದಾನ ನಡೆಯಲಿದೆ. ಮಾಜಿ ಮುಖ್ಯಮಂತ್ರಿ ಕಮಲ್ ನಾಥ್ ಅವರು ಬಿಜೆಪಿಯನ್ನು ಮೀರಿಸುವ ಹಿಂದುತ್ವದ ಪರ ಘೋಷಣೆಗಳೊಂದಿಗೆ ಕಾಂಗ್ರೆಸ್ ಅನ್ನು ಮುನ್ನಡೆಸುತ್ತಿದ್ದಾರೆ. 2018 ರಲ್ಲಿ ಅಧಿಕಾರಕ್ಕೆ ಬಂದ ಕಮಲ್ ನಾಥ್ ಸರ್ಕಾರವು, ಜ್ಯೋತಿರಾದಿತ್ಯ ಸಿಂಧಿಯಾ ನೇತೃತ್ವದಲ್ಲಿ ಇಪ್ಪತ್ತಕ್ಕೂ ಹೆಚ್ಚು ಶಾಸಕರು ಬಿಜೆಪಿಗೆ ಸೇರ್ಪಡೆಗೊಂಡಾಗ ಕಳಚಿಬಿತ್ತು. ಬಿಜೆಪಿಯ 15 ವರ್ಷಗಳ ನಿರಂತರ ಆಡಳಿತವನ್ನು ಮತದಾರರು ಕೊನೆಗೊಳಿಸಿದ್ದ ಅವಕಾಶವನ್ನು ಬಳಸಿಕೊಳ್ಳುವಲ್ಲಿ ಕಾಂಗ್ರೆಸ್ ವಿಫಲವಾಗಿದೆ. ಶಿವರಾಜ್ ಸಿಂಗ್ ಚೌಹಾಣ್ ವಿರುದ್ಧ ಜನರ ಭಾವನೆಗಳನ್ನು ಬಂಡವಾಳ ಮಾಡಿಕೊಳ್ಳಲು, ಜನಪರ ನೀತಿಗಳನ್ನು ಮುಂದಿಡಲು ಸಿದ್ಧರಾಗದೆ ಕಮಲ್ ನಾಥ್ ಇನ್ನೂ ಸಂಕುಚಿತ ರಾಜಕಾರಣ ಮಾಡುತ್ತಿದ್ದಾರೆ.

ಕಮಲ್ ನಾಥ್ ಮತ್ತು ಅವರ ತಂಡವು ಮತದಾರರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದೆ. ಚೌಹಾಣ್ ಜನಬೆಂಬಲ ಕಳೆದುಕೊಂಡಿರುವುದನ್ನು ಮನಗಂಡಿರುವ ಬಿಜೆಪಿ ರಾಷ್ಟ್ರೀಯ ನಾಯಕತ್ವ ಪ್ರತಿತಂತ್ರಗಳನ್ನು ರೂಪಿಸಿದೆ. ಇದರ ಭಾಗವಾಗಿಯೇ ಮೂವರು ಕೇಂದ್ರ ಸಚಿವರು ಹಾಗೂ ನಾಲ್ವರು ಸಂಸದರನ್ನು ಸ್ಪರ್ಧೆಗಿಳಿಸಲಾಗಿದೆ. ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕೈಲಾಶ್ ವಿಜಯವರ್ಗಿಯಾ ಕೂಡ ಅಭ್ಯರ್ಥಿಯಾಗಿದ್ದಾರೆ. ಬಿಜೆಪಿಯು ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣವನ್ನು ಪ್ರಮುಖ ಪ್ರಚಾರದ ವಿಷಯವನ್ನಾಗಿ ಮಾಡುತ್ತಿದೆ.

ಬಿಜೆಪಿ ಆಡಳಿತದಲ್ಲಿನ ಭ್ರಷ್ಟಾಚಾರ ಜನರ ನಡುವೆ ಬಿಸಿ ಚರ್ಚೆಯ ವಿಷಯವಾಗಿದೆ. ದೇವಸ್ಥಾನದ ಜೀರ್ಣೋದ್ಧಾರ ಯೋಜನೆಗಳಿಂದ ಹಿಡಿದು, ಸರ್ಕಾರಿ ನೇಮಕಾತಿವರೆಗೆ ಭ್ರಷ್ಟಾಚಾರ ಬಯಲಿಗೆ ಬಂದಿದೆ. ಮಹಿಳೆಯರು ಮತ್ತು ದಲಿತರ ಮೇಲಿನ ಅಪರಾಧಗಳು ಹೆಚ್ಚಾಗಿವೆ. ರೈತರು ಮತ್ತು ಕೃಷಿ ಕಾರ್ಮಿಕರು ಎದುರಿಸುತ್ತಿರುವ ಸಂಕಷ್ಟಗಳು ರಾಜ್ಯದ 5.60 ಕೋಟಿ ಮತದಾರರ ಮೇಲೂ ಪರಿಣಾಮ ಬೀರಲಿದೆ. ಸಿಪಿಐ(ಎಂ) ನಾಲ್ಕು ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದೆ. ಸಮೀಕ್ಷೆಯಲ್ಲಿ ಬಿಜೆಪಿಗೆ ಹಿನ್ನಡೆಯಾಗಿದೆ.

ಯಾರೂ ಯಾರನ್ನೂ ನಂಬದ ರಾಜಸ್ಥಾನ

ತಮ್ಮದೇ ಪಾಳಯದಿಂದ ದಂಗೆಯಿಂದ ಬದುಕುಳಿದ ಅಶೋಕ್ ಗೆಹ್ಲೋಟ್ ಅನ್ನು ಕಾಂಗ್ರೆಸ್ ಹೈಕಮಾಂಡ್ ನಂಬುವುದಿಲ್ಲ. ಮಾಜಿ ಪಿಸಿಸಿ ಅಧ್ಯಕ್ಷ ಮತ್ತು ಮಾಜಿ ಉಪಮುಖ್ಯಮಂತ್ರಿ

ಪುಟ 6 ಕ್ಕೆ

ತೆಲಂಗಾಣ ವಿಧಾನಸಭೆ ಚುನಾವಣೆ: 19 ಸ್ಥಾನಗಳಲ್ಲಿ ಸಿಪಿಐ(ಎಂ) ಸ್ಪರ್ಧೆ

ತೆಲಂಗಾಣ ವಿಧಾನಸಭಾ ಚುನಾವಣೆಯಲ್ಲಿ ಸಿಪಿಐ(ಎಂ) ಮತ್ತು ಕಾಂಗ್ರೆಸ್ ನಡುವಿನ ಸೀಟು ಹಂಚಿಕೆ ಮಾತುಕತೆ ಮುರಿದುಬಿದ್ದಿದೆ. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿಯವರು ಈ ವಿಷಯವನ್ನು ಪಕ್ಷದ ರಾಜ್ಯ ಘಟಕದ ನಿರ್ಧಾರಕ್ಕೆ ಬಿಡಲಾಗಿದೆ ಎಂದು ಹೇಳಿದರು. ಕಾಂಗ್ರೆಸ್ ಜೊತೆ ಮೈತ್ರಿಗೆ ಮಾಡಿದ ಪ್ರಯತ್ನಗಳು ವಿಫಲವಾದ ಹಿನ್ನೆಲೆಯಲ್ಲಿ ಸಿಪಿಐ(ಎಂ) ಏಕಾಂಗಿಯಾಗಿ ಸ್ಪರ್ಧಿಸುತ್ತಿದೆ. ಅಭ್ಯರ್ಥಿಗಳನ್ನು ಕಾಂಗ್ರೆಸ್ ಪ್ರಸ್ತಾಪಿಸಿದಂತೆ ಮಿರ್ಯಾಲಗೂಡ ಮತ್ತು ವೈರಾ ಸ್ಥಾನಗಳನ್ನು ಬಿಟ್ಟುಕೊಡಲು ಸಿಪಿಐ(ಎಂ) ಬಯಸಿತ್ತು. ಆದರೆ, ಕಾಂಗ್ರೆಸ್ ಪಕ್ಷದಿಂದ ಸಕಾರಾತ್ಮಕ ಪ್ರತಿಕ್ರಿಯೆ ಸಿಗದ ಹಿನ್ನೆಲೆಯಲ್ಲಿ 19 ಕ್ಷೇತ್ರಗಳಲ್ಲಿ ಏಕಾಂಗಿಯಾಗಿ ಸ್ಪರ್ಧಿಸುವುದಾಗಿ ಸಿಪಿಐ(ಎಂ) ಘೋಷಿಸಿದೆ. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ತಮ್ಮಿನೇನಿ ವೀರಭದ್ರಂ ಖಮ್ಮಂ ಜಿಲ್ಲೆಯ ಪಾಲೇರು ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ.

ಸಿಪಿಐ ಕಾಂಗ್ರೆಸ್‌ನೊಂದಿಗೆ ಕೈಜೋಡಿಸಿ ಏಕೈಕ ವಿಧಾನಸಭಾ ಸ್ಥಾನಕ್ಕಾಗಿ ಚುನಾವಣೆ ಎದುರಿಸಲು ಒಪ್ಪಿಕೊಂಡಿದೆ. ಒಪ್ಪಂದದಂತೆ ಭದ್ರಾದ್ರಿ ಕೊತಗುಡೆಂ ಜಿಲ್ಲೆಯ ಕೊತ್ತಗುಡೆಂ ವಿಧಾನಸಭಾ ಕ್ಷೇತ್ರವನ್ನು ಸಿಪಿಐಗೆ ನೀಡಲು ಕಾಂಗ್ರೆಸ್ ನಿರ್ಧರಿಸಿದೆ. ಪಕ್ಷದ ರಾಜ್ಯ ಕಾರ್ಯದರ್ಶಿ ಕುಣಮನೇನಿ ಸಾಂಬಶಿವ ರಾವ್ ಅವರು ಕೊತ್ತಗುಡೆಂನಿಂದ ಚುನಾವಣೆಗೆ ಸ್ಪರ್ಧಿಸಲಿದ್ದಾರೆ. ಉಳಿದ ಎಲ್ಲಾ 118 ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಬೆಂಬಲಿಸಲು ಸಿಪಿಐ ಒಪ್ಪಿಗೆ ನೀಡಿದೆ.

2023ರ ನವೆಂಬರ್ 30 ರಂದು ಎಲ್ಲಾ 119 ಸ್ಥಾನಗಳಿಗೆ ಮತದಾನ ನಡೆಯಲಿದೆ. ಡಿಸೆಂಬರ್ 3 ರಂದು ಫಲಿತಾಂಶ ಪ್ರಕಟವಾಗಲಿದೆ.

ಸಿಪಿಐ(ಎಂ) ನ 19 ಅಭ್ಯರ್ಥಿಗಳ ವಿವರ ಇಲ್ಲಿದೆ:

ಭದ್ರಾಚಲಂ (ಎಸ್.ಟಿ.)–ಕಾರಂ ಪುಲ್ಲಯ್ಯ
ಯೆಲ್ಲಂಡು (ಎಸ್.ಟಿ.)–ದುಗ್ಗಿ ಕೃಷ್ಣ
ಅಶ್ವಾರಾವು ಪೇಟ (ಎಸ್.ಟಿ.)–ಪಿಟ್ಟಲ ಅರ್ಜುನ್
ಪಾಲೇರು–ತಮ್ಮಿನೇನಿ ವೀರಭದ್ರಂ
ಮಧಿರ (ಎಸ್.ಸಿ.)–ಪಾಲಡುಗು ಭಾಸ್ಕರ್
ವೈರ (ಎಸ್.ಟಿ.)–ಭುಕ್ಯ ವೀರಭದ್ರಂ
ಖಮ್ಮಂ–ಯೆರ್ರ ಶ್ರೀಕಾಂತ್
ಸತ್ತುಪಲ್ಲಿ (ಎಸ್.ಸಿ.)–ಮಚರ್ಲ ಭಾರತಿ
ಮಿರ್ಯಾಲಗೂಡಂ–ಜೂಲಕಂಟಿ ರಂಗಾರೆಡ್ಡಿ
ನಕಿರೇಕಲ್ (ಎಸ್.ಸಿ.)–ಬೊಜ್ಜ ಚಿನ ವೆಂಕುಲು
ನಲ್ಗೊಂಡ–ಮುದಿರೆಡ್ಡಿ ಸುಧಾಕರ್ ರೆಡ್ಡಿ
ಮುನುಗೋಡು–ದೊನುರು ನರಸಿಂಹರೆಡ್ಡಿ
ಭುವನಗಿರಿ–ಕೊಂಡಮಡುಗು ನರಸಿಂಹ
ಹುಜೂರ್ ನಗರ್–ಮಲ್ಲು ಲಕ್ಷ್ಮಿ
ಕೊಡಡ್–ಮಟ್ಟಿಪೆಲ್ಲಿ ಸೈದುಲು
ಜನಗಂ–ಮೋಕು ಕನಕರೆಡ್ಡಿ
ಇಬ್ರಾಹಿಂಪಟ್ಟಂ–ಪಗಡಾಲ ಯಾದಯ್ಯ
ಪಟಾಂಚೇರು–ಜೆ. ಮಲ್ಲಿಕಾರ್ಜುನ್
ಮುಶಿರಾಬಾದ್–ಎಂ. ದಶರಥ್

ರಾಜಸ್ತಾನದಲ್ಲಿ ಕಳೆದ ಬಾರಿ 28 ಸ್ಥಾನಗಳಲ್ಲಿ ಏಕಾಂಗಿಯಾಗಿ ಸ್ಪರ್ಧಿಸಿದ್ದ ಸಿಪಿಐ(ಎಂ) ಎರಡು ಸ್ಥಾನ ಗಳಿಸಿತ್ತು. ಈ ಬಾರಿ 17 ಕ್ಷೇತ್ರಗಳಲ್ಲಿ ಪ್ರಬಲ ಪೈಪೋಟಿ ಕಂಡು ಬರುತ್ತಿದೆ. ನವೆಂಬರ್ 25 ರಂದು ಮತದಾನ ನಡೆಯಲಿದೆ.

ಮಧ್ಯಪ್ರದೇಶದಲ್ಲಿ ನವೆಂಬರ್ 17 ರಂದು ಎಲ್ಲಾ 230 ಸ್ಥಾನಗಳಿಗೆ ಮತದಾನ ನಡೆಯಲಿದೆ. ಇಲ್ಲಿ ಸಿಪಿಐ(ಎಂ) ನಾಲ್ಕು ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದೆ.

ಛತ್ತೀಸ್‌ಗಢ: ಒಟ್ಟು 90 ಕ್ಷೇತ್ರಗಳನ್ನು ಹೊಂದಿರುವ ಛತ್ತೀಸ್‌ಗಢ ವಿಧಾನಸಭಾ ಚುನಾವಣೆ ಮಾವೋವಾದಿ ಪೀಡಿತ ಪ್ರದೇಶಗಳು ಸೇರಿದಂತೆ 20 ಕ್ಷೇತ್ರಗಳಲ್ಲಿ ನವೆಂಬರ್ 7ರಂದು ಮತದಾನ ನಡೆದಿದೆ. ಉಳಿದ 70 ಕ್ಷೇತ್ರಗಳಿಗೆ ನವೆಂಬರ್ 17ರಂದು ಮತದಾನ ನಡೆಯಲಿದೆ. ಈ ರಾಜ್ಯದಲ್ಲಿ ಸಿಪಿಐ(ಎಂ) ಮೂರು ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದೆ.

ಸಂಪಾದಕೀಯ

ಜಾತಿ ಗಣತಿ: ಸಲ್ಲದ ವಿರೋಧ

ಕರ್ನಾಟಕದಲ್ಲಿ ಜಾತಿ ಗಣತಿಯ ವಿಷಯದ ಮೇಲೆ ಈಗ ಅನವಶ್ಯಕವಾದ ವಾದ–ವಿವಾದಗಳನ್ನು ಪ್ರಜ್ಞಾಪೂರ್ವಕವಾಗಿಯೇ ಬೆಳೆಸಲಾಗುತ್ತಿದೆ. ರಾಜ್ಯದಲ್ಲಿಯೇ ಆಗಲಿ, ದೇಶದಲ್ಲಿಯೇ ಆಗಲಿ ಯಾವ ಜಾತಿಯ ಜನಗಳು ಎಷ್ಟು ಸಂಖ್ಯೆಯಲ್ಲಿ ಇದ್ದಾರೆ, ನಾನಾ ಸಮುದಾಯಗಳ ಜನರ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಪರಿಸ್ಥಿತಿ ಹೇಗಿದೆ ಎಂಬ ಮಾಹಿತಿಯನ್ನು ಒಳಗೊಂಡ ಜಾತಿ ಗಣತಿಯ ಅಂಶಗಳನ್ನು ಬಹಿರಂಗಪಡಿಸುವುದಕ್ಕೆ ಕೆಲವು ರಾಜಕೀಯ ಪಕ್ಷಗಳು, ನಾಯಕರು, ಕೆಲವು ಜಾತಿಗಳ ಪ್ರಮುಖರು ವಿರೋಧ ವ್ಯಕ್ತಪಡಿಸುವುದು ಏಕೆ ಎಂಬುದು ಬಹಳ ಕುತೂಹಲದ ವಿಚಾರವಾಗಿದೆ.

ಜನತಾ ದಳ(ಎಸ್) ಪಕ್ಷದ ಮುಖಂಡರಾದ ಎಚ್.ಡಿ. ಕುಮಾರ ಸ್ವಾಮಿಯವರು ಜಾತಿ ಗಣತಿಯನ್ನು ಸರಕಾರ ಸ್ವೀಕರಿಸುವುದನ್ನು ಮತ್ತು ವರದಿಯ ವಿವರಗಳನ್ನು ಬಹಿರಂಗ ಪಡಿಸುವುದನ್ನು ವಿರೋಧಿಸಿದ್ದಾರೆ. ಆದಿಚುಂಚನಗಿರಿ ಮಠದ ಮುಖ್ಯಸ್ಥರಾದ ಶ್ರೀ ನಿರ್ಮಲಾನಂದ ಸ್ವಾಮಿಯವರೂ ಸಹ ಈ ಜಾತಿಗಣತಿಯ ವಿವರಗಳನ್ನು ಬಹಿರಂಗಪಡಿಸುವುದನ್ನು ವಿರೋಧಿಸಿದ್ದಾರೆ. ಭಾರತೀಯ ಜನತಾ ಪಕ್ಷವು ಕೇಂದ್ರ ಮಟ್ಟದಲ್ಲಿ ಜಾತಿ ಗಣತಿಗೆ ವಿರೋಧವಿಲ್ಲ ಎಂದು ಹೇಳುತ್ತಿದ್ದರೂ, ಜಾತಿಗಣತಿ ನಡೆಸುವುದಕ್ಕೆ ಮತ್ತು ಜಾತಿ ಗಣತಿಯ ವಿವರಗಳನ್ನು ಬಹಿರಂಗಪಡಿಸುವುದಕ್ಕೆ ಬಿಜೆಪಿಗೆ ಸಹಮತವಿಲ್ಲ ಎಂಬುದನ್ನು ಆ ಪಕ್ಷದ ನಾಯಕರ ನಡವಳಿಕೆ, ಧೋರಣೆಯಲ್ಲಿ ಯಾರಾದರೂ ಕಂಡುಕೊಳ್ಳಬಹುದು.

ಅಷ್ಟಕ್ಕೂ ಕೋಟ್ಯಂತರ ರೂಪಾಯಿಗಳ ಮೊತ್ತದ ಹಣ, ಅಪಾರ ಮಾನವ ಸಂಪನ್ಮೂಲಗಳನ್ನು ಬಳಸಿಕೊಂಡು ನಡೆಸಲಾಗಿರುವ ಜಾತಿ ಗಣತಿಯನ್ನು ಸ್ವೀಕರಿಸಬಾರದು, ವರದಿಯ ವಿವರಗಳನ್ನೇ ಬಹಿರಂಗ ಪಡಿಸಬಾರದು ಎಂಬುದಕ್ಕೆ ಪಟ್ಟಭದ್ರ ಹಿತಾಸಕ್ತಿಗಳ ಹೊರತು ಬೇರೆ ಏನೂ ಕಾಣುವುದಿಲ್ಲ.

ಕರ್ನಾಟಕ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷರಾಗಿದ್ದ ಶ್ರೀ ಕಾಂತರಾಜು ಅವರ ನೇತೃತ್ವದಲ್ಲಿ 2013–18 ರ ಅವಧಿಯಲ್ಲಿ ಜಾತಿಗಣತಿಯ ನಡೆಸಲಾಗಿದೆ. ಕಾಂತರಾಜು ಅವರ ನೇತೃತ್ವದ ಆಯೋಗದ ಅವಧಿ ಮುಗಿದಿರುವುದರಿಂದ ಅಲ್ಲಿನ ತಾಂತ್ರಿಕ ಅಂಶಗಳನ್ನು ಗಣಿಸಿ ಪ್ರಸ್ತುತ ವರದಿಯನ್ನು ಪರಿಶೀಲಿಸಿ ವರದಿ ನೀಡಲು ಹಲಿ ಅದ್ಯಕ್ಷರಾದ ಶ್ರೀ ಜಯಪ್ರಕಾಶ ಹೆಗಡೆ ಯವರ ನೇತೃತ್ವದಲ್ಲಿ ಸಮಿತಿಗೆ ಸೂಚಿಸಲಾಗಿದೆ. ಸಮಿತಿಯು ವರದಿಯನ್ನು ಸಲ್ಲಿಸುವ ಮುಂಚೆಯೇ, ಸರಕಾರವು ವರದಿಯನ್ನು ಸ್ವೀಕರಿಸುವ ಮುಂಚೆಯೇ ವರದಿಯಲ್ಲಿವೆ ಎನ್ನಲಾದ ಅಂಕಿ–ಅಂಶಗಳ ಬಗೆಗೆ ಊಹಾಪೋಹಗಳ ಆಧಾರದಲ್ಲಿ ಪ್ರತಿಕ್ರಿಯೆ ನೀಡುತ್ತಿರುವುದಂತೂ ಯಾವ ರೀತಿಯಿಂದಲೂ ಆರೋಗ್ಯಕರವಲ್ಲ ಹಾಗೂ ಸಮರ್ಥನೀಯವಲ್ಲ.

ಕರ್ನಾಟಕ ರಾಜ್ಯದಲ್ಲಿ ಸ್ವಾತಂತ್ರ್ಯದ ಕಾಲದಿಂದಲೂ ಬಲಾಢ್ಯ ಜಾತಿಗಳು ರಾಜಕಾರಣದಲ್ಲಿ ಹಾಗೂ ಆರ್ಥಿಕ–ಸಾಮಾಜಿಕ ರಂಗದಲ್ಲಿ ಪ್ರಾಬಲ್ಯವನ್ನು ಕಾಪಾಡಿಕೊಂಡು ಬಂದಿರುವುದು ರಹಸ್ಯವೇನಲ್ಲ. 1931 ರ ನಂತರ ಬಹು ದೀರ್ಘಕಾಲ ಜಾತಿ ಗಣತಿ ನಡೆಯದಿರುವುದರಿಂದ ಸಮಾಜದ ಮೇಲೆ ಪ್ರಾಬಲ್ಯ ಸಾಧಿಸಿರುವ ಬಲಾಢ್ಯ ಜಾತಿ, ಜಾತಿವಾದಿ ಶಕ್ತಿಗಳು, ಸಂಖ್ಯೆಯ ದೃಷ್ಟಿಯಿಂದಲೂ ತಾವು ದೊಡ್ಡ ಸಂಖ್ಯೆಯಲ್ಲಿದ್ದು, ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ತಮ್ಮ ತಮ್ಮ ಜಾತಿಗಳು ಸಾಧಿಸಿರುವ ಹಿಡಿತ ನ್ಯಾಯಬದ್ಧವಾದದ್ದು ಎಂಬ ಮನಸ್ಥಿತಿಯಲ್ಲಿವೆ. ಪ್ರಸ್ತುತ ಜಾತಿ ಗಣತಿಯ ಅಂಕಿ–ಅಂಶಗಳು ಈ ನಂಬಿಕೆಯನ್ನು ಬದಲಿಸುವಂತಹ ಸಾಧ್ಯತೆ ಇದೆ ಎಂದು ಊಹಿಸಲಾಗಿದೆ.

ಅಂದರೆ ಕರ್ನಾಟಕದಲ್ಲಿ ಒಕ್ಕಲಿಗ ಮತ್ತು ವೀರಶೈವ–ಲಿಂಗಾಯತ ಸಮುದಾಯಗಳ ಜನರಿಗಿಂತಲೂ, ದಲಿತರು ಮತ್ತು ಅಲ್ಪಸಂಖ್ಯಾತರು ಹೆಚ್ಚಿನ ಪ್ರಮಾಣದಲ್ಲಿದ್ದಾರೆ ಎಂಬ ಚಿತ್ರಣವನ್ನು ವರದಿ ನೀಡಬಹುದು ಎಂದು ಊಹಿಸಲಾಗಿದೆ.

ಯಾವುದೇ ಸಮುದಾಯಕ್ಕೆ ರಾಜಕೀಯ, ಶೈಕ್ಷಣಿಕ ಹಾಗೂ ಉದ್ಯೋಗಾವಕಾಶಗಳಲ್ಲಿ ದೊರೆಯುವ ಮೀಸಲಾತಿಯ ಪ್ರಮಾಣವು ಆಯಾ ಜಾತಿಗಳ ಜನರ ಸಂಖ್ಯೆಯ ಮೇಲೆ ನಿರ್ಧಾರಿತವಾಗಿರುತ್ತದೆ ಎಂಬುದು ಸರ್ವ ವಿಧಿತವಾದ ವಿಷಯವಾಗಿದೆ. ಹೀಗಿರುವಾಗ ಜಾತಿ ಗಣತಿಯ ವರದಿ ಅಂಗೀಕಾರವಾದರೆ ರಾಜಕಾರಣ ಮತ್ತು ಸಾಮಾಜಿಕ ರಂಗಗಳಲ್ಲಿ ತಮ್ಮ ತಮ್ಮ ಪಾಬಲ್ಯವನ್ನು ಮುಂದುವರಿಸಿಕೊಂಡು ಹೋಗುವುದು ಕಷ್ಟವಾಗುತ್ತದೆ ಎಂಬ ಅಂಜಿಕೆಯೇ ಮುಖ್ಯವಾಗಿ ಈ ಜಾತಿ ಗಣತಿಯನ್ನು ವಿರೋಧಿಸುವ ಧೋರಣೆಯ ಮೂಲವಾಗಿದೆ.

ಈ ಒಟ್ಟು ಹಿನ್ನೆಲೆಯಲ್ಲಿ ಸರಕಾರವು ಜಾತಿ ಗಣತಿಯನ್ನು ಸಾಧ್ಯವಾದಷ್ಟೂ ಬೇಗ ಸ್ವೀಕರಿಸಿ ವಿವರಗಳನ್ನು ಸಾರ್ವಜನಿಕರಿಗೆ ಬಹಿರಂಗ ಪಡಿಸಬೇಕಿದೆ. ಒಂದೊಮ್ಮೆ ಜಾತಿ ಗಣತಿಯ ವಿವರಗಳಲ್ಲಿ ಅಂಕಿ–ಅಂಶಗಳಲ್ಲಿ, ಅಧ್ಯಯನದಲ್ಲಿ ದೋಷವಿದೆ ಎಂದು ಯಾರಾದರೂ ಭಾವಿಸುವುದಾದರೆ, ವರದಿ ಬಹಿರಂಗವಾದ ನಂತರ ದೋಷಗಳನ್ನು ನಿರ್ದಿಷ್ಟವಾಗಿ ಗುರುತಿಸಿ, ಸಾಕ್ಷ್ಯಾಧಾರಿತವಾಗಿ ಆಕ್ಷೇಪಗಳನ್ನು ಮಂಡಿಸುವುದು ಸರಿಯಾದ ಕ್ರಮವಾಗುತ್ತದೆಯೇ ಹೊರತು ವರದಿಯ ವಿವರಗಳನ್ನು ಅಧಿಕೃತವಾಗಿ ಬಹಿರಂಗ ಪಡಿಸುವುದನ್ನೇ ವಿರೋಧಿಸುವುದು ಪ್ರಜಾಸತ್ತಾತ್ಮಕ ಆಶಯಗಳಿಗೆ ಪೂರಕವಲ್ಲದ ನಡೆಯಾಗುತ್ತದೆ. ಇದನ್ನು ಎಲ್ಲರೂ ಮನಗಾಣಬೇಕಾಗಿದೆ.

ಆದ್ದರಿಂದ ಸಾಧ್ಯವಾದಷ್ಟೂ ಬೇಗ ಜಾತಿ ಗಣತಿಯ ವರದಿಯ ವಿವರಗಳು ಬಹಿರಂಗವಾಗಬೇಕಿದೆ. ಮತ್ತು 'ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು' ಎಂಬ ಉದಾತ್ತ ತತ್ವವನ್ನು ಬಲಾಢ್ಯ ಸಮುದಾಯಗಳೂ ಸೇರಿ ಎಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ.

ಆ ದೆಸೆಯಲ್ಲಿ ಕಾಂಗ್ರೆಸ್ ಸರಕಾರ ದಿಟ್ಟವಾದ ಕ್ರಮ ವಹಿಸಲಿ. ಪಕ್ಷದೊಳಗೇ ಇರುವ ವಿರೋಧಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸಲಿ.

ನಿಜಕ್ಕೂ ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಿರಲಿ.

ಬಿಜೆಪಿ: ಅವಕಾಶಗಳ ಹುಡುಕಾಟದಲ್ಲಿ

ಈ ವಾರ


ಎಸ್.ವೈ.ಗುರುಶಾಂತ್

ನಾವಿಕನಿಲ್ಲದ ನೌಕೆಯಂತಿರುವ ಕರ್ನಾಟಕದ ಬಿಜೆಪಿ ಒಳಗಿನ ಬೆಳವಣಿಗೆ ಕಳೆದ ವಾರದಲ್ಲಿ ವಿಶೇಷ ಕುತೂಹಲವನ್ನು ಮೂಡಿಸಿತ್ತು. ಬಿಜೆಪಿ ರಾಜ್ಯಾಧ್ಯಕ್ಷರನ್ನು ಇನ್ನೇನು ನೇಮಕ ಮಾಡುತ್ತಾರೆ ಎನ್ನುವ ಬಗ್ಗೆ ಬಿಸಿ ಸುದ್ದಿಗಳು ಗಾಳಿಗೇರಿದ್ದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ಕರ್ನಾಟಕ ಬಿಜೆಪಿಗೆ ಅಧ್ಯಕ್ಷರಾಗುತ್ತಾರೆ ಎನ್ನುವ ವದಂತಿಗಳು ಮತ್ತು ಅದಕ್ಕೆ ಸಂತಸ ತುಳುಕಿದ ಅವರ ನಾಜೂಕಿನ ಪ್ರತಿಕ್ರಿಯೆಗಳು ಪ್ರಕಟವಾಗಿದ್ದವು. ಹಾಗೆಯೇ ಮಾಜಿ ಮುಖ್ಯಮಂತ್ರಿ, ಮಾಜಿ ಕೇಂದ್ರ ಸಚಿವ ಸದಾನಂದಗೌಡರನ್ನು ರಾಜ್ಯಾಧ್ಯಕ್ಷರನ್ನಾಗಿ ನೇಮಕ ಮಾಡಬಹುದು ಎಂದು ಅದಕ್ಕಾಗಿಯೇ ಪಕ್ಷದ ಅಖಿಲ ಭಾರತ ಅಧ್ಯಕ್ಷ ಜೆಪಿ ನಡ್ಡಾರವರು ದೆಹಲಿಗೆ ಬರುವಂತೆ ಬುಲಾವು ಹೇಳಿ ಕಳಿಸಿದ್ದಾರೆ ಎಂದು ಹೇಳಲಾಗಿತ್ತು. ಆ ಕರೆಗೆ ಓಗೊಟ್ಟು ಸದಾನಂದ ಗೌಡರು ಡೆಲ್ಲಿಗೆ ದೌಡಾಯಿಸಿದ್ದರು ಕೂಡ. ಆದರೆ ಅಲ್ಲಿ ನಡೆದ ಪ್ರಹಸನವೇ ಅವರಿಗೆ ಅತ್ಯಂತ ಇರುಸು ಮುರುಸು ತಂದಿತ್ತು. ಮಾತ್ರವಲ್ಲ, ನಡ್ಡಾರವರನ್ನು ಭೇಟಿಯಾಗಲು ಸಮಯಾವಕಾಶವು ಸಿಗದೇ ಸದಾನಂದ ಗೌಡರು ಅವಮಾನಕ್ಕೆ ಒಳಗಾಗಿಯೂ ಆಗಿತ್ತು. ಎರಡು ದಿನಗಳು ಕಾದರೂ ಅಧ್ಯಕ್ಷರ ದರ್ಶನವೇ ಆಗದೆ ಬಂದ ದಾರಿಗೆ ಸುಂಕ ಕೊಟ್ಟು ಗೌಡರು ವಾಪಸಾಗಿ ಕೈ ಕೈ ಹೊಸಕಿದರು. ಆದರೂ ಯಥಾ ರೀತಿ ಅವರ ಸ್ಪೆಷಲ್ ಶೈಲಿಯಲ್ಲಿ ನಗುತ್ತಲೇ ಪತ್ರಿಕಾಗೋಷ್ಠಿ ಮಾಡಿ ಮುಗಿಸಿದ್ದರು. ಇನ್ನೊಂದು ಬದಿಯಲ್ಲಿ ಯಾಕೋ, ಏನೋ? ಕೇಂದ್ರ ಸಚಿವ ಶೋಭಾ ಕರಂದ್ಲಾಜೆ ಅವರು 'ಈ ಸಚಿವ ಹುದ್ದೆಯಲ್ಲೇ ನಾನು ಸಂತೃಪ್ತಳಾಗಿದ್ದೇನೆ. ನನಗೆ ಇನ್ನೇನು ಬೇಡ' ಎಂದು ಹೇಳಿದ್ದು ವಿಶೇಶ ಎನಿಸಿತು. ಯಾಕೆಂದರೆ ಹಿಂದಿನ ವಾರ ಆ ಸುದ್ದಿಯಿಂದ ಮುಖ ಅರಳಿತ್ತು, ಅದ್ಯಕ್ಷೆ ಆಗಿಯೇ ಬಿಟ್ಟೆ ಎನ್ನುವ ಗತ್ತೂ ಇತ್ತು. ಮೊದಲು ಪಕ್ಷದ ತೀರ್ಮಾನಕ್ಕೆ ಬದ್ಧಳೆಂದು, ತಾನು ಪಕ್ಷದ ವಿನಮ್ರ ಕಾರ್ಯಕರ್ತಳೆಂದು ಬಹಳ ಖುಷಿಯಿಂದಲೇ ರಾಜ್ಯಾಧ್ಯಕ್ಷ ಸ್ಥಾನವನ್ನು ಅಲಂಕರಿಸಲು ಸಿದ್ಧವಾಗಿದ್ದ ಶೋಭಕ್ಕ ಹೀಗೆ ಉಲ್ಟಾ ಹೊಡೆದದ್ದು ಒಂದು ವಿಶೇಷ! ನಗು ನಗುತ್ತಾ ಹೋದ ಗೌಡರು ಹಾಗೆ ಮುಖಭಂಗ ಅನುಭವಿಸಿ ಯಾಕೋ ಹ್ಯಾಪ ಮೋರೆ ಹಾಕಿ ವಾಪಸ್ ಆಗಿದ್ದು ಕೂಡ ವಿಚಿತ್ರ. ಈ ವಾರ ಬಿಜೆಪಿ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರು ಗೌಡರಿಗೆ ನಡ್ಡಾರನ್ನು ಭೇಟಿ ಮಾಡಿಸುವೆ ಬನ್ನಿ ಎಂದು ಕರೆದರೂ ಗೌಡರು ಮನೆಯ ಕಾರ್ಯಕ್ರಮದ ನೆಪ ಹೇಳಿ ಮುಖ ತಿರುವಿದ್ದರು. ಅಂದರೆ ಗೌಡರಿಗೆ ದೆಹಲಿಯಲ್ಲಿ ನಡೆಯಬಹುದಾದ ಪ್ರಸಂಗದ ಒಂದು ಸಣ್ಣ ಸುಳಿದರು ಸಿಕ್ಕಿತ್ತೇನೋ ಅನಿಸುತ್ತದೆ.



ಈ ಇಬ್ಬರ ಪ್ರಸಂಗಗಳ ನಡುವಿನ ಲೆಕ್ಕಾಚಾರಗಳೇನು? ಸಚಿವೆ ಶೋಭಾ ಕರಂದ್ಲಾಜೆ ಅವರನ್ನು ಅದ್ಯಕ್ಷ ಮಾಡುವ ಸುದ್ದಿಯಾದರೂ ಯಾಕೆ ಬಂತು? ಹಾಗೆ ಮಾಡಿದರೆ ಯಡಿಯೂರಪ್ಪನವರ ಬಣ ಮುಂದಿನ ಚುನಾವಣೆಯಲ್ಲಿ ಸಕ್ರಿಯವಾಗಿ ತೊಡಗುತ್ತದೆ ಎಂದೆ ಶೋಭಕ್ಕರನ್ನು ಆಯ್ಕೆ ಮಾಡಲಾಗುತ್ತಿತ್ತೇ? ಅದರ ಬದಲು ಮತ್ತೇನು? ಯಡ್ಯೂರಪ್ಪನವರ ಬೇಡಿಕೆ ಏನಾಗಿತ್ತು? ಎಂದಾಗ ಅವರ ಮಗ ವಿಜೇಂದ್ರನನ್ನೇ ರಾಜ್ಯಾಧ್ಯಕ್ಷ ಮಾಡ ಬೇಕು, ಮಾಡಬಹುದು ಎಂದು ಕೂಡ ಸುದ್ದಿ ಸುತ್ತುತ್ತಿತ್ತು!


ಕಳೆದ ವಿಧಾನಸಭಾ ಚುನಾವಣೆಗೆ ಮುನ್ನವೇ ಯಡಿಯೂರಪ್ಪನವರನ್ನು ಪದಚ್ಯುತ ಮಾಡಿ ಮೂಲೆಗುಂಪು ಮಾಡಲು ಬಿಜೆಪಿಯ ವಿಶೇಷವಾಗಿ ಆರ್. ಎಸ್. ಎಸ್. ನ ನಾಯಕತ್ವ ಬಹಳ ವ್ಯವಸ್ಥಿತವಾದ ಕಾರ್ಯಾಚರಣೆಯನ್ನು ನಡೆಸಿತ್ತು. ಕರ್ನಾಟಕದ ರಾಜಕಾರಣವನ್ನು ಆರ್ ಎಸ್ ಎಸ್ ವಿಶೇಷವಾಗಿ 'ಬ್ರಾಹ್ಮಣರ ಲಾಬಿ' ಮೂಲಕ ಕೈಗೆ ತೆಗೆದುಕೊಳ್ಳಲು ಹೊರಟಿದೆ ಎನ್ನುವ ಮಾತುಗಳು ಜೋರಾಗಿ ಕೇಳಿಬಂದಿದ್ದವು. ಅಂದು ಜೆಡಿಎಸ್ಸಿ ನ ನಾಯಕ ಇಂದು ಬಿಜೆಪಿಯ ಎನ್ ಡಿ ಎ ಭಾಗವಾಗಿರುವ ಎಚ್ ಡಿ ಕುಮಾರಸ್ವಾಮಿಯವರೇ ಬಹಳ ಮೋಗಮ್ ಆಗಿ ಪೇಶ್ವೆ ವಂಶಸ್ಥರು ಅಧಿಕಾರ ಹಿಡಿಯಲು ಹೊರಟಿದ್ದಾರೆ ಎಂದೇ ಸ್ಫೋಟಕ ಹೇಳಿಕೆ ನೀಡಿದ್ದರು! ಬಿಜೆಪಿ ಹೈಕಮಾಂಡ್ ಯಡಿಯೂರಪ್ಪನವರನ್ನು ಮೂಲೆಗುಂಪು ಮಾಡಿದ್ದರ ಪರಿಣಾಮ ಹಲವೆಡೆ ಆದ ಸೋಲಿನ ಚುನಾವಣಾ ಫಲಿತಾಂಶದಲ್ಲೂ ಸ್ಪಷ್ಟವಾಗಿ ಗೋಚರವಾಗಿತ್ತು. ಈಗ ಅಂತಹ ಯಡಿಯೂರಪ್ಪನವರನ್ನು ಮತ್ತೆ ಮೆಚ್ಚದೆ ಗತಿಯಿಲ್ಲ ಎನ್ನುವ ಸ್ಥಿತಿಗೆ ಬಿಜೆಪಿ ಬಂದಿದೆ. ಅಷ್ಟೆಲ್ಲಾ ಅವಮಾನ ಅನುಭವಿಸಿ



ಪುಟ 6 ಕ್ಕೆ

ಜನಸಾಮಾನ್ಯರೇ ಬಹುತೇಕ ಸರಕಾರದ 'ಖಜಾನೆ ತುಂಬುವುದು', ಉಳ್ಳವರಲ್ಲ.

'ಬಿಟ್ಟಿ ಭಾಗ್ಯಗಳು' ಅವು ಬಿಟ್ಟಿಯೇನಲ್ಲ..



ಶ್ರೀಸಾಮಾನ್ಯನೇ ಜಗನ್ ಮಾನ್ಯ....
ಶ್ರೀಸಾಮಾನ್ಯನೆ ಭಗವದ್ಧನ್ಯ!" – ಕುವೆಂಪು

ಆರ್. ರಾಮಕೃಷ್ಣ

ನಮ್ಮ ಕೇಂದ್ರ ಮತ್ತು ರಾಜ್ಯ ಸರಕಾರಗಳ ಖಜಾನೆ ತುಂಬುವುದು, ಬಹುತೇಕವಾಗಿ, ನಮ್ಮ ಸಮಾಜದಲ್ಲಿ ಬಹುಸಂಖ್ಯಾತರಾದ ಬಡವರು ಮತ್ತು ಕೆಳ ಮಧ್ಯಮ ವರ್ಗ ಹಾಗೂ ಮಧ್ಯಮ ವರ್ಗದ ಜನರು ಕೊಡುವ ತೆರಿಗೆ–ಸುಂಕ–ಕಂದಾಯ–ಶುಲ್ಕಗಳಿಂದ.

'ಕೈ ಕೆಸರಾದರೆ ಬಾಯಿ ಮೊಸರು'–ಎಂಬುದು ಆದರ್ಶದ ಮಾತು. ವಾಸ್ತವವಾಗಿ ಅಂತಹ ಪರಿಸ್ಥಿತಿ ಇರಬೇಕಾಗಿತ್ತು. ಆದರೆ ಇಲ್ಲ. ಬದಲಿಗೆ 'ಯಾರ ಕೈ ಕೆಸರು!!, ಯಾರ ಬಾಯಿ ಮೊಸರು?' ಎಂಬಂತಹ ಪರಿಸ್ಥಿತಿ ಯಾವತ್ತೂ ಇದೆ. ಇದಲ್ಲದೇ, ನೋಟು ರದ್ದತಿ, ಕೊರೊನ ಲಾಕ್‌ಡೌನ್‌ಗಳು ಮುಂತಾದ ಗಂಭೀರ ಬಿಕ್ಕಟ್ಟುಗಳಿಂದ ಸಂಕಟಗಳಲ್ಲಿ ನಲುಗಿರುವ ಜನತೆಗೆ, ಸರಕಾರಗಳು ಕೊಡುತ್ತಿರುವ ಒಂದಷ್ಟು ಪರಿಹಾರಗಳು ಬದುಕು ಕಟ್ಟಿಕೊಳ್ಳಲು ಚೈತನ್ಯ ನೀಡುತ್ತವೆ ಎಂಬುದು ಸುಳ್ಳಲ್ಲ. ಆದರೆ ಈ ವಿಚಾರವಾಗಿ ನಡೆದಿರುವ ಅಪಪ್ರಚಾರಗಳ ಹಿನ್ನೆಲೆಯಲ್ಲಿ ಇಲ್ಲಿ ಹೇಗೆ ನಮ್ಮ ಸಮಾಜದ ಬಡವರೇ ಸರಕಾರಗಳಿಗೆ ಅತಿ ಹೆಚ್ಚಿನ ಆದಾಯವನ್ನು ತುಂಬಿ ಕೊಡುತ್ತಾರೆ ಎಂದು ನಿರ್ದಿಷ್ಟ ಉದಾಹರಣೆಗಳೊಂದಿಗೆ ವಿವರಿಸಲಾಗಿದೆ. ಮಧ್ಯಮ ವರ್ಗ–ಮೇಲಿನ ಮಧ್ಯಮ ವರ್ಗದ ಜನರು ಬಡವರ ಶತ್ರುಗಳಲ್ಲ. ಆದರೆ ಬಡವರು ಈ ಆರ್ಥಿಕ ವ್ಯವಸ್ಥೆಯಲ್ಲಿ ವಹಿಸುತ್ತಿರುವ ಅಮೂಲ್ಯವಾದ ಮತ್ತು ಅಗಾಧವಾದ ಪಾತ್ರವನ್ನು ಅರಿಯಬೇಕಾಗಿದೆ.

(ವಿ.ಸೂ.: ಲೇಖನದಲ್ಲಿ ಉಲ್ಲೇಖಿಸಲಾಗಿರುವ ಎಲ್ಲಾ ಸರಕುಗಳ ಬೆಲೆ-ತೆರಿಗೆ-ಸುಂಕ-ಇತ್ಯಾದಿಗಳೆಲ್ಲವೂ 2021 ರ ವರ್ಷದ್ದು. ಅದು ಕೊರೊನ ಬಿಕ್ಕಟ್ಟಿನ ಪರಿಣಾಮ ಜನರ ಬದುಕಿನ ಮೇಲೆ ತೀವ್ರವಾಗಿದ್ದ ಕಾಲ. ಅದ್ದರಿಂದಲೇ ಆ ಕಾಲದ ಉದಾಹರಣೆಗಳನ್ನೇ ಉದ್ದೇಶಪೂರ್ವಕವಾಗಿ ಪರಿಗಣಿಸಲಾಗಿದೆ. ಈ ಲೇಖನವನ್ನು ಪರಿಶೀಲಿಸಿ ಸಲಹೆಗಳನ್ನು ನೀಡಿದ ಆರ್ಥಿಕ ತಜ್ಞರಾದ ಪ್ರೊ. ಚಂದ್ರ ಪೂಜಾರಿಯವರಿಗೆ ಲೇಖಕನಾಗಿ ನಾನು ಅಭಾರಿ.)

'ಕೈ ಕೆಸರಾದರೆ ಬಾಯಿ ಮೊಸರು' ಎಂಬ ಒಂದು ಪ್ರಸಿದ್ಧ ಗಾದೆ ಮಾತು. ದುಡಿಮೆಯ ಮಹತ್ವವನ್ನು ಸಾರುವ ಗಾದೆ ಮಾತಿದು. ಆ ದೃಷ್ಟಿಯಿಂದ ನೋಡಿದಾಗ ಗಾದೆ ಮಾತು ಸರಿಯಾಗಿಯೇ ಇದೆ. ಆದರೆ ದುಡಿದು ದುಡಿದು ದೂಳಾದರೂ ದುಡಿಮೆಗೆ ತಕ್ಕ ಪ್ರತಿಫಲ ಎಂಬುದು ದುಡಿಯುವ ಜನತೆಗೆ ಸಿಗುವುದಿಲ್ಲ. ಹೀಗಾಗಿ 'ಯಾರ ಕೈ ಕೆಸರು, ಯಾರ ಬಾಯಿ ಮೊಸರು' ಎಂಬ ಪರಿಸ್ಥಿತಿ ನಮ್ಮ ಸಮಾಜದಲ್ಲಿದೆ.

ರಸ್ತೆ, ಸೇತುವೆಗಳು, ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟುವ ಕಟ್ಟಡ ಕಾರ್ಮಿಕರು, ನಗರಗಳು ಪಟ್ಟಣಗಳ ಜನರಿಗೆ ಅಗತ್ಯವಾದ ತರಕಾರಿ, ಸೊಪ್ಪು, ಕಾಳು, ಕಡಿಗಳನ್ನು ಹೊತ್ತು ತಂದು ಮಾರುಕಟ್ಟೆಗೆ ಹಾಕುವ ಹಮಾಲಿಗಳು, ಸಣ್ಣ ವ್ಯಾಪಾರಿಗಳು, ಬೆಳ್ಳಂಬೆಳಗ್ಗೆ ತಮ್ಮ ಬದುಕು ಮತ್ತು ಜೀವವನ್ನು ಪಣಕ್ಕಿಟ್ಟು, ಊರೆಲ್ಲವನ್ನೂ ಶುಚಿಗೊಳಿಸಿಟ್ಟು ಊರ ಆರೋಗ್ಯವನ್ನು ಕಾಪಾಡುವ ಪೌರ ಕಾರ್ಮಿಕರು, ಮನೆ ಕೆಲಸದವರು, ಸರಕಾರದ ಯೋಜನೆಗಳಲ್ಲೇ ಕೆಲಸ ಮಾಡುತ್ತಿರುವಾಗಲೂ, ತಿಂಗಳಿಗೆ ತೀರಾ ನಿಕೃಷ್ಟವಾದ 3 ಅಥವಾ 4 ಸಾವಿರ ರೂ. ಸಂಬಳ ಪಡೆಯುವ ಬಿಸಿಯೂಟ ನೌಕರರು, 7–8 ಸಾವಿರವಷ್ಟೇ ವೇತನ ಪಡೆಯುವ ಅಂಗನವಾಡಿ ನೌಕರರು, ಒಟ್ಟಾರೆ ಅಸಂಘಟಿತ ವಿಭಾಗದ ಅತಂತ್ರ ಬದುಕು ನಡೆಸುತ್ತಿರುವ ಜನರು ತೀರಾ ನಿಕೃಷ್ಟವಾದ ವೇತನಕ್ಕೆ ದುಡಿಯುತ್ತಿದ್ದಾರೆ. ಅವರು ಹೀಗೆ ದುಡಿಯುತ್ತಿರುವುದರಿಂದಲೇ ನಮ್ಮ ಸಮಾಜದ ಮಧ್ಯಮ ವರ್ಗ ಮತ್ತು ಅನುಕೂಲಸ್ಥ ವಿಭಾಗದ ಜನರು ತಮಗೆ ಬೇಕಾದ ಸೇವೆಗಳನ್ನು ಅತೀ ಅಗ್ಗವಾಗಿ, ಸರಕು– ಸರಂಜಾಮುಗಳನ್ನು ಸಾಕಷ್ಟು ಕಡಿಮೆ ಬೆಲೆಗೆ ಪಡೆದುಕೊಳ್ಳಲು ಸಾಧ್ಯವಾಗುತ್ತಿದೆ.

ಇನ್ನು ನಮ್ಮ ಗ್ರಾಮೀಣ ಕೂಲಿಕಾರರು–ರೈತರು, ದಲಿತರು ತಮ್ಮ ಶ್ರಮಕ್ಕೆ ಸರಿಯಾದ ಪ್ರತಿಫಲಕ್ಕಾಗಿ ಮತ್ತು ತಮ್ಮ ಬೆಳೆಗೆ ನ್ಯಾಯಬದ್ಧವಾದ ಬೆಲೆಗೆ ಹಠತೊಟ್ಟು ಕೂತರೇ ನಾವು ತಿನ್ನುವ ಆಹಾರ ಧಾನ್ಯಗಳು, ಸೊಪ್ಪು–ತರಕಾರಿಗಳ ಬೆಲೆಗಳು ಯಾವ ಘಟ್ಟವನ್ನು ಯಾವ ಮಟ್ಟವನ್ನು ಮುಟ್ಟುತ್ತವೋ ಹೇಳುವುದು ಕಷ್ಟ!! ಆದರೆ ಈ ಎಲ್ಲ ಶ್ರಮಿಕರ ಬದುಕು ಬಹುತೇಕ ಬವಣೆಗಳಿಂದ ಕೂಡಿದೆ. 'ನೋಟ್ ಬ್ಯಾನ್' ಎಂಬ ಹೊಡೆತ, ನಂತರ ಕೊರೊನ ಲಾಕ್ ಡೌನ್‌ಗಳು, ಇವುಗಳಿಂದ ಉಂಟಾದ ನಿರುದ್ಯೋಗ ಮತ್ತು ಆದಾಯ ಕುಸಿತ ಇತ್ಯಾದಿಗಳು ಬೇರೆ. ಹೀಗೆ ಕಂಗೆಟ್ಟ ಜನರ ಬಾಳಿಗೆ ಕೊಂಚವಾದರೂ ಚೈತನ್ಯ ನೀಡುವ ಯೋಜನೆಗಳು 200 ಯೂನಿಟ್‌ವರೆಗಿನ ಉಚಿತ ವಿದ್ಯುತ್, ಕುಟುಂಬದ ಮಹಿಳಾ ಮುಖ್ಯಸ್ಥೆಯ ಖಾತೆಗೆ 2,000 ರೂ. ನಗದು, ಮಹಿಳೆಯರಿಗೆ ಬಸ್‌ಗಳಲ್ಲಿ ಉಚಿತ ಪ್ರಯಾಣದ ಅವಕಾಶ, ಬಡವರಿಗೆ ತಲಾ 10 ಕೆ.ಜಿ. ಉಚಿತ ಅಕ್ಕಿ ಅಥವಾ ಹಣ, ನಿರುದ್ಯೋಗಿ ಯುವಜನರು ಉದ್ಯೋಗ ಪಡೆದುಕೊಳ್ಳಲು ಕೊಂಚ ನೆರವು ನೀಡುವ ಭತ್ಯೆ. ಆದರೆ ರಾಜ್ಯದಲ್ಲಿ ಹೊಸ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಬಡ ಜನರಿಗೆ ಕೊಡುತ್ತಿರುವ ಭಾಗ್ಯ, ಗ್ಯಾರಂಟಿಗಳ ಕುರಿತು ವ್ಯಂಗ್ಯ ಮಾಡಲಾಗುತ್ತಿದೆ. ಇವೆಲ್ಲಾ ಬಿಟ್ಟಿ ಭಾಗ್ಯಗಳಾಗಿದ್ದು, ಸರಕಾರ ಖಜಾನೆಯನ್ನು ಖಾಲಿ ಮಾಡಿ, ದಿವಾಳಿ ಎಬ್ಬಿಸುತ್ತವೆ ಎಂದು ಬೊಬ್ಬೆ ಹೊಡೆಯಲಾಗುತ್ತಿದೆ. ಅದು ಜಿ.ಎಸ್.ಟಿ. ತೆರಿಗೆ, ಕರ, ಸುಂಕ, ಕಂದಾಯ, ಶುಲ್ಕ ಹೀಗೆ ಹೆಸರು ಏನೇ ಇರಲಿ, ವೈಜ್ಞಾನಿಕವಾಗಿ ಪರಿಶೀಲಿಸಿದರೆ ನಮ್ಮ ಆರ್ಥಿಕ–ಸಾಮಾಜಿಕ ವ್ಯವಸ್ಥೆಯಲ್ಲಿ ಬಡವರೇ ಅತಿ ಹೆಚ್ಚು ಪಾಲು ಕೊಡುತ್ತಾರೆ ಎನ್ನುವುದು ಕಂಡು ಬರುತ್ತದೆ. ಅಷ್ಟು ಮಾತ್ರವಲ್ಲ, ಶ್ರೀಮಂತರು, ಹಣವಂತ ವಿಭಾಗಗಳು, ದೊಡ್ಡ ಉದ್ದಿಮೆದಾರರು ನಮ್ಮ ಆರ್ಥಿಕ ವ್ಯವಸ್ಥೆಯಲ್ಲಿ ಬಾರಿ ರಿಯಾಯಿತಿ, ವಿನಾಯತಿ ಪಡೆಯುತ್ತಿದ್ದಾರೆ ಹಾಗೂ ಸಾಲ ಮನ್ನಾದಂತಹ ಕ್ರಮಗಳ ಮೂಲಕ ಅಗಾಧ ಲಾಭವನ್ನು ಪಡೆಯುತ್ತಾರೆ. ಈ ವಿಷಯವನ್ನು ನಿರ್ದಿಷ್ಟ ಉದಾಹರಣೆಗಳೊಂದಿಗೆ ಪರಿಶೀಲಿಸೋಣ.

ಬಿಎಂಟಿಸಿ ಸಂಸ್ಥೆಗೆ ಯಾರಿಂದ ಲಾಭ–ಯಾರಿಂದ ನಷ್ಟ

ಮಾಮೂಲಿ ಬಸ್ಸಿನ ತಿಂಗಳ ಪಾಸು ದರ – 1,050/–

ಎಸಿ ಬಸ್ – ತಿಂಗಳ ಪಾಸು – 1,500/–

ಮಾಮೂಲಿ ಬಸ್ಸಿನ ದಿನ ಪಾಸು ದರ – 70/–

ಎಸಿ ಬಸ್ – ದಿನದ ಪಾಸು ದರ – 100/–


ಎಸಿ ಬಸ್ಸುಗಳು ಖಾಲಿ ಖಾಲಿ ಓಡುವ ಸಂದರ್ಭಗಳು ಜಾಸ್ತಿ. ಅವು ಸಾಮಾನ್ಯವಾಗಿ ಕಿಕ್ಕಿರಿದು ತುಂಬುವುದಿಲ್ಲ. ಅದರಿಂದ ಆದಾಯ ಕಡಿಮೆ. ಬಹಳ ಸಾರಿ ಸಂಸ್ಥೆಗೆ ನಷ್ಟವನ್ನೇ ಮಾಡುತ್ತವೆ. ಆದರೆ ಮಾಮೂಲಿ ಬಸ್ಸಿನಲ್ಲಿ ಜನರು ಕುಂತು, ನಿಂತು, ನೇತು ಬಿದ್ದು ಪ್ರಯಾಣಿಸುತ್ತಾರೆ.

ಮೇಲ್ನೋಟಕ್ಕೆ ನೋಡಿದಾಗ ಮಧ್ಯಮ ವರ್ಗ ಹೆಚ್ಚು ಹಣ ಕೊಡುವಂತೆ ಕಾಣುತ್ತದೆ. ಮಾಮೂಲಿ ಬಸ್ಸುಗಳಲ್ಲಿ ಬಹಳಷ್ಟು ಸಾರಿ ಒಂದೇ ಬಸ್ಸಿನಲ್ಲಿ ಎರಡು ಬಸ್ಸಿನ ಜನರು ಕಿಕ್ಕಿರಿದು ತುಂಬಿಕೊಂಡು ಹೆಚ್ಚು ಹಣ ತೆರುತ್ತಾರೆ. ಎಸಿ ಬಸ್ಸಿನ ಪೂರ್ತಿ ಖರ್ಚನ್ನು ಬಿಎಂಟಿಸಿ ಆ ಬಸ್ಸಿನ ಪ್ರಯಾಣಿಕರಿಂದ ವಸೂಲಿ ಮಾಡುವುದಿಲ್ಲ. ಒಟ್ಟಾರೆಯಾಗಿ ನೋಡಿದಾಗ ಕಿಕ್ಕಿರಿದು ತುಂಬಿದ ಮಾಮೂಲಿ ಬಸ್ಸಿನ ಜನರು ಎಸಿ ಬಸ್ಸಿನ ಪ್ರಯಾಣಿಕರಿಗಿಂತ ಹೆಚ್ಚು ಹಣವನ್ನು ಬಿಎಂಟಿಸಿ ಗೆ ಕೊಡುತ್ತಾರೆ. ಈ ಕೆಳಗಿನ ಪತ್ರಿಕಾ ವರದಿ ಆಧರಿಸಿ ಈ ಅಂಶವನ್ನು ದೃಢಪಡಿಸಿಕೊಳ್ಳಬಹುದು.

((The Economic Times, 12, July, 2023. Report.

(The utility's 6,800 ordinary and air conditioned buses run almost 11.48 lakh kilo metre a day, catering to over 45 lakh passengers. This leads to a daily operational loss of Rs 2.5 crore while the ticket collection is at Rs 5 crore. The operational loss of air-conditioned buses is much more than that of ordinary buses. The BMTC spends Rs 80.29 to run an AC bus for a kilometre while it earns Rs 63.95." Says.))





'ಪ್ಲಾಸ್ಟಿಕ್ ಬಕೆಟ್' ಬಡವರೇ ಹೆಚ್ಚು ತೆರಿಗೆ ಕೊಡುವುದು





ಮೊದಲನೇ ಕ್ವಾಲಿಟಿ ಬಕೆಟ್, ಎರಡನೇ ಕ್ವಾಲಿಟಿ ಬಕೆಟ್ – (ಸಾಂಕೇತಿಕ ಚಿತ್ರಗಳು.)

16 ಲೀಟರ್ ಸಾಮರ್ಥ್ಯದ ಒಂದು ಪ್ಲಾಸ್ಟಿಕ್ ಬಕೆಟ್ ('ಫಸ್ಟ್ ಕ್ವಾಲಿಟಿ') ಬೆಲೆ – 259/– ರೂ. (ಬೆಲೆ 2021 ರದ್ದು) ಅದೇ 16 ಲೀಟರ್‌ನ ಸಾಮರ್ಥ್ಯದ ಪ್ಲಾಸ್ಟಿಕ್ ಬಕೆಟ್ 'ಸೆಕೆಂಡ್ ಕ್ವಾಲಿಟಿ' – 129/– ರೂ. ಯಾರು ಹೆಚ್ಚಿಗೆ ತೆರಿಗೆ ಕೊಡುವವರು ನೋಡೋಣ. ಮೇಲು ನೋಟಕ್ಕೆ ಮೊದಲನೇ ದರ್ಜೆ ಬಕೆಟ್ ಕೊಂಡವರು ಹೆಚ್ಚು ತೆರಿಗೆ ಕೊಟ್ಟಂತೆ ಎಲ್ಲರಿಗೂ ಕಾಣುತ್ತದೆ.

ಆದರೆ 'ಫಸ್ಟ್ ಕ್ವಾಲಿಟಿ' ಬಕೆಟ್ ಕೊಳ್ಳುವವರಿಗೆ, ಬಳಸುವವರಿಗೆ ಗೊತ್ತು, ಆ ಬಕೆಟ್ ಕನಿಷ್ಠ 10 ರಿಂದ 15 ವರ್ಷ ಬಾಳಿಕೆ ಬರುತ್ತದೆ. ಆದರೆ ಮೊದಲನೇ ದರ್ಜೆ ಬಕೆಟ್ ಕೊಳ್ಳುವಷ್ಟು ಹಣವಿಲ್ಲದ, ದಿನ ನಿತ್ಯ ಹೊಟ್ಟೆ ತುಂಬಿಸಿಕೊಳ್ಳುವುದೇ ಕಷ್ಟವಾದ ಬಡವರು ಕೊಳ್ಳುವ 2 ನೇ ಕ್ವಾಲಿಟಿ ಬಕೆಟ್ ಒಂದು, ಒಂದೂವರೆ ಅಥವಾ ಎರಡು ವರ್ಷಕ್ಕೇ ಹಾಳಾಗುತ್ತದೆ. ಹೀಗಾಗಿ, ಬಡವರು 10 ವರ್ಷಗಳಲ್ಲಿ ಕನಿಷ್ಟ 5 ಬಕೆಟ್ ಕೊಂಡುಕೊಳ್ಳುತ್ತಾರೆ. ಅಂದರೆ ಪ್ಲಾಸ್ಟಿಕ್ ಬಕೆಟ್ ವಿಷಯದಲ್ಲಿ ಸ್ವಲ್ಪ ಅನುಕೂಲಸ್ಥರು 10 ವರ್ಷಗಳಲ್ಲಿ ಕೊಡುವ ಬಕೆಟ್ ತೆರಿಗೆ 56.00/– ರೂಪಾಯಿ. ಬಡವರು 10 ವರ್ಷಗಳಲ್ಲಿ ಕೊಡುವ ಬಕೆಟ್ ತೆರಿಗೆ 130.00/– ರೂಪಾಯಿ. ಯಾರು ಹೆಚ್ಚು ತೆರಿಗೆ ಕೊಟ್ಟರು?



ಪೆಟ್ರೋಲ್–ಡೀಸೆಲ್ ಮೇಲೆ ತೆರಿಗೆ ಹೊರೆ ಸಾಮಾನ್ಯರಿಗೆ ಮತ್ತೆ ಮತ್ತೆ ಬರೆ

ಒಂದು ಲೀಟರ್ ಪೆಟ್ರೋಲ್‌ನ ಮೂಲ ಬೆಲೆ 44.4 ರೂ. (ಒಟ್ಟು ಬೆಲೆಯ ಶೇ.42)

ವಿವಿಧ ತೆರಿಗೆಗಳು ಸೇರಿ ಬೆಲೆ ರೂ. 105.5 (ಒಟ್ಟು ಬೆಲೆಯಲ್ಲಿ 58 ಶೇ. ತೆರಿಗೆ).

ಒಂದು ಲೀಟರ್ ಪೆಟ್ರೋಲ್‌ಗೆ ಜನ ಕೊಟ್ಟ ಒಟ್ಟು ತೆರಿಗೆ ರೂ. 57.20. ಡೀಸೆಲ್‌ದೂ ಬಹುತೇಕ ಇಂತದ್ದೇ ಕತೆ. ಪೆಟ್ರೋಲ್ ಡೀಸೆಲ್ ಬೆಲೆ ಹೆಚ್ಚಿದರೆ ಅದು ಇಡೀ ಆರ್ಥಿಕತೆಯ ಮೇಲೆ ಪರಿಣಾಮ ಬೀರುತ್ತದೆ. ಶ್ರೀಸಾಮಾನ್ಯರು ಬಳಸುವ ಎಲ್ಲ ಅಗತ್ಯ ವಸ್ತುಗಳ ಬೆಲೆಗಳ ಏರಿಕೆಗೆ ಕಾರಣವಾಗುತ್ತದೆ.

Table 1: Break-up of petrol and diesel retail prices in Delhi (as on October 16, 2021)

ಪೆಟ್ರೋಲಿಯಂ ಸರಕು	ಪೆಟ್ರೋಲ್		ಡೀಸೆಲ್	
	ರೂ. ಲೀಟರ್‌ಗೆ	ಚಿಲ್ಲರೆ ಮಾರಾಟದ ಶೇ.ವಾರು ಬೆಲೆ.% of retail price	ರೂ. ಲೀಟರ್‌ಗೆ	ಚಿಲ್ಲರೆ ಮಾರಾಟದ ಶೇ.ವಾರು ಬೆಲೆ.% of retail price
ಡೀಲರ್‌ಗಳಿಗೆ ನಿಗದಿಯಾದ ಬೆಲೆ.	ರೂ. 44.4	42%	ರೂ.46.0	49%
ಕೇಂದ್ರ ಸರಕಾರದ ತೆರಿಗೆ (ಎಕ್ಸೈಸ್ ಡ್ಯೂಟಿ.)	ರೂ.32.9	31%	ರೂ.31.8	34%
ಡೀಲರ್‌ಗಳ ಕಮೀಷನ್(ಸರಾಸರಿ)	ರೂ. 3.9	4%	ರೂ.2.6	3%
ರಾಜ್ಯ ಸರಕಾರದ (ವ್ಯಾಟ್) ಮಾರಾಟ ತೆರಿಗೆ	ರೂ. 24.3	23%	ರೂ.13.8	15%
ಪೆಟ್ರೋಲ್–ಡೀಸೆಲ್ ಮೇಲಿನ ಒಟ್ಟು ತೆರಿಗೆ. ಹಾಗೂ ಶೇಕಡವಾರು ಲೆಕ್ಕದಲ್ಲಿ.	ರೂ. 57.20	58%	ರೂ. 45.00	52%
ಗ್ರಾಹಕರಿಗೆ ಬೆಲೆ	**105.5**	**100%**	**94.2**	**100%**

Note: Delhi levies 30% VAT on petrol and 16.75% VAT on diesel.

ತದ್ವಿರುದ್ಧ ಸಾಕ್ಷ್ಯ– ಎರಡು

ಕಾರ್ಪೋರೇಟ್ ಕಂಪನಿಗಳಿಗೆ ತೆರಿಗೆ ವಿನಾಯತಿ–ತೆರಿಗೆ ರಿಯಾಯತಿಗಳು

ಕೊರೊನ ಬಿಕ್ಕಟ್ಟಿಗೆ ಮುಂಚೆಯೂ ಶ್ರೀಮಂತ, ಬಂಡವಾಳಗಾರ ವಿಭಾಗಗಳಿಗೆ ಸಾಕಷ್ಟು ತೆರಿಗೆ ವಿನಾಯಿತಿ ಇತ್ತು. (ಕೊರೊನ ಬಿಕ್ಕಟ್ಟಿನ ಕಾಲದಲ್ಲೂ ಇದು ಅಬಾಧಿತವಾಗಿ ಮುಂದುವರಿಯಿತು.) ಈ ಕೆಳಗಿನ ಸಾಕ್ಷ್ಯ ನೋಡಿ.

23, ಸೆಪ್ಟೆಂಬರ್ 2019. 'ಇನ್ವೆಸ್ಟ್ ಇಂಡಿಯಾ' ಪತ್ರಿಕೆ ಸಂಪಾದಕೀಯ ಕೆಳಗಿದೆ.

'ಭಾರತ ಸರಕಾರವು ಕಾರ್ಪೋರೇಟ್ ತೆರಿಗೆಯನ್ನು ಶೇ. 10 ಕಡಿತ ಮಾಡಿದೆ, 1991 ರ ನಂತರದ ಅತ್ಯಂತ ದಿಟ್ಟ ನಡೆ ..' ಎನ್ನುತ್ತದೆ ಸಂಪಾದಕೀಯ. (ವಾಸ್ತವವಾಗಿ ತೆರಿಗೆ 30 ಶೇ. ಇದ್ದದ್ದರಲ್ಲಿ ಶೇ. 10 ಅನ್ನು ಕಡಿಮೆ ಮಾಡಿ ತೆರಿಗೆಯನ್ನು ಶೇ. 20 ಕ್ಕೆ ಇಳಿಸಲಾಗಿದೆ. ಅಂದರೆ ಇದ್ದ ತೆರಿಗೆಯಲ್ಲಿ ಸುಮಾರು 33.3 ಶೇ. ಕಡಿತ. ಇದು ದೊಡ್ಡ ಪ್ರಮಾಣದ ಕಡಿತ. ಆದರೆ ಬರಹ ವಿಷಯವನ್ನು ಸರಿಯಾಗಿ ಬಿಂಬಿಸುತ್ತಿಲ್ಲ. ಶೀರ್ಷಿಕೆಯಲ್ಲಿ ಕೇವಲ ಶೇ. 10 ತೆರಿಗೆ ಕಡಿತ ಎಂಬಂತೆ ಬಿಂಬಿಸಲಾಗಿದೆ.)





ಜೀವ ರಕ್ಷಕ ಔಷಧಗಳನ್ನೂ ಬಿಟ್ಟಿಲ್ಲ ಜಿಎಸ್‌ಟಿ ತೆರಿಗೆ ಗಾಯಕ್ಕೆ ಹಾಕುವ ಬ್ಯಾಂಡೇಜಿಗೂ ಶೇ.12 ತೆರಿಗೆ ಹೃದಯದ 'ಸ್ಟಂಟ್', 'ಡಯಾಲಿಸಿಸ್' ಸಾಧನಕ್ಕೂ ಸುಂಕದ ರೇಜಿಗೆ

ಈ ಕೆಳಗಿನ ಸುದ್ದಿಯ ವಿವರಗಳನ್ನು ಪೂರ್ತಿಯಾಗಿ ನೋಡಿದರೆ (ಇಲ್ಲಿ ಪಟ್ಟಿಯನ್ನು ಸಂಕ್ಷಿಪ್ತಗೊಳಿಸಲಾಗಿದೆ) ಗೊತ್ತಾಗುತ್ತದೆ, ಜನರು ಜೀವ ರಕ್ಷಕ ಔಷಧಗಳಿಗೂ ಸಾಕಷ್ಟು ಜಿಎಸ್‌ಟಿ ಕಟ್ಟುತ್ತಾರೆ. ಸಕ್ಕರೆ ಕಾಯಿಲೆ ಇರುವ ರೋಗಿಗಳು ಬಳಸುವ ಇನ್‌ಸುಲಿನ್‌ಗೆ, ಅಂಗವಿಕಲರು, ವೃದ್ಧರು ಬಳಸುವ ಗಾಲಿ ಖುರ್ಚಿ, ಹೃದಯದ ತೊಂದರೆ ಇರುವ ರೋಗಿಗಳಿಗೆ ಅಳವಡಿಸುವ 'ಸ್ಟಂಟ್'ಗಳಿಗೆ, ಮೂತ್ರಪಿಂಡ ವಿಫಲವಾದ ರೋಗಿಗಳ ರಕ್ತಶುದ್ದಿಗೆ ಬಳಸುವ ಉಪಕರಣಗಳ ಮೇಲೆ ಶೇ. 5 ತೆರಿಗೆ ಇದೆ. ರೋಗಿಗಳ ಗಾಯದ ಚಿಕಿತ್ಸೆ ಬಳಸುವ ಬ್ಯಾಂಡೇಜ್ ಮೇಲೆ, ವೈದ್ಯಕೀಯ ಬಳಕೆಯ ಆಕ್ಸಿಜನ್ ಮೇಲೆ ಶೇ. 12 ರಷ್ಟು ಜಿಎಸ್‌ಟಿ ಇದೆ. ಶಸ್ತ್ರ ಚಿಕಿತ್ಸಾ ಕೋಣೆಗಳಲ್ಲಿ ಬಳಸುವ ಟೇಬಲ್‌ಗಳು, ರೋಗಿಗಳ ವಿಶೇಷ ಹಾಸಿಗೆಗಳು ಇವುಗಳ ಮೇಲೆ ಶೇ. 18 ರಷ್ಟು ಜಿ.ಎಸ್.ಟಿ. ತೆರಿಗೆ ಇದೆ.

Business Standard

GST Council Announces Tax reduction On Life Saving Drugs, Says Two GOMs Will Look Into GST Regime Capital Market Last Updated at September 17, 2021 21:31 IST
Updated on December 29, 2021 Atul MittalGST Articles

5% Rate of GST on Medicines and other Medical Supplies
Human/animal blood vaccines
Diagnostic kits for detecting all types of hepatitis
Insulin, Artificial limbs, wheel chairs, crutches, walking frames, etc.
Artificial kidneys as well as disposable micro barriers/sterilized dialyzers of artificial kidneys
Coronary stents/stent systems for use with cardiac catheters

12% Rate of GST on Medicines and other Medical Supplies
Bandage, wadding, gauge and similar types of items including dressings, poultices and adhesive plasters for use in surgical, veterinarian, dental or medical procedures.
Pharmaceutical products such as sterile surgical catgut, sterile absorbable surgical/dental yarns, sterile tissue adhesives for surgical wound closure, sterile luminaria, sterile laminaria tents, waste pharmaceuticals, etc.
Diabetic foods, blood glucose monitoring system (glucometer) and test strips.
Medical grade oxyge`

ತದ್ವಿರುದ್ಧ ಸಾಕ್ಷ್ಯ – ಒಂದು

ಶ್ರೀಮಂತರಿಗೆ ಉಳ್ಳವರಿಗೆ ಲಕ್ಷಾಂತರ ಕೋಟಿ ಬ್ಯಾಂಕ್ ಸಾಲ ಮನ್ನಾ

ರಾಷ್ಟ್ರೀಕೃತ ಬ್ಯಾಂಕುಗಳ ಕಡಿಮೆ ಬಡ್ಡಿಯ ಸಾಲ ಬಡವರಿಗೆ ಬಹಳಷ್ಟು ಸಿಗುವುದೇ ಇಲ್ಲ. ಕಾರಿನ ಸಾಲ ಸಿಕ್ಕಷ್ಟು ಸುಲಭವಾಗಿ ತಳ್ಳುವ ತರಕಾರಿ ಗಾಡಿಗೆ ಸಾಲ ಸಿಗುವುದಿಲ್ಲ. ಇಂತಹ ಬಡವರಿಗೆ ಧರ್ಮಸ್ಥಳ ಮಂಜುನಾಥ ಸಂಘದ ದುಬಾರಿ ಬಡ್ಡಿ ಸಾಲವೇ ಗತಿ ಅಥವಾ ಖಾಸಗಿ ಲೇವಾದೇವಿಗಾರರ ದುಬಾರಿ ಬಡ್ಡಿ ಸಾಲವೇ ಗತಿ. ಮೀಟರ್ ಬಡ್ಡಿ, ಬಡ್ಡಿಗೆ ಬಡ್ಡಿ, ಚಕ್ರ ಬಡ್ಡಿ ಕಟ್ಟುವವರು ಬಡವರೇ. ನೀರವ್ ಮೋದಿ, ವಿಜಯ್ ಮಲ್ಯನಂತಹವರು, ಸಾವಿರಾರು ಕೋಟಿ ರೂಪಾಯಿಗಳ ಸಾಲ ಪಡೆದು ವಿದೇಶಗಳಿಗೆ ಓಡಿ ಹೋಗುತ್ತಾರೆ. ಇಂತಹ ಜನರಿಗೆ, ಸರಕಾರಗಳೇ ಎನ್.ಪಿ.ಎ., ಕೆಟ್ಟ ಸಾಲ ಅಥವಾ ವಸೂಲಾಗದ ಸಾಲ ಇತ್ಯಾದಿ ಹೆಸರು ಕೊಟ್ಟು, ಲಕ್ಷಾಂತರ ಕೋಟಿ ರೂಪಾಯಿಗಳ ಸಾಲ ಮನ್ನಾ ಮಾಡುತ್ತವೆ.

2020–2021 ರ ಹಣಕಾಸು ವರ್ಷದಲ್ಲಿ ಎನ್.ಪಿ.ಎ. ಎಂಬ ಹೆಸರಿನಲ್ಲಿ ಅಂದರೆ ಕೆಟ್ಟ ಸಾಲ, ಅಥವಾ ವಾಪಸ್ ಬರದ ಸಾಲ ಎಂದು ಶ್ರೀಮಂತ ಉದ್ಯಮಿಗಳು ಮತ್ತು ಹಣವಂತರ 1.53 ಲಕ್ಷ ಕೋಟಿಯಷ್ಟು ರಾಷ್ಟ್ರೀಕೃತ ಬ್ಯಾಂಕುಗಳ ಸಾಲವನ್ನು ಮನ್ನಾ ಮಾಡಲಾಗಿದೆ ಎನ್ನುತ್ತವೆ ಸರಕಾರದ್ದೇ ಅಧಿಕೃತ ವರದಿಗಳು. 2014–15 ರ ಹಣಕಾಸು ವರ್ಷದಿಂದೀಚೆಗೆ ಒಟ್ಟಾರೆ 14.56 ಲಕ್ಷ ಕೋಟಿ ರೂಪಾಯಿಗಳನ್ನು ಇದೇ ರೀತಿ ಮನ್ನಾ ಮಾಡಲಾಗಿದೆ.

ಹಿರಿಯ ಹೋರಾಟಗಾರ ಕಾಮ್ರೇಡ್ ಫಕೀರಪ್ಪ ಹೋತನಳ್ಳಿ ಇನ್ನಿಲ್ಲ



ಹಾವೇರಿ ಜಿಲ್ಲೆ ಹಾನಗಲ್ ತಾಲೂಕಿನಲ್ಲಿ ರೈತರ ಭೂಮಿಗಾಗಿ ನಡೆದ ಹೋರಾಟದ ನೇತೃತ್ವ ವಾಹಿಸಿದ್ದ, ಆ ಸಂದರ್ಭದಲ್ಲಿ ಸಿಪಿಐ(ಎಂ) ಪಕ್ಷದ ಪ್ರಮುಖ ನಾಯಕರಾಗಿದ್ದ ಕಾಮ್ರೇಡ್ ಫಕ್ಕಿರಪ್ಪ ಹೋತನಹಳ್ಳಿ ಅವರು ಅನಾರೋಗ್ಯದಿಂದ ಇದೇ ನವೆಂಬರ್ 9, 2023 ರಂದು ನಿಧನರಾಗಿದ್ದಾರೆ. ಅತ್ಯಂತ ಆಕರ್ಷಕವಾಗಿ ಜನರ ಮನ ಮುಟ್ಟುವಂತೆ ಮಾತನಾಡುತ್ತಿದ್ದ ಜನಪ್ರಿಯ ನಾಯಕರಾಗಿದ್ದರು.

ಈ ಸಂದರ್ಭದಲ್ಲಿ ಅವರ ವ್ಯಕ್ತಿತ್ವವನ್ನು ಸ್ಮರಿಸಿರುವ ಆ ಚಳುವಳಿಯ ಒಡನಾಡಿಯಾಗಿದ್ದ ಕಾಂ. ಜಿ.ಎನ್.ನಾಗರಾಜ್ ರವರು ಹೋತನಳ್ಳಿಯವರು ಬರೆದಿಟ್ಟ ಮೃತ್ಯು ವಿಲ್ ಬಗ್ಗೆ ಪ್ರಸ್ತಾಪಿಸಿದ್ದಾರೆ. 'ಇಂದು ನಿಧನರಾದ ಹಾನಗಲ್ ತಾಲ್ಲೂಕಿನ ಅಕ್ಕಿ ಆಲೂರು ಗ್ರಾಮದ ಬಿರ್ಲಾ ಕಂಪನಿ ವಿರುದ್ಧ ಹೋರಾಡಿದ ರೈತ ಹೋರಾಟಗಾರ ಫಕೀರಪ್ಪ ಹೋತನಹಳ್ಳಿಯವರದು ಈ ವಿಲ್. "ನನ್ನ ದೇಹವನ್ನು ಆಸ್ಪತ್ರೆಗೆ ಒಪ್ಪಿಸಿ. ತಿಥಿ ಮಾಡಬೇಡಿ.

ಶೋಷಣೆ, ಸುಲಿಗೆ, ಅಸಮಾನತೆ, ಕೋಮುವಾದ ಅಸಹನೆಯಿಂದ ಕೂಡಿದ ಈ ವ್ಯವಸ್ಥೆ ವಿಧಿಸುವ ತಿಥಿ ಬೇಡ.

ನನ್ನ ಎಲ್ಲ ಫೋಟೋಗಳನ್ನು, ಚಿತ್ರಗಳನ್ನೂ ಸುಟ್ಟುಬಿಡಿ.

ನಗು ನಗುತ್ತಾ ಕಳಿಸಿ ಕೊಡಿ.


ನನ್ನ ಸಾವಿನ ನಂತರದ ಶವ ಸಾಗಿಸಲು ನಾನು ಹಣ ಇಡಲು ಸಾಧ್ಯವಾಗಿಲ್ಲ. ಆಸ್ಪತ್ರೆಯದೇ ಗಾಡಿ ತರಿಸಿ ದೇಹವನ್ನು ಕಳಿಸಿಕೊಡಿ."

ಮಲೆನಾಡಿನ ಫಲವತ್ತಾದ ಸರ್ಕಾರಿ ಭೂಮಿಯನ್ನು ಭೂಹೀನರಿಗೆ ನೀಡದೆ ಬಿರ್ಲಾನಿಗೆ ಮುಡುಪಾಗಿಟ್ಟದ್ದರ ವಿರುದ್ಧ ಹೋರಾಡಿ ಸಾವಿರಾರು ಕೂಲಿಕಾರರಿಗೆ ಭೂಮಿ ದಕ್ಕಲು ಶ್ರಮಿಸಿದರು. ಹಿಂಡಲಗಾ ಜೈಲಿಗೆ ಅಟ್ಟಲ್ಪಟ್ಟರು.

ಇವರು ಕರ್ನಾಟಕ ಪ್ರಾಂತ ರೈತ ಸಂಘದ ನಾಯಕರಾಗಿದ್ದರು. ನಂತರ ಪ್ರಾಂತ ಕೃಷಿ ಕೂಲಿಕಾರರ ರಾಜ್ಯ ನಾಯಕರೂ ಆಗಿದ್ದರು.

ಸಿಪಿಐಎಂ ಸದಸ್ಯರಾಗಿದ್ದರು. ಅವರಿಗೆ ಭಾವಪೂರ್ಣ ಕೆಂಪು ನಮನಗಳು ಎಂದು ಅವರು ಸ್ಮರಿಸಿದ್ದಾರೆ.

ಇದೇ ನವೆಂಬರ್ 9 ರಂದು ಸಭೆ ಸೇರಿದ್ದ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಸಭೆಯು ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸಿತು.



ಬಿಜೆಪಿ: ಅವಕಾಶಗಳ ಹುಡುಕಾಟದಲ್ಲಿ...... ಪುಟ 3 ರಿಂದ

ಯಡಿಯೂರಪ್ಪನವರು ಇನ್ನು ತಮಗಂತೂ ಭವಿಷ್ಯ ಇಲ್ಲ ಎನ್ನುವುದನ್ನು ಕಂಡುಕೊಂಡು ಈಗ ಇಡಿಯಾಗಿ ಅವರ ಮಕ್ಕಳ ರಾಜಕೀಯ ಸುಭದ್ರತೆಗೆ ಎಲ್ಲವನ್ನು ಸಹಿಸಿಕೊಂಡು ಹೆಣಗುತ್ತಿದ್ದಾರೆ! ಮತ್ತೆ ಕೇಂದ್ರದಲ್ಲಿ ಅಧಿಕಾರಕ್ಕೆ ಬರಲೇಬೇಕೆಂದು ನಿರ್ಧರಿಸಿರುವ ಬಿಜೆಪಿಯು ಕರ್ನಾಟಕದಲ್ಲಿ ದೂರ ಸರಿದಿರುವ ಲಿಂಗಾಯಿತರನ್ನು ಹೇಗಾದರೂ ಮಾಡಿ ಮತ್ತೆ ಸೆಳೆದುಕೊಳ್ಳದೆ ವಿಧಿಯಲ್ಲ ಎನ್ನುವ ತೀರ್ಮಾನಕ್ಕೆ ಬಂದಿದೆ. ಹಾಗಾಗಿ ಯಡ್ಯೂರಪ್ಪನವರ ಸಂಪನ್ಮೂಲ, ಶಕ್ತಿ, ಪ್ರಭಾವ ಮತ್ತು ಅವರ ಬಣವನ್ನು ಆ ಮೂಲಕ ಲಿಂಗಾಯತರನ್ನು ಸೆಳೆಯಲು ಬಿ ವೈ ವಿಜಯೇಂದ್ರ ರವರನ್ನು ರಾಜ್ಯದ ಅಧ್ಯಕ್ಷನನ್ನಾಗಿ ಘೋಷಿಸಿದೆ.

ಹೌದು! ಸದಾನಂದ ಗೌಡರನ್ನು ದೆಹಲಿಗೆ ಕರೆಸಿದ್ಯಾಕೆ? ಭೇಟಿ ಮಾಡದೆ ಹಾಗೆ ವಾಪಸು ಕಳಿಸಿದ್ದೇಕೆ? ಮತ್ತೆ ಈಗ ದೆಹಲಿಗೆ ಬಂದು ಭೇಟಿ ಮಾಡಿ ಎಂದು ಹೇಳಿದ್ಯಾಕೆ? ಮತ್ತು ಗೌಡರು ಅಲ್ಲಿಗೆ ಹೋಗದೆ ಇಲ್ಲೇ ಉಳಿದಿದ್ದು ಯಾಕೆ? ಇಂತಹ ಪ್ರಶ್ನೆಗಳಿಗೆ ಒಂದು ಸ್ಪಷ್ಟ ಸೂಚನೆ ಈಗೀಗ ಕಾಣಿಸಿಕೊಳ್ಳುತ್ತಿದೆ! ಸದಾನಂದ ಗೌಡರು ತಾವೇ ಮಾಧ್ಯಮಗೋಷ್ಠಿ ಯೊಂದನ್ನು ಕರೆದು ಸಕ್ರಿಯ ರಾಜಕೀಯದಿಂದ ನಿವೃತ್ತಿಯಾಗುವುದಾಗಿಯೂ, ಪಕ್ಷದ ಸಂಘಟನಾ ಕೆಲಸಗಳಿಗೆ ತಮ್ಮನ್ನು ತೊಡಗಿಸಿಕೊಳ್ಳುವುದಾಗಿಯೂ ಪ್ರಕಟಿಸಿದ್ದಾರೆ! ಇದೇ ಮಾತನ್ನು ದೆಹಲಿಗೆ ಹೋಗಿ ಹೈಕಮಾಂಡ್ ನಿಂದ ಹೇಳಿಸಿಕೊಂಡು ಬಂದು ಪ್ರಕಟಿಸಿದರೆ ತೀರಾ ಅವಮಾನಕರ ಎಂದು ಭಾವಿಸಿ, ತಾವಾಗಿಯೇ ಘೋಷಿಸಿದ್ದಾರೆ ಎಂದು ಹೇಳಲಾಗುತ್ತದೆ. ಸ್ವತಃ ಯಡಿಯೂರಪ್ಪನವರೇ ಹೈಕಮಾಂಡ್ ನ ಸೂಚನೆಯನ್ನು ಅರಿತ ಗೌಡರು ಈ ತೀರ್ಮಾನಕ್ಕೆ ಬಂದಿದ್ದಾರೆ ಎಂದು ಹೇಳಿಬಿಟ್ಟಿದ್ದಾರೆ. ಇನ್ನು ಸದಾನಂದ ಗೌಡರಿಗೆ ಉಳಿದ ಮಾರ್ಗವಾದರೂ ಏನು? ಮುಂದಿನ ಲೋಕಸಭಾ ಚುನಾವಣೆಯಲ್ಲಿ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದಿಂದ ಅಭ್ಯರ್ಥಿಯಾಗುವ ಸಾಧ್ಯತೆಗಳೇ ಇಲ್ಲವಾಗಿದೆ. ಇವರು ಮಾತ್ರವಲ್ಲ, ಕರ್ನಾಟಕದ ಒಟ್ಟು 11 ಜನ ಹಾಲಿ ಸಂಸತ್ ಸದಸ್ಯರಿಗೆ ಟಿಕೆಟ್ ನೀಡಲಾಗುವುದಿಲ್ಲ ಎನ್ನುವ ಸುದ್ದಿಗಳು ಮಾಧ್ಯಮಗಳ ಮೂಲಕ ತೇಲಿಸಲಾಗಿದೆ. ಇದರ ಪರಿಣಾಮ ಏನಾಗುತ್ತೆ, ನಿರ್ಗಮಿಸುವವರು ಏನು ಮಾಡಬಹುದು ಎನ್ನುವುದು ಇನ್ನೂ ಸ್ಪಷ್ಟ ಇಲ್ಲ.

ಕರ್ನಾಟಕ ರಾಜ್ಯದ ಬಿಜೆಪಿಗೆ ಅಧ್ಯಕ್ಷರನ್ನು ಇಷ್ಟು ತಡವಾಗಿಯಾದರೂ ಮಾಡಿದ್ದಾರೆ. ಆದರೆ ಇನ್ನೂ ವಿಧಾನಸಭೆಯಲ್ಲಿ ಪ್ರತಿಪಕ್ಷದ ನಾಯಕರನ್ನು ಆಯ್ಕೆ ಮಾಡಬೇಕಿದೆ. ಸಹಜವಾಗಿ ಲಿಂಗಾಯತರಿಗೆ ಅಧ್ಯಕ್ಷಗಿರಿ ಕೊಟ್ಟ ಮೇಲೆ ವಿರೋಧ ಪಕ್ಷದ ನಾಯಕ ಸ್ಥಾನ ಒಕ್ಕಲಿಗರಿಗೋ, ದಲಿತರಿಗೋ ಹಿಂದುಳಿದವರಿಗೋ ಅಂತ ಜಾತಿ ಆಧಾರದಲ್ಲಿಯೇ ಲೆಕ್ಕ ಮಾಡುವುದು ಖಂಡಿತ. ಹೀರುವಾಗ ಸಂಸತ್ತಿನ ಚುನಾವಣೆಗೆ ಇನ್ನೊಂದು ಮಗ್ಗಲಲ್ಲಿ ಬಿಜೆಪಿ ಸಿದ್ಧತೆ ಆರಂಭಿಸಿದೆ. ಅದರ ಬರಗಾಲ ಸಮೀಕ್ಷೆಯ ಯಾತ್ರೆ ಇಂತಹ ಸಿದ್ಧತೆಯ ಒಂದು ಭಾಗ. ಇವೆಲ್ಲ ಕರ್ನಾಟಕ ರಾಜ್ಯದಲ್ಲಿ ಬಿಜೆಪಿ ಪಕ್ಷದೊಳಗೆ ತರಬೇಕೆಂದಿರುವ ಬದಲಾವಣೆಗಳಿಗೆ ಹೈಕಮಾಂಡ್ ಬದ್ಧವಾಗಿ ಮುಂದುವರೆಯುತ್ತಿದೆ ಎಂದು ಸೂಚಿಸುತ್ತವೆ. ಅದರ ಇಂತಹ ಲೆಕ್ಕಾಚಾರಗಳು ಒಂದು ಕಡೆ, ಇನ್ನೊಂದು ಕಡೆ ಬಿಜೆಪಿ ಒಳಗಡೆಯಲ್ಲಿ ಇರುವ ಬೇಗುದಿಗಳು ಆ ಲೆಕ್ಕಾಚಾರಗಳನ್ನು ಎಷ್ಟು ಯಶಸ್ಸು ಗಳಿಸುವಂತೆ ಮಾಡುತ್ತವೆ ಎನ್ನುವುದು ತೀರಾ ಅಸ್ಪಷ್ಟ. ಅವಕಾಶಗಳ ಹುಡುಕಾಟದಲ್ಲಿನ ಈ ಪ್ರಕ್ರಿಯೆಯು ಬಿಜೆಪಿ ಒಳಗೆ ಇನ್ನೂ ಹಲವು ಹೊಸ ಇಕ್ಕಟ್ಟು ಮತ್ತು ಬಿಕ್ಕಟ್ಟುಗಳನ್ನು ಸೃಷ್ಟಿಸುತ್ತಾ ಹೋದರೂ ಆಶ್ಚರ್ಯವಿಲ್ಲ.

ಐದು ರಾಜ್ಯಗಳ ವಿಧಾನಸಭಾ ಚುನಾವಣೆ ಮೃದು ಹಿಂದುತ್ವವನ್ನೇ ನೆಚ್ಚಿಕೊಂಡಿರುವ ಕಾಂಗ್ರೆಸ್... ಪುಟ 2 ರಿಂದ

ಸಚಿನ್ ಪೈಲಟ್ ಅವರನ್ನೂ ಗೆಹ್ಲೋಟ್ ನಂಬುವುದಿಲ್ಲ. ಮಾಜಿ ಮುಖ್ಯಮಂತ್ರಿ ವಸುಂಧರಾ ರಾಜೇ ಸಿಂಧಿಯಾ ಅವರನ್ನು ಬಿಜೆಪಿ ರಾಷ್ಟ್ರೀಯ ನಾಯಕತ್ವ ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ. ಇಂತಹ ಅಪನಂಬಿಕೆ ಮತ್ತು ಒಳಜಗಳಗಳ ಒಟ್ಟು ಮೊತ್ತವೇ ರಾಜಸ್ಥಾನ ಚುನಾವಣಾ ರಂಗ. ಕಳೆದ ಚುನಾವಣೆಯಲ್ಲಿ ಅಂದು ಪಿಸಿಸಿ ಅಧ್ಯಕ್ಷರಾಗಿದ್ದ ಸಚಿನ್ ಪೈಲಟ್ ಅವರಿಗೆ ಮುಖ್ಯಮಂತ್ರಿ ಸ್ಥಾನದ ಭರವಸೆಯನ್ನು ಹೈಕಮಾಂಡ್ ನೀಡಿತ್ತು. ಕೊನೆಗೆ ಶಾಸಕರ ಒತ್ತಡಕ್ಕೆ ಮಣಿದು ಗೆಹ್ಲೋಟ್‌ಗೆ ಮುಖ್ಯಮಂತ್ರಿ ಸ್ಥಾನ ನೀಡಬೇಕಾದ ಸಂದರ್ಭದಲ್ಲೂ ಪೈಲಟ್‌ಗೆ ಸ್ವಲ್ಪ ಸಮಯ ಕಾಯುವಂತೆ ಹೈಕಮಾಂಡ್ ಹೇಳಿದೆ. ಕಾಯುವಿಕೆ ಮುಂದುವರೆದಂತೆ, ಪೈಲಟ್ ಬಂಡಾಯದ ಬಾವುಟ ಎತ್ತಿದರು. ಆದರೆ ಗೆಲೋಟ್ ಅವರ ತಂತ್ರಗಳು ಯಶಸ್ವಿಯಾದವು. ಈ ನಿಟ್ಟಿನಲ್ಲಿ ಗೆಲೋಟ್ ಗೆ ಸಹಾಯ ಮಾಡಿದವರಿಗೆ ಈಗ ಹೈಕಮಾಂಡ್ ಶಿಕ್ಷೆ ನೀಡುತ್ತಿದೆ. ಹಿರಿಯ ಸಚಿವ ಮಹೇಶ್ ಜೋಶಿ ಅವರಿಗೆ ಸೀಟು ನಿರಾಕರಿಸಿದ್ದೇ ಉದಾಹರಣೆ. ಎಐಸಿಸಿ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಳ್ಳುವ ಪ್ರಸ್ತಾಪವನ್ನು ಗೆಹ್ಲೋಟ್ ತಿರಸ್ಕರಿಸಿರುವುದು ಕೂಡ ಹೈಕಮಾಂಡ್ ಅಸಮಾಧಾನಕ್ಕೆ ಕಾರಣವಾಗಿದೆ. ಹೈಕಮಾಂಡ್ ಬೆಂಬಲದೊಂದಿಗೆ ಗೆಲೋಟ್ ನ ನಡೆಗಳು ಭವಿಷ್ಯದಲ್ಲಿ ಪೈಲಟ್ ಎತ್ತುವ ಸವಾಲಿನ ಮುಂದಿವೆ. ಆದರೆ ಸಮೀಕ್ಷೆಯಲ್ಲಿ ಕಾಂಗ್ರೆಸ್ ಹಿಂದುಳಿದಿದೆ.

ಭೈರೋನ್ ಸಿಂಗ್ ಶೇಖವಾ ನಂತರ ರಾಜಸ್ಥಾನದಲ್ಲಿ ಬಿಜೆಪಿಯ ಮುಖವಾದ ವಸುಂಧರಾಜೇ ಸಿಂಧಿಯಾ ಅವರನ್ನು ಈ ಬಾರಿ ಸಂಪೂರ್ಣವಾಗಿ ಸೋಲಿಸಲು ರಾಷ್ಟ್ರೀಯ ನಾಯಕತ್ವ ಪ್ರಯತ್ನಿಸಿತು. ವಸುಂಧರಾ ಅವರ ನಿಷ್ಠಾವಂತರಿಗೆ ಎಲ್ಲಾ ಸ್ಥಾನಗಳನ್ನು ನಿರಾಕರಿಸುವ ಪ್ರಯತ್ನವು ಭಾರೀ ಪ್ರತಿಭಟನೆಗೆ ಕಾರಣವಾದ ನಂತರ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ರಾಜಿ ಮಾಡಿಕೊಳ್ಳಲು ಸಿದ್ಧರಾಗಿದ್ದರು. ಕೇಂದ್ರ ಸಚಿವರು ಹಾಗೂ ಸಂಸದರನ್ನು ಸಾಮೂಹಿಕವಾಗಿ ಕಣಕ್ಕಿಳಿಸುವ ಮೂಲಕ ಬಿಜೆಪಿ ಪರಸ್ಪರ ವಿಶ್ವಾಸ ಕಳೆದುಕೊಂಡಿದೆ. ಕಳೆದ ಬಾರಿ 28 ಸ್ಥಾನಗಳಲ್ಲಿ ಏಕಾಂಗಿಯಾಗಿ ಸ್ಪರ್ಧಿಸಿದ್ದ ಸಿಪಿಐ(ಎಂ) ಎರಡು ಸ್ಥಾನ ಗೆದ್ದಿದ್ದರೆ, ಈ ಬಾರಿ 17 ಕ್ಷೇತ್ರಗಳಲ್ಲಿ ಪ್ರಬಲ ಪೈಪೋಟಿ ಕಂಡು ಬರುತ್ತಿದೆ. ನವೆಂಬರ್ 25 ರಂದು ಮತದಾನ ನಡೆಯಲಿದೆ.

ತೆಲಂಗಾಣದಲ್ಲಿ: ಸಂಘಟಿತ ಹೋರಾಟ ನಡೆಸಲು ಕಾಂಗ್ರೆಸ್ ಹಿಂದೇಟು

ಕೆಲ ತಿಂಗಳ ಹಿಂದಿನವರೆಗೂ ರಾಜ್ಯದಲ್ಲಿ ಆಡಳಿತಾರೂಢ ಪಕ್ಷವಾಗಿರುವ ಬಿಆರ್‌ಎಸ್ ಸ್ಥಿತಿ ಭದ್ರವಾಗಿದೆ ಮತ್ತು ಬಿಜೆಪಿ ಪರಿಸ್ಥಿತಿ ಸುಧಾರಿಸಲಿದೆ ಎಂಬ ಪ್ರಚಾರವಿತ್ತು. ಆದರೆ ರಾಜ್ಯದಲ್ಲಿ ರಚನೆಯಾದ 2014ರಿಂದ ಆಡಳಿತ ನಡೆಸುತ್ತಿರುವ ಬಿಆರ್‌ಎಸ್ ಗೆ ಇತ್ತೀಚೆಗೆ ಹಿನ್ನಡೆಯಾಗಿದೆ. ಆಡಳಿತ ವೈಫಲ್ಯದ ಹೊರತಾಗಿ, BRS ತನ್ನ ಅಸ್ಥಿರ ರಾಜಕೀಯ ಸ್ಥಿತಿಯಿಂದಾಗಿ ತನ್ನ ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿದೆ. ತೆಲಂಗಾಣ ರಾಜ್ಯ ರಚನೆಯ ಹೆಗ್ಗಳಿಕೆಗೆ ಪಾತ್ರವಾಗಿರುವ ಟಿಆರ್‌ಎಸ್, ಸಾಕಷ್ಟು ಚರ್ಚೆ ನಡೆಸದೆ ರಾಷ್ಟ್ರೀಯ ಪಕ್ಷವಾಗುವ ಗುರಿಯೊಂದಿಗೆ ತನ್ನ ಹೆಸರನ್ನು ಬದಲಾಯಿಸಿಕೊಂಡಿದೆ. ನಂತರದ ಘಟನೆಗಳು ಇದು ಆತ್ಮಹತ್ಯೆಗೆ ತಿರುಗಿತು ಎಂಬುದನ್ನು ಸಾಬೀತುಪಡಿಸಿತು. ಕೋಮು ಧ್ರುವೀಕರಣವನ್ನು ಸೃಷ್ಟಿಸಿ ಬೆಳೆಯಲು ಬಿಜೆಪಿ ನೆಟ್ಟಿರುವ ಬೀಜಗಳು ತೆಲಂಗಾಣದ ಸೆಕ್ಯುಲರ್ ಮಣ್ಣಿನಲ್ಲಿ ಮೊಳಕೆಯೊಡೆಯುತ್ತಿಲ್ಲ.

ಆದರೆ ಮತ್ತೆ ಕಣಕ್ಕಿಳಿಯುವ ಲಕ್ಷಣ ಕಾಣುತ್ತಿರುವ ಕಾಂಗ್ರೆಸ್ ಸಂಘಟಿತ ಹೋರಾಟ ನಡೆಸಲು ಹಿಂದೇಟು ಹಾಕಿದೆ. ಇದರ ಬೆನ್ನಲ್ಲೇ ಸಿಪಿಐ(ಎಂ) ಸೇರಿದಂತೆ ಪಕ್ಷಗಳು ಸ್ವತಂತ್ರವಾಗಿ ಸ್ಪರ್ಧಿಸುತ್ತಿವೆ. 119 ಸದಸ್ಯ ಬಲದ ವಿಧಾನಸಭೆಗೆ ನವೆಂಬರ್ 30 ರಂದು ಮತದಾನ ನಡೆಯಲಿದೆ. ಎಲ್ಲಾ ಐದು ರಾಜ್ಯಗಳಲ್ಲಿ ಡಿಸೆಂಬರ್ 3 ರಂದು ಮತ ಎಣಿಕೆ ನಡೆಯಲಿದೆ.

–ಕೃಪೆ, ದೇಶಾಭಿಮಾನಿ

ಕೇರಳ ಸ್ಫೋಟ ಯಾಕೆ "ಹಿಟ್ಲರನ ರೈಸ್ಟಾಗ್ ಬೆಂಕಿ" ಆಗಲಿಲ್ಲ?

ಕೇರಳದಲ್ಲಿ 'ಜೆಹೋವ ಸಾಕ್ಷಿ' ಎಂಬ ಕ್ರಿಶ್ಚಿಯನ್ ಪಂಥದ ಪ್ರಾರ್ಥನಾ ಸಮಾವೇಶದಲ್ಲಿ ಬಾಂಬು ಸ್ಫೋಟಗೊಳ್ಳುತ್ತಿದ್ದಂತೆ, ಸಂಘ ಪರಿವಾರ "ಹಿಟ್ಲರನ ರೈಸ್ಟಾಗ್ ಬೆಂಕಿ" ಅವಕಾಶ ಸಿಕ್ಕಿತೆಂದು ಹಿಗ್ಗಿ, ಅದರ ದುರ್ಲಾಭ ಪಡೆದುಕೊಳ್ಳಲು ನುಗ್ಗಿತು. ಆದರೆ ಹಲವು ರಾಜಕೀಯ ಶಕ್ತಿಗಳು, ಪ್ರಾದೇಶಿಕ ಮಾಧ್ಯವಮಗಳ ಕಟ್ಟೆಚ್ಚರ, ಕೇರಳ ರಾಜ್ಯ ಸರ್ಕಾರದ ವಿವೇಕಯುತ ನಡೆ, ದೃಢ ಕಾನೂನಾತ್ಮಕ ಕ್ರಮಗಳು ಸಂಘ ಪರಿವಾರದ ಈ ಫ್ಯಾಸಿಸ್ಟ್ ಪಿತೂರಿಯನ್ನು ವಿಫಲಗೊಳಿಸಿದವು.

ಮೂಲ: ಪ್ರಬೀರ್ ವಿಷ್ಣು ಪೋರುಥಿಯಿಲ್ (ಕೃಪೆ: ದಿ ವೈರ್)
(ಮುಂಬಯಿಯ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ನೀತಿ ಅಧ್ಯಯನ ಕೇಂದ್ರದಲ್ಲಿ ಆಧ್ಯಾಪಕರು)
ಅನುವಾದ : ಜಿ.ಎಸ್.ಮಣಿ

ಹಿಟ್ಲರ್ ಜರ್ಮನಿಯ ಪ್ರಧಾನಿ (ಚಾನ್ಸಲರ್) ಆಗಿ ಚುನಾವಣೆಗಳ ಮೂಲಕ ಆಯ್ಕೆಯಾದ ಒಂದು ತಿಂಗಳಲ್ಲಿ (ಫೆಬ್ರುವರಿ 1933) ಒಬ್ಬ ಅರಾಜಕತಾವಾದಿ ಜರ್ಮನ್ ಪಾರ್ಲಿಮೆಂಟ್ (ರೈಸ್ಟಾಗ್) ಕಟ್ಟಡಕ್ಕೆ ಬೆಂಕಿ ಹಚ್ಚಿದ. ಫ್ಯಾಸಿಸ್ಟ್ ಪ್ರಭುತ್ವ ಸ್ಥಾಪಿಸಲು ತಯಾರಾಗಿದ್ದ ಹಿಟ್ಲರ್ ನ ಪ್ರಭುತ್ವ ಈ ಘಟನೆಯನ್ನು ದುರ್ಬಳಕೆ ಮಾಡಿ ಇದು ಕಮುನಿಸ್ಟರು ಮತ್ತು ಇತರ ವಿರೋಧಿಗಳ ಕುಕೃತ್ಯ ಎಂದು ಬಿಂಬಿಸಿತು.

"ಜನರ ಮತ್ತು ದೇಶದ ರಕ್ಷಣೆಗೆ ಅದ್ಯಕ್ಷರ ಆಜ್ಞೆ" ಎಂದು ಕರಾಳ ಕಾನೂನು ತಂದು ನಾಗರಿಕ ಹಕ್ಕುಗಳನ್ನು ಕಸಿದುಕೊಳ್ಳಲಾಯಿತು. ಈ ಆದೇಶ ಹಿಟ್ಲರನಲ್ಲಿ ಅಧಿಕಾರ ಕೇಂದ್ರೀಕರಣ ಮಾಡಿ ಜರ್ಮನಿಯನ್ನು ಜನಾಂಗೀಯ–ರಾಷ್ಟ್ರೀಯವಾದಿ ಸರ್ವಾಧಿಕಾರದತ್ತ ಕೊಂಡೊಯ್ದಿತು.ಇದು ಇತಿಹಾಸ.

ಅಕ್ಟೋಬರ್ 29 ರಂದು ಸಂಘ ಪರಿವಾರ ಹಿಟ್ಲರ್ ಗೆ ಸಿಕ್ಕಂತಹದ್ದೇ ಅವಕಾಶ ತನಗೆ ಸಿಕ್ಕಿತೆಂದು ಹಿಗ್ಗಿತು. ಕಾರಣ ಕೇರಳದ "ಜೆಹೋವನ ಸಾಕ್ಷಿಗಳು" ಎಂಬ ಒಂದು ಕ್ರಿಶ್ಚಿಯನ್ ಪಂಥದ ಪ್ರಾರ್ಥನಾ ಸಮಾವೇಶದಲ್ಲಿ ಬಾಂಬು ಸ್ಫೋಟಗೊಂಡು ನಾಲ್ವರು ಮೃತಪಟ್ಟರು ಮತ್ತು ಹಲವರು ಗಾಯಗೊಂಡರು. ಕೇರಳದ ವಿಶಿಷ್ಟ ಜನಾಂಗೀಯ ವಾಸ್ತವದಲ್ಲಿ ಬಹುತೇಕ ಹಿಂದೂಗಳು ಜಾತ್ಯಾತೀತರಾಗಿರುವಾಗ, ಚುನಾವಣೆಗಳನ್ನು ಗೆಲ್ಲಲು ಕ್ರಿಶ್ಚಿಯನ್ನರನ್ನೂ ತನ್ನತ್ತ ಸೆಳೆಯಬೇಕಾದ ಅನಿವಾರ್ಯತೆ ಸಂಘಕ್ಕೆ ಇದೆ. ದೇಶದ ಬೇರೆಡೆ ಕ್ರಿಶ್ಚಿಯನ್ನರನ್ನು ರಾಕ್ಷಸೀಕರಿಸುವ ಇವರು ಕೇರಳದಲ್ಲಿ "ಕ್ರಿ– ಸಂಘಿಗಳನ್ನು" ಪೋಷಿಸಿ ಮುಸ್ಲಿಂ ವಿರೋಧಿ ದ್ವನಿ ಹೊರಡಿಸಿ ಅಲ್ಪಸಂಖ್ಯಾತರ ವಿಭಜನೆ ಮಾಡುವ ಹವಣಿಕೆಯನ್ನು ನಿರಂತರವಾಗಿ ಮಾಡುತ್ತಿದ್ದಾರೆ. ಅವರಿಗೆ ಅನುಕೂಲವಾಗುವಂತೆ, ಈ ಘಟನೆ ಕಲಮಸ್ಸೇರಿ ಎಂಬ ಮುಸ್ಲಿಂ ಸಮುದಾಯ ದೊಡ್ಡ ಸಂಖ್ಯೆಯಲ್ಲಿ ಇರುವಲ್ಲಿ ನಡೆದಿದೆ.

ಈ ಬಾಂಬು ಸ್ಫೋಟ ಸಂಘಿಗಳಿಗೆ ತಕ್ಕುದಾದ ಹಿಟ್ಲರ್ ನ 'ರೈಸ್ಟಾಗ್ ಬೆಂಕಿ'ಯಂತಹ ಸನ್ನಿವೇಶಕ್ಕೆ ರೂಪು ಪಡೆಯತೊಡಗಿತ್ತು.ತನ್ನ ಚುನಾವಣಾ ವಿರೋಧಿಗಳು ಪ್ರಬಲರಾಗಿರುವಲ್ಲಿ ಜನರಲ್ಲಿ ಭಯ ಹುಟ್ಟಿಸಿ ವಿರೋಧಿಗಳನ್ನು ಕಂಗಾಲುಗೊಳಿಸಿ ಪ್ರಭುತ್ವದ ಚುಕ್ಕಾಣಿ ಹಿಡಿಯುವ ಹುನ್ನಾರ ಮಾಡುವುದು ಫ್ಯಾಸಿಸ್ಟರ ಸ್ವಭಾವ. ಸಾಮಾಜಿಕ ಒಡಕುಗಳನ್ನು ವಿಸ್ತರಿಸಿ ಬೀದಿ ಹಿಂಸೆ ಪ್ರಚೋದಿಸಿ ಕೋಮು ದಳ್ಳುರಿ ಹುಟ್ಟುಹಾಕುವ ವಿಚಾರದಲ್ಲಿ ಅವರಿಗೆ ಅಪಾರ ಆತ್ಮವಿಶ್ವಾಸ.

ಅವರಿಗೆ ಚುನಾವಣಾ ಅವಕಾಶ ಕಡಿಮೆ ಇರುವ ಕೇರಳದಲ್ಲಿ ರಾಷ್ಟ್ರಪತಿ ಆಡಳಿತ ಹೇರುವುದು ಅಸಾಧ್ಯವೇನಲ್ಲ. ಅಂತಹ ಅವಕಾಶಕ್ಕಾಗಿ ಅವರು ಕಾಯುತ್ತಿದ್ದರು.

ನಿರಾಶೆ

ಇಡೀ ಸಂಘ ಪರಿವಾರ ಜೊಲ್ಲು ಸುರಿಸುತ್ತಾ ಏಕಾಗ್ರತೆಯಿಂದ ಕಾರ್ಯಪ್ರವೃತ್ತವಾಯಿತು. ಬಿ.ಜೆ.ಪಿಯ ಉಪಾಧ್ಯಕ್ಷರಾದ ಕೆ ಎಸ್ ರಾಧಾಕೃಷ್ಣನ್ ಕಲಮಸ್ಸೇರಿಗೆ ಉಗ್ರವಾದಿ ಚಟುವಟಿಕೆಗಳ ಹಿನ್ನೆಲೆ ಇರುವ ಪ್ರಯುಕ್ತ ಮತ್ತು ರಾಜ್ಯ ಪೊಲೀಸರು ವಿಫಲರಾಗಿರುವುದರಿಂದ ಕೇಂದ್ರದ ತನಿಖಾ ಸಂಸ್ಥೆಗಳಿಂದ ತನಿಖೆ ಮಾಡಿಸಬೇಕೆಂದು ದಿಗಿಲು ಹುಟ್ಟಿಸುವ ಹೇಳಿಕೆ ನೀಡಿದರು.

ಸಂದೀಪ್ ವಾರಿಯರ್ ಎಂಬ ಇನ್ನೊಬ್ಬ ಬಿ ಜೆ ಪಿ ನಾಯಕರು ಜೆಹೋವ ಸಾಕ್ಷಿಗಳೆಂದರೆ ಯೆಹೂದಿಗಳು ಮತ್ತು ಈ ಸ್ಫೋಟ ಹಮಾಸ್ ಸಂಘಟನೆಯಿಂದ ಆಗಿದೆ ಎಂದು ಫೇಸ್ಬುಕ್ಕಿನಲ್ಲಿ ಬರೆದುಕೊಂಡರು.

ಅತೀ ದ್ವೇಷಪೂರಿತ ಮತ್ತು ಆರೋಪಯುಕ್ತ ಟ್ವಿಟ್ಟರ್ (ಈಗ ಎಕ್ಸ್) ಹೇಳಿಕೆ ಕೇಂದ್ರದ ಮಂತ್ರಿ ರಾಜೀವ ಚಂದ್ರಶೇಖರ್ ಅವರದ್ದಾಗಿತ್ತು.ಅದು ಕೆಳಗಿನಂತೆ ಇತ್ತು:

"ಭ್ರಷ್ಟಾಚಾರದ ಆರೋಪಗಳಲ್ಲಿ ಮುಳುಗಿರುವ ಮುಖ್ಯಮಂತ್ರಿ ಮತ್ತು ಗೃಹ ಮಂತ್ರಿಗಳಾದ ಪಿಣರಾಯಿ ವಿಜಯನ್ ಅವರ ಕೊಳಕು ಮತ್ತು ನಿರ್ಲಜ್ಜ ತುಷ್ಟೀಕರಣದ ರಾಜಕೀಯ.

"ದೆಹಲಿಯಲ್ಲಿ ಕುಳಿತು ಇವರು ಇಸ್ರೇಲ್ ವಿರುದ್ದ ಪ್ರತಿಭಟಿಸುತ್ತಾರೆ. ಅದೇ ಸಮಯದಲ್ಲಿ ಕೇರಳದಲ್ಲಿ ಉಗ್ರವಾದಿ ಹಮಾಸ್ ಜಿಹಾದಗೆ ಕರೆ ಕೊಟ್ಟು ಬಾಂಬು ಸ್ಫೋಟ ಮತ್ತು ಆಕ್ರಮಣ ನಡೆದು ಮುಗ್ಧ ಕ್ರಿಶ್ಚಿಯನ್ನರು ಬಲಿಯಾಗುತ್ತಿದ್ದಾರೆ"

ಎ.ಎನ್.ಐ ಗೆ ನೀಡಿದ ಸಂದರ್ಶನದಲ್ಲಿ ಅವರು ರಾಜ್ಯದಲ್ಲಿ ನಡೆದಿರುವ ಈ ಘಟನೆ ಇಸ್ರೇಲ್ ವಿರೋಧಿ ಪ್ರಸಂಗಗಳಿಂದಾಗಿರುವುದು ಎಂದರು. ಈ ವಿಚಾರ ಇಡೀ ದೇಶದಲ್ಲಿ ಹರಡಿ ಸಂಘಿಗಳು ಕೇರಳದ ಬಗೆಗೆ ವ್ಯವಸ್ಥಿತವಾಗಿ ಮಾಡುತ್ತಿದ್ದ ಪ್ರಚಾರದ ಭಾಗವಾಯಿತು.

ಸ್ಫೋಟದ ರೂವಾರಿ ಗಂಟೆಗಳೊಳಗೆ ಶರಣಾದದ್ದು ಸಂಘದವರಿಗೆ ದೊಡ್ಡ ನಿರಾಶೆ ಉಂಟುಮಾಡಿತು.ಆತ ಅವರಿಗೆ ಬೇಕಾದ ರೀತಿಯ ಮನುಷ್ಯನಾಗಿರಲಿಲ್ಲ– ಸರಳ ಇಂಗ್ಲೀಷ್ ಅಧ್ಯಾಪಕನಾಗಿದ್ದ. ಹೆಸರು ಡೊಮಿನಿಕ್ ಮಾರ್ಟಿನ್ ಎಂದು. 'ಉಗ್ರವಾದಿಗೆ ಇರುವ ಹೆಸರಾಗಲಿ ವ್ಯಕ್ತಿತ್ವವಾಗಲಿ' ಆತನಿಗೆ ಇರಲಿಲ್ಲ.

ಸಂಘದ ಚಳುವಳಿ ಮಾಸತೊಡಗಿತು. ಹಲವರು ತಮ್ಮ ಟ್ವೀಟ್ ಗಳನ್ನು ಅಳಿಸಿಹಾಕಿದರು. ತಮ್ಮ ನಿಲುವಿನಿಂದಲೂ ಹಿಂದೆ ಸರಿದರು. ಸಂಘದ ಈ ಸೋಲು ಮುಖ್ಯ ಧಾರೆಯ ರಾಜಕೀಯ ಶಕ್ತಿಗಳಿಗೆ ನೆಮ್ಮದಿ ಮೂಡಿಸಿತು.

ಸಂಘದವರ ಹುನ್ನಾರವನ್ನು ತಡೆದ ಕೆಲವು ಅಂಶಗಳು ಎದ್ದು ಕಾಣುತ್ತವೆ.

ಸಂಘದವರ ಹುನ್ನಾರವನ್ನು ತಡೆದದ್ದು ಏನು?

ಕಾಂಗ್ರೆಸ್ ಮುಂದಾಳತ್ವದಲ್ಲಿ ಕೇರಳದ ವಿರೋಧ ಪಕ್ಷಗಳೂ ಆಡಿದ ಪಾತ್ರ ಮುಖ್ಯವಾಯಿತು. ಆಳುವ ಎಲ್.ಡಿ.ಎಫ್ಜತೆಗಿನ ತಮ್ಮ ಮೇಲಾಟ ಬದಿಗಿಟ್ಟು ಪ್ರೌಢಿಮೆಯಿಂದ ನೀಡಿದ ಹೇಳಿಕೆಗಳು ಸಾರ್ವಜನಿಕರಲ್ಲಿ ದ್ವೇಷದ ವಿರುದ್ಧ ನಿಲ್ಲುವ ನಿಲುವು ಮೂಡಿಸಿತು.

ವಿರೋಧ ಪಕ್ಷದ ನಾಯಕ ವಿ ಡಿ ಸತೀಶನ್ ಮಾಧ್ಯಮಗಳಿಗೆ ಘಟನೆಯ ನಂತರ ಪ್ರತಿಕ್ರಿಯಿಸುತ್ತಾ ಗಾಯಾಳುಗಳಿಗೆ ಕೂಡಲೇ ಚಿಕಿತ್ಸೆ ನೀಡುವ ಬಗೆಗೆ ಆದ್ಯತೆ ನೀಡಬೇಕೆಂದರು. ಸರ್ಕಾರದತ್ತ ಬೆರಳು ತೋರಿಸಿ ಆಪಾದನೆ ಮಾಡುವುದನ್ನೇ ಮುಖ್ಯ ಉದ್ದೇಶ ಮಾಡಿಕೊಳ್ಳಲಿಲ್ಲ. ತಪ್ಪು ಮಾಹಿತಿ ಹರಡುವುದನ್ನು ಇದು ತಡೆಯಿತು.

ಸರ್ಕಾರ ಕರೆದ ಸರ್ವ ಪಕ್ಷ ಸಭೆ ಸಂಘಿಗಳ ಧ್ರುವೀಕರಿಸುವ ತಪ್ಪು ಮಾಹಿತಿ ಮತ್ತು ಅದರಿಂದಾಗುವ ಪ್ರಕ್ಷುಬ್ದತೆಯನ್ನು ತಡೆಯಿತು.

ಕೊಚ್ಚಿಯಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ರಾಜೀವ್ ಚಂದ್ರಶೇಖರ್ ಅವರ ಕೋಮುವಾದಿ ಹೇಳಿಕೆಗಳಿಗೆ ಬಿಸಿ ಮುಟ್ಟಿಸಿದ್ದು ನಿಜಕ್ಕೂ ಸಮಾಧಾನ ತರುವಂತಹದ್ದು. ಮಾಧ್ಯಮಗಳು ಸರ್ಕಾರಿ ಗುಲಾಮರಾಗುತ್ತಿರುವ ಈ ಸಮಯದಲ್ಲಿ ಮುಖ್ಯಧಾರೆಯ ಪತ್ರಕರ್ತರು ನೈತಿಕ ಆಕ್ರೋಶದಿಂದ ಆಡಿದ ಸತ್ಯದ ಮಾತುಗಳ ಪ್ರದರ್ಶನವಾಯಿತು.

ತೀಕ್ಷ್ಣ ಪ್ರಶ್ನೆಗಳು ಚಂದ್ರಶೇಖರ್ ತಮ್ಮ ಹೇಳಿಕೆಗಳು ಕೋಮುವಾದಿಯಲ್ಲ ಎಂದು ಹೇಳಿಕೊಳ್ಳುವಂತೆ ಮಾಡಿತು. ಮುಸ್ಲಿಮರು ಉಗ್ರತೆಯೆಡೆ ವಾಲುವುದು ಮತ್ತು ಅದರಿಂದಾಗುವ ದುಷ್ಪರಿಣಾಮಗಳ ವಿರುದ್ಧವೇ ತಾವು ಮಾತನಾಡಿದ್ದು ಹೊರತು ಈ ಒಂದು ಘಟನೆಯ ಬಗೆಗೆ ಅಲ್ಲ ಎಂಬ ಹೇಳಿಕೆ ನಿರೀಕ್ಷಿತ ಪರಿಣಾಮ ನೀಡಲಿಲ್ಲ.

ಮಾರ್ಟಿನ್ ಅವರ ತಪ್ಪೊಪ್ಪಿಗೆ ಮತ್ತು ಬಂಧನದ ನಂತರವೂ "ಹೆಚ್ಚಿನ ತನಿಖೆ ಈ ಸ್ಫೋಟ ಮುಸ್ಲಿಂ ಪಿತೂರಿಯ ಪರಿಣಾಮ" ಎಂಬ ವಿಚಾರವಾಗಿ ಹೊರಹೊಮ್ಮುತ್ತೆ ಹೊರತು "ಒಬ್ಬ ವ್ಯಕ್ತಿಯ ತಪ್ಪು ಕೆಲಸವಲ್ಲ" ಎಂಬ ಆಶಯಕ್ಕೆ ಚಂದ್ರಶೇಖರ್ ಜೋತು ಬಿದ್ದಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಒಬ್ಬ ಕೇಂದ್ರದ ಮಂತ್ರಿಯನ್ನು ಮುಖ್ಯಧಾರೆಯ ಪತ್ರಕರ್ತರು ಇಂತಹ ತೀಕ್ಷ್ಣ ತನಿಖೆಗೆ ಒಳಪಡಿಸಿದ ಉದಾಹರಣೆ ಇಲ್ಲ.

ಸಂಘ ಪರಿವಾರದವರ ಹಿಂಸೆ ಹುಟ್ಟುಹಾಕುವ ಪ್ರೀತಿ ಮತ್ತು ಅವರು ಅದಕ್ಕೆ ಅವಶ್ಯ ವಾತಾವರಣ ಸೃಷ್ಟಿಸುವಅವರ ಪರಿಗಳ ಅರಿವಿದ್ದ ಸರ್ಕಾರ ಚಾಣಾಕ್ಷತನದಿಂದ ಪರಿಸ್ಥಿತಿಯನ್ನು ನಿಭಾಯಿಸಿತು ಎಂಬುದೂ ಸ್ಪಷ್ಟವಿದೆ. ಗಂಟೆಗಳೊಳಗೆ ಹಿರಿಯ ಅಧಿಕಾರಿಗಳು ಮತ್ತು ಮಂತ್ರಿಗಳನ್ನು ಸ್ಥಳಕ್ಕೆ ಕಳುಹಿಸಲಾಯಿತು.ಆರೋಗ್ಯ ಮಂತ್ರಿಗಳು ತುರ್ತು ವೈದ್ಯಕೀಯ ನೆರವು ಸಂಯೋಜಿಸುವುದರಲ್ಲಿ ತತ್ಪರರಾದರು. ಮುಖ್ಯ ಮಂತ್ರಿ ಪಿಣರಾಯಿ ವಿಜಯನ್, ಕೇಂದ್ರ ಸಚಿವ ಚಂದ್ರಶೇಖರ್ ಅವರು ದ್ವೇಷದ ಬೆಂಕಿ ಉಗುಳುತ್ತಿದ್ದಾರೆಂದು ನೇರ ಪ್ರಹಾರ ನಡೆಸಿದರು. ಕೇರಳದ ಪೊಲೀಸರು ಚಂದ್ರಶೇಖರ್ ಮತ್ತೂ ಸಂಘದ ಇತರರ ವಿರುದ್ಧ ಶಾಂತಿ ಭಂಗ ಮತ್ತು ಹಿಂಸೆ ಪ್ರಚೋದನೆ ಮಾಡುತ್ತಿರುವ ಬಗ್ಗೆ ಪ್ರಕರಣಗಳನ್ನು ದಾಖಲಿಸಿದರು.



ಸಚಿವ ರಾಜೀವ್ ಚಂದ್ರಶೇಖರ್

ಕೇರಳ ಸರಕಾರ ಈ ಪ್ರಕರಣದಲ್ಲಿ ತೋರಿದ – ಜಾತ್ಯಾತೀತತೆಯ ಸಂರಕ್ಷಣೆ, ದ್ವೇಷ ಭಾಷಣಗಳ ಬಗೆಗೆ ಅಸಹನೆ ಹಾಗೂ ಸಂಘದವರ ಮೇಲೆ ರಾಜಕೀಯ ಮತ್ತು ಕಾನೂನಾತ್ಮಕ ಕ್ರಮ ತಗೆದುಕೊಳ್ಳುವ ಇಚ್ಛಾಶಕ್ತಿ– ಇವುಗಳನ್ನು ಬೇರೆ ಸರ್ಕಾರಗಳೂ ಕಲಿತು ಜಾರಿ ಮಾಡಿದರೆ ಒಳಿತು.

ಈ ಪ್ರತಿಕ್ರಿಯೆ ಇಂತಹ ಸಮಾಜವಿರೋಧಿ ಪಿತೂರಿಗಳಿಗೆ ಪ್ರತಿರೋಧಗಳಲ್ಲಿ ಸ್ಥಳೀಯ ಭಾಷೆಯ ಮಹತ್ವವನ್ನು ಎತ್ತಿ ತೋರಿಸುತ್ತದೆ. ಹಿಂದುತ್ವದ ಧ್ರುವೀಕರಿಸುವ ಕೆಲವು ಪದಗುಚ್ಚಗಳು ಸುಲಭದಲ್ಲಿ ಭಾಷಾಂತರವಾಗುವುದಿಲ್ಲ. ಹಿಂದಿ ಮತ್ತು ಉತ್ತರ ಭಾರತದ ಭಾಷೆಗಳಲ್ಲಿನ ಮುಸ್ಲಿಂ ವಿರೋಧಿ ಭಾಷಾ ಬಳಕೆ ಮಿತಿ ಹೆರುತ್ತದೆ (ಉದಾಹರಣೆಗೆ :"ಗೋಲಿ ಮಾರೋ ಸಾಲೋನ್ ಕೊ" ಸಾರ್ವಜನಿಕವಾಗಿ ಲಿಖಿತ ಅಥವಾ ವಾಚಿತ ರೂಪದಲ್ಲಿ ಬಳಸುವಮಲಯಾಳಂ ನಲ್ಲಿ ಸರಿಯಾಗಿಬರುವುದಿಲ್ಲ). ಕೇರಳದಲ್ಲಿ ಸ್ಥಳೀಯ ಭಾಷೆಯಲ್ಲಿ ಸಾಕಷ್ಟುಆಳಕ್ಕೆ ಬೇರುಬಿಟ್ಟ ಮತ್ತು ವಿಶ್ವಾಸಾರ್ಹ ಮಾಧ್ಯಮ ಸಂಸ್ಥೆಗಳು ಇರುವುದರಿಂದ, ಸಂಘ ಪರಿವಾರದ ಅಪಪ್ರಚಾರದ ಗೆಲುವಿಗೆ ಅಗತ್ಯವಾದ ಸಾಮಾಜಿಕ ಮಾಧ್ಯಮ ಕ್ಷೇತ್ರದಲ್ಲಿನನಿರ್ವಾತ ಇರಲಿಲ್ಲ.

ಸ್ಥಳೀಯ ಭಾಷೆಯ ಪ್ರಭಾವಳಿ ಚಂದ್ರಶೇಖರ್ ಅವರು ಹರುಕು ಮುರುಕು ಮಲಯಾಳಮ್ ಬಳಸಿದಾಗ ಪತ್ರಿಕಾಗೋಷ್ಠಿಯಲ್ಲಿ ಕಂಡು ಬಂತು. ಸ್ಥಳೀಯ ರಾಜಕಾರಣಿಗಳು ನುರಿತ ರೀತಿಯಲ್ಲಿ ಭಾಷೆ ಬಳಸುವುದಕ್ಕೆ ಹೊಲಿಸಿದರೆ ಚಂದ್ರಶೇಖರ್ ಅವರ ಭಾಷೆ ಬಳಕೆಯಲ್ಲಿ ನೈಪುಣ್ಯದ ಕೊರತೆ ಎದ್ದು ಕಾಣುತ್ತಿತ್ತು.

ಹಿಂದೂ ಬಹುಸಂಖ್ಯಾತವಾದಕ್ಕೆ ಪ್ರತಿರೋಧ ಒಡ್ಡುವಾಗ ಇಂಗ್ಲೀಷ್ ನುಡಿಗಟ್ಟುಗಳು ವಿಪಲವಾಗುವಾಗ ಸ್ಥಳೀಯ ಭಾಷೆಗಳಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಇಂತಹ ಪ್ರತಿರೋಧ ಮೂಡಿ ಬರಬಲ್ಲುದು ಎಂಬ ಸೂಚನೆಯೂ ಇದರಲ್ಲಿ ಇದೆ.

ವೈಫಲ್ಯದ ಅಂಚಿನಿಂದ ಹೊರಗೆ ಜಿಗಿವ ಚಾಣಾಕ್ಷತನ

ಈ ಘಟನೆಯನ್ನು ಒಂದುವೈಫಲ್ಯದ ಅಂಚಿನ ಒಂದು ಎಚ್ಚರಿಕೆ ಎಂದು ತೆಗೆದುಕೊಳ್ಳಬಹುದು. ಆರೋಪಿಯ ಶರಣಾಗತಿ ಅಥವಾ ಬಂಧನ ಇತ್ಯಾದಿಗಳಲ್ಲಿ ಯಾವುದೇ ಲೋಪವಾದರೂ ಸಂಘ ಪರಿವಾರದವರು ಕೋಲಾಹಲ ಉಂಟು ಮಾಡುತ್ತಿದ್ದರು.ರಾಜಕೀಯ ವರ್ಗದ ಸ್ವಯಂಪ್ರೇರಿತ ಒಗ್ಗಟ್ಟು, ಪ್ಯಾಸಿಸ್ಟ್ ಹುನ್ನಾರಗಳ ತಿರಸ್ಕಾರ, ಸ್ಥಳೀಯ ಮಾಧ್ಯಮ ಮತ್ತು ಕೇರಳದಜನ ದೊಡ್ಡ ಅವಗಡದ ಸಾಧ್ಯತೆಯನ್ನು ವಿಫಲಗೊಳಿಸುವಲ್ಲಿ ಯಶಸ್ಸು ಕಂಡಿತು.

ಈ ಒಗ್ಗಟ್ಟು ಮತ್ತು ಎಚ್ಚರವನ್ನು ಪ್ರಶಂಸೆ ಮಾಡುವುದು ಮಾತ್ರವಲ್ಲ ಅದನ್ನು ಇನ್ನೂ ಬಲಿಷ್ಟಗೊಳಿಸಬೇಕು.

ಕೇರಳಕ್ಕೆ ಇಂತಹ ಘಟನೆಗಳ ಪರಿಣಾಮ ಮುಂದೇನೂ ಹೀಗೇ ಇರಬೇಕೆಂದೆನಿಲ್ಲ. ರೈಸ್ಟಾಗ್ ನ ಇನ್ನೊಂದು ಅವತರಣಿಕೆ ಕಾರ್ಯರೂಪಕ್ಕೆ ಬರಬಹುದು. ಆ ಬೆಂಕಿ ಅವರು ಗೌರವ ಕೊಡುವ ಎಲ್ಲವನ್ನೂ ಸುಟ್ಟುಬೂದಿ ಮಾಡಬಹುದು.



ಕಟ್ಟಡ ನಿರ್ಮಾಣ ಕಾರ್ಮಿಕರ ಮಕ್ಕಳ ಶೈಕ್ಷಣಿಕ ಸಹಾಯಧನ ಶೇ.75ರಷ್ಟು ಇಳಿಕೆ

ಕಟ್ಟಡ ಕಾರ್ಮಿಕರ ಮಕ್ಕಳ ಸ್ಕಾಲರ್ ಶಿಪ್ ಗೆ ಸಂಚಕಾರ

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು ಕಟ್ಟಡ ನಿರ್ಮಾಣ ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ನೀಡಲಾಗುತ್ತಿದ್ದ ಶೈಕ್ಷಣಿಕ ಸಹಾಯಧನವನ್ನು ಶೇ.75ರಷ್ಟು ಇಳಿಕೆ ಮಾಡಿದೆ. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕರ್ನಾಟಕ ನಿಯಮಗಳು 2006ರ ನಿಯಮ 45(1) ರಡಿ ನೋಂದಾಯಿತ ಕಟ್ಟಡ ಕಾರ್ಮಿಕರ ಮಕ್ಕಳಿಗೆ ನೀಡಲಾಗುತ್ತಿದ್ದ ಶೈಕ್ಷಣಿಕ ಸಹಾಯಧನ ಮೊತ್ತವನ್ನು ಪರಿಷ್ಕರಿಸಲಾಗಿದೆ. ಸಹಾಯಧನ ಮೊತ್ತ ಪರಿಷ್ಕರಿಸುವಾಗ ಪ್ರಸ್ತುತ ಕೊಡಲಾಗುತ್ತಿದ್ದ ಮೊತ್ತವನ್ನು ಇಳಿಕೆ ಮಾಡಿ, ಕನಿಷ್ಟ 1000 ರೂಪಾಯಿ ಗರಿಷ್ಟ 12,000 ರೂಪಾಯಿಗಳಿಗೆ ಸೀಮಿತಗೊಳಿಸಲಾಗಿದೆ. ಇಷ್ಟು ಮಾತ್ರವಲ್ಲದೆ, ಈ ಪರಿಷ್ಕರಣೆಯು 2022-23ನೇ ಸಾಲಿನ ಶೈಕ್ಷಣಿಕ ವರ್ಷದಿಂದಲೇ ಪೂರ್ವಾನ್ವಯವಾಗುವಂತೆ ಆದೇಶಿಸಲಾಗಿದೆ.

ಲಿಂಗರಾಜು, ಮಳವಳ್ಳಿ

ಎಲ್‌ಕೆಜಿ, ಯುಕೆಜಿ ಮತ್ತು ನರ್ಸರಿ ಮಕ್ಕಳಿಗಿಲ್ಲ!!

ಇದುವರೆಗೂ ಜಾರಿಯಲ್ಲಿದ್ದಂತೆ ಶೈಕ್ಷಣಿಕ ಸಹಾಯಧನವು ಎಲ್‌ಕೆಜಿ, ನರ್ಸರಿ ಮತ್ತು ಒಂದನೇ ತರಗತಿಯಿಂದ 5ನೇ ತರಗತಿ ಮಕ್ಕಳಿಗೆ ರೂ.5000 ಇತ್ತು. ಈಗ ಎಲ್‌ಕೆಜಿ, ಯುಕೆಜಿ ಮತ್ತು ನರ್ಸರಿಗೆ ಶೈಕ್ಷಣಿಕ ಸಹಾಯಧನವನ್ನು ರದ್ದು ಮಾಡಲಾಗಿದೆ ಮತ್ತು ಒಂದನೇ ತರಗತಿಯಿಂದ 5ನೇ ತರಗತಿವರೆಗೆ ರೂ. 1,100 ನಿಗದಿಗೊಳಿಸಲಾಗಿದೆ. 6ನೇ ತರಗತಿಯಿಂದ 8ನೇ ತರಗತಿಯವರೆಗೆ ರೂ.8,000, 9 ಮತ್ತು 10ನೇ ತರಗತಿಯವರಿಗೆ ರೂ.12,000 ಸಹಾಯಧನ ನೀಡಲಾಗುತ್ತಿತ್ತು. ಇದನ್ನು ಕ್ರಮವಾಗಿ ರೂ.1350 ಮತ್ತು ರೂ.3000ಕ್ಕೆ ಇಳಿಸಲಾಗಿದೆ. ಅದೇ ರೀತಿ ಪಿಯುಸಿ ವ್ಯಾಸಂಗಕ್ಕೆ ರೂ.15,000, ಪದವಿಗೆ ರೂ.25,000 ಇತ್ತು. ಇದನ್ನು ರೂ.4500 ಮತ್ತು ರೂ.6,000ಕ್ಕೆ ಇಳಿಸಲಾಗಿದೆ. ಬಿ.ಇ., ಬಿ.ಟೆಕ್., ಪದವಿ ಕೋರ್ಸ್‌ಗಳಿಗೆ ರೂ.50,000 ಹಾಗೂ ಎಂ.ಟೆಕ್., ಎಂ.ಇ, ಕೋರ್ಸ್‌ಗಳಿಗೆ ರೂ.60,000ಕ್ಕೆ ಬದಲಾಗಿ ಕೇವಲ ರೂ.10,000 ನಿಗದಿ ಮಾಡಲಾಗಿದೆ.

ವೈದ್ಯಕೀಯ ಕೋರ್ಸ್‌ಗಳಿಗೆ ರೂ.60,000 ಮತ್ತು ಎಂ.ಡಿ. ಗೆ ರೂ.75,000 ಇತ್ತು. ಜತೆಗೆ ಐಐಟಿ, ಐಐಎಂಬಿ ಇತ್ಯಾದಿ ಕೋರ್ಸ್‌ಗಳಿಗೆ ಸಂಪೂರ್ಣ ಶುಲ್ಕ ಭರಿಸಲಾಗುತ್ತಿತ್ತು. ಆದರೆ ಇದೀಗ ಕೇವಲ ರೂ.12,000ಕ್ಕೆ ನಿಗದಿಪಡಿಸಿದೆ.

ಶಿಕ್ಷಣವು ವ್ಯಾಪಾರೀಕರಣಗೊಂಡಿರುವ ಈ ಸಮಯದಲ್ಲಿ ದಲಿತರು, ಹಿಂದುಳಿದವರು ಹಾಗೂ ಸಾಮಾನ್ಯ ವರ್ಗಗಳು ಶಿಕ್ಷಣ ಪಡೆಯುವುದು ಅಸಾಧ್ಯ ಎಂಬ ಸ್ಥಿತಿ ನಿರ್ಮಾಣವಾಗುತ್ತಿದೆ. ಜತೆಗೆ ಕೇಂದ್ರ ಸರ್ಕಾರದ ಜನವಿರೋಧಿ ನೀತಿಗಳ ಕಾರಣದಿಂದಾಗಿ ಎಲ್ಲ ಅಗತ್ಯ ವಸ್ತುಗಳ ಬೆಲೆಗಳು ಗಗನ ಮುಟ್ಟಿವೆ. ಇದರಿಂದಾಗಿ ಜೀವನ ನಡೆಸುವುದೇ ದುಸ್ತರವಾಗಿದೆ. ಇಂತಹ ಸಮಯದಲ್ಲಿ ಕಲ್ಯಾಣ ಮಂಡಳಿಯ ಈ ತೀರ್ಮಾನವು ಬಡ ಕಾರ್ಮಿಕರ ಗಾಯದ ಮೇಲೆ ಬರೆ ಎಳೆದಂತಾಗಿದೆ.

ಕಲ್ಯಾಣ ಮಂಡಳಿ ರಚನೆಯ ಉದ್ದೇಶವೇ ಮಣ್ಣುಪಾಲು

ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುವ ಉದ್ದೇಶದಿಂದಾಗಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕರ್ನಾಟಕ ನಿಯಮಗಳು ಕಾಯ್ದೆಯನ್ನು ತರಲಾಗಿತ್ತು. ಇದರ ಜತೆಯಲ್ಲೇ ತರಲಾಗಿದ್ದ ಸೆಸ್ ಕಾಯ್ದೆ – 1996ರ ಅನ್ವಯ ಸಂಗ್ರಹವಾಗುವ ಸೆಸ್ ನಿಧಿಯನ್ನು ಕಾರ್ಮಿಕರ ಸಾಮಾಜಿಕ ಭದ್ರತೆಯನ್ನು ಖಾತ್ರಿಪಡಿಸುವ ಶಿಕ್ಷಣ, ಆರೋಗ್ಯ, ಸುರಕ್ಷತೆ ಇತ್ಯಾದಿಗಳಿಗೆ ಬಳಕೆಯಾಗಬೇಕೆಂದು ಕಾನೂನಿನಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಹೀಗಿರುವಾಗ ಶೈಕ್ಷಣಿಕ ಸಹಾಯಧನವನ್ನು ಗಣನೀಯವಾಗಿ ಇಳಿಕೆ



ಮಾಡಿರುವುದು ಸಾಮಾಜಿಕ ಭದ್ರತೆಯ ಖಾತ್ರಿಪಡಿಸುವ ಕಲ್ಯಾಣ ಮಂಡಳಿ ರಚನೆಯ ಉದ್ದೇಶವನ್ನೇ ಮಣ್ಣುಪಾಲು ಮಾಡಿದಂತಾಗಿದೆ.

ಸಂಘಟನೆಗಳ ಜತೆ ಚರ್ಚಿಸಬೇಕಿತ್ತು

ಶೈಕ್ಷಣಿಕ ಸಹಾಯಧನ ಕಟ್ಟಡ ಕಾರ್ಮಿಕರ ಮಕ್ಕಳ ಶೈಕ್ಷಣಿಕ ಉನ್ನತಿಗೆ ಸಹಕಾರಿಯಾಗಿದೆ. ಜತೆಗೆ ಬಡತನದ ಕಾರಣಕ್ಕಾಗಿ ಕಲಿಕಾ ಹಂತದಲ್ಲಿ ಶಾಲೆ ತೊರೆಯುವಿಕೆಯನ್ನು ಈ ಮೂಲಕ ತಡೆಗಟ್ಟಲು ಸಾಧ್ಯವಾಗಿತ್ತು. ಆದರೆ ಕಲ್ಯಾಣ ಮಂಡಳಿಯ ಈ ತೀರ್ಮಾನವು ಬಡ ಕಾರ್ಮಿಕರ ಮಕ್ಕಳನ್ನು ಶಿಕ್ಷಣ, ಅದರಲ್ಲೂ ಉನ್ನತ ಶಿಕ್ಷಣದಿಂದ ವಂಚಿಸುವ ದುರುದ್ದೇಶವನ್ನು ಹೊಂದಿದೆ. ಕಲ್ಯಾಣ ಮಂಡಳಿ ಇಂತಹ ತೀರ್ಮಾನಕ್ಕೆ ಬರುವ ಮುನ್ನ ಕಾರ್ಮಿಕ ಸಂಘಟನೆಗಳ ಜತೆ ಚರ್ಚಿಸಬೇಕಿತ್ತು, ಆದರೆ ಯಾವುದೇ ಚರ್ಚೆಯನ್ನು ನಡೆಸದೇ ಏಕಪಕ್ಷೀಯವಾಗಿ ತೀರ್ಮಾನಿಸಲಾಗಿದೆ.

ಶೈಕ್ಷಣಿಕ ಸಹಾಯಧನ ನೀಡುವುದಕ್ಕೆ ಹಣದ ಕೊರತೆ ಇದೆ, ಜೊತೆಗೆ ಬೋಗಸ್ ಕಾರ್ಡುಗಳ ಹಾವಳಿಯಿಂದಾಗಿ ಈ ಬಾರಿ 11 ಲಕ್ಷ ಅರ್ಜಿಗಳು ಸಲ್ಲಿಕೆಯಾಗಿವೆ, ಹೀಗಾಗಿ ಕಲ್ಯಾಣ ಮಂಡಳಿಯ ನಿಧಿ ಅರ್ಹರಿಗೆ ಸಿಗುತ್ತಿಲ್ಲ ಎಂಬುದು ಕಾರ್ಮಿಕ ಸಚಿವರ ವಾದ. ಬೋಗಸ್ ಕಾರ್ಡುಗಳ ಹಾವಳಿ ಇದೆ ಎಂಬುದು ಸತ್ಯ. ಉದಾಹರಣಗೆ ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಅತಿ ಹೆಚ್ಚು ಕಾರ್ಡ್ ನೋಂದಣಿಯಾಗಿವೆ. ಈ ಎರಡೂ ಜಿಲ್ಲೆಗಳು ಸೇರಿದಂತೆ ಎಲ್ಲ ಕಡೆಯೂ ಬೋಗಸ್ ಆಗಿರುವ ಸಾಧ್ಯತೆಗಳಿವೆ. ಸೌಲಭ್ಯಗಳ ಕಾರಣಕ್ಕಾಗಿ ಬೋಗಸ್ ಕಾರ್ಡುಗಳ ಹಾವಳಿ ಹೆಚ್ಚಾಗಿದೆ ಎಂಬುದು ನಿಜವಾದರೂ, ಕಠಿಣ ಕ್ರಮಗಳ ಮೂಲಕ ಬೋಗಸ್ ತಡೆಯಲು ಸಾಧ್ಯವಿದೆ. ಆದರೆ ನಿಟ್ಟಿನಲ್ಲಿ ಮಂಡಳಿಯ ಪ್ರಯತ್ನ ಸಾಲದು. ಕಲ್ಯಾಣ ಮಂಡಳಿಗೆ ಮ್ಯಾನ್ ಪವರ್ ಕೊರತೆಯೂ ಕಾರಣವಿರಬಹುದು.

ಹಣದ ಕೊರತೆ ಇದೆ ಎಂಬ ಸಚಿವರ ವಾದದಲ್ಲಿ ಹುರುಳಿಲ್ಲ

ಮಂಡಳಿಯಲ್ಲಿ ಹಣದ ಕೊರತೆ ಇದೆ ಎಂದು ಸಚಿವರಾದ ಸಂತೋಷ್ ಲಾಡ್ ಹೇಳುತ್ತಾರೆ. ಆದರೆ, ಸಚಿವರ ಈ ವಾದದಲ್ಲಿ ಯಾವುದೇ ಹುರುಳಿಲ್ಲ. ಕಲ್ಯಾಣ ಮಂಡಳಿಯಲ್ಲಿ 10 ಸಾವಿರ ಕೋಟಿ ರೂಪಾಯಿ ಇದೆ ಎನ್ನಲಾಗುತ್ತಿದೆ. ಜೊತೆಗೆ ಪ್ರತಿ ವರ್ಷವೂ ಸರಾಸರಿ 1 ಸಾವಿರ ಕೋಟಿ ರೂಪಾಯಿ ಸೆಸ್ ಸಂಗ್ರಹವಾಗುತ್ತದೆ. ಹೀಗಾಗಿ ಹಣದ ಕೊರತೆ ಉದ್ಭವಿಸದು. ಇದರ ಜತೆಗೆ ಹಣದ ಕೊರತೆ ಇದೆ ಎಂದು ಸಚಿವರು ಹೇಳುವಾಗಲೇ 10 ಸಾವಿರ ಲ್ಯಾಪ್‌ಟ್ಯಾಪ್‌ಗಳನ್ನು ಖರೀದಿಸಿದ್ದು ಏಕೆ ಎಂಬ ಕಾರ್ಮಿಕ ಸಂಘಟನೆಗಳ ಪ್ರಶ್ನೆಗೆ ಮಂತ್ರಿಗಳ ಬಳಿ ಉತ್ತರವಿಲ್ಲ. ಸಾಮಾನ್ಯ ಲ್ಯಾಪ್‌ಟಾಪ್ ಒಂದಕ್ಕೆ 70 ಸಾವಿರ ರೂಪಾಯಿ ದರ ತೆತ್ತು ಖರೀದಿಸಲಾಗಿದೆ! ಈ ಖರೀದಿಯಲ್ಲಿ ಭ್ರಷ್ಟಾಚಾರದ ವಾಸನೆ ಇದೆ ಎಂಬ ಆರೋಪಗಳು ಕೇಳಿ ಬಂದಿವೆ. ಶಾಲಾ-ಕಾಲೇಜು ಮಕ್ಕಳಿಗೆ ಲ್ಯಾಪ್‌ಟಾಪ್ ನೀಡುವುದೂ ಶೈಕ್ಷಣಿಕ ಸಹಾಯಧನದ ಭಾಗವೇ ಆಗಿದೆ. ಆದರೆ ಲ್ಯಾಪ್‌ಟಾಪ್ ನೀಡುವಂತೆ ಯಾವ ಸಂಘಟನೆಯೂ ಬೇಡಿಕೆ ಇಟ್ಟಿಲ್ಲ. ಹೀಗಿದ್ದರೂ ಖರೀದಿಗೆ ಆಸಕ್ತಿ ತೋರಿದ್ದರ ಹಿಂದೆ ಅನುಮಾನಗಳು ಮೂಡಿವೆ. ಸಚಿವರಾದ ಹೊಸದರಲ್ಲಿ ಸಂತೋಷ್ ಲಾಡ್ ಅವರು ಇನ್ನು ಮುಂದೆ ಯಾವುದೇ ಖರೀದಿ ಮಾಡುವುದಿಲ್ಲ ಎಂದು ಮಾಧ್ಯಮಗಳ ಎದುರು ಮಾತನಾಡಿದ್ದರು. ಹಿಂದಿನ ಸರ್ಕಾರದಲ್ಲಿ ನಡೆದಿದ್ದ ಎಲ್ಲ ಖರೀದಿಗಳ ಫೈಲ್‌ಗಳನ್ನು ಹಾಜರುಪಡಿಸುವಂತೆಯೂ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ ಎನ್ನಲಾಗುತ್ತಿತ್ತು! ಆದರೆ ಇದು ಸಚಿವರ ಆರಂಭಶೂರತ್ವ ಎಂಬುದೀಗ ಬಯಲಾಗಿದೆ.

ಹಿಂದಿನ ಹಗರಣಗಳ ತನಿಖೆಗೆ ಮುಂದಾಗುತ್ತಿಲ್ಲ

ಹಿಂದಿನ ಬಿಜೆಪಿ ಸರ್ಕಾರದಲ್ಲಿ ಕಾರ್ಮಿಕ ಸಚಿವರಾಗಿದ್ದ ಶಿವರಾಂ ಹೆಬ್ಬಾರ್ ಅವರು ಕಲ್ಯಾಣ ಮಂಡಳಿಯ ಅಧ್ಯಕ್ಷರಾಗಿದ್ದರು. ಈ ಅವಧಿಯಲ್ಲಿ ನಿಯಮಾವಳಿಗಳನ್ನು ಗಾಳಿಗೆ ತೂರಿ ಕಲ್ಯಾಣ ಮಂಡಳಿಯ ನಿಧಿಯನ್ನು ದುರುಪಯೋಗಪಡಿಸಲಾಗಿತ್ತು. ಆ ಅವಧಿಯಲ್ಲಿ ಸಾವಿರಾರು ಕೋಟಿ ರೂಪಾಯಿಗಳ ಹಗರಣಗಳು ನಡೆದಿದ್ದವು. ಕಲ್ಯಾಣ ಮಂಡಳಿಯಲ್ಲಿ ತೀರ್ಮಾನಕ್ಕೆ ಬರೆದೆಯೂ ಘಟನೋತ್ತರ ಅನುಮೋದನೆ ಪಡೆಯುವ ಮೂಲಕ, ಕಾನೂನನ್ನು ಕಾಲುಕಸ ➚



ರಾಜ್ಯಪಾಲರುಗಳ ನಿರಂಕುಶ ನಡೆಯನ್ನು ಕೊನೆಗೊಳಿಸಿ

ಮಸೂದೆಗಳ ಅಂಕಿತಕ್ಕೆ ಅನಗತ್ಯ ವಿಳಂಬ ಧೋರಣೆಗೆ ಸುಪ್ರೀಂ ಕೋರ್ಟ್ ಕಿಡಿ

ಶಾಸನಸಭೆಗಳು ಅಂಗೀಕರಿಸಿದ ಮಸೂದೆಗಳ ಬಗ್ಗೆ ರಾಜ್ಯಪಾಲರು ಯಾವುದೇ ನಿರ್ಧಾರ ತಳೆಯದೇ ದಿನ ದೂಡುವುದು ಒಕ್ಕೂಟತತ್ವ ಮತ್ತು ರಾಜ್ಯಗಳ ಚುನಾಯಿತ ಶಾಸನ ಸಭೆಗಳ ಅಧಿಕಾರಗಳನ್ನು ದುರ್ಬಲಗೊಳಿಸುವ ಒಂದು ವಿಧಾನವಾಗಿದೆ.

ಪ್ರಕಾಶ್ ಕಾರತ್

ಸಂವಿಧಾನದ ಪ್ರಕಾರ, ರಾಜ್ಯ ಶಾಸನಸಭೆಗಳು ಅಂಗೀಕರಿಸುವ ಮಸೂದೆಗಳು ಕಾನೂನಾಗಲು ರಾಜ್ಯಪಾಲರುಗಳು ಅವುಗಳಿಗೆ ಅಂಗೀಕಾರ ನೀಡಬೇಕು. 200ನೇ ವಿಧಿ ಅನ್ವಯ ರಾಜ್ಯಪಾಲರು ಮಸೂದೆಗೆ ಅಂಗೀಕಾರ ನೀಡಬಹುದು ಅಥವಾ ಅದೊಂದು ಹಣಕಾಸು ಮಸೂದೆ ಅಲ್ಲವಾದರೆ ಅನುಮತಿಯನ್ನು ತಡೆ ಹಿಡಿಯಬಹುದು. ಅಥವಾ, ಹೈ ಕೋರ್ಟ್‌ನ ನ್ಯಾಯಾಂಗ ಪರಿಶೀಲನಾ ವ್ಯಾಪ್ತಿಯನ್ನು ಮೀರುತ್ತದೆ ಅಥವಾ ಅಪಾಯಕ್ಕೆ ಈಡು ಮಾಡುತ್ತದೆ ಎಂದು ಆತ ಅಥವಾ ಆಕೆ (ರಾಜ್ಯಪಾಲರು) ಭಾವಿಸಿದಲ್ಲಿ ಪ್ರಸ್ತಾಪಿತ ಕಾನೂನನ್ನು ರಾಷ್ಟ್ರಪತಿಯವರ ಪರಿಶೀಲನೆಗಾಗಿ ಕಾದಿರಿಸಲೂ ಬಹುದಾಗಿದೆ.

ಒಂದು ವೇಳೆ ಅನುಮತಿಯನ್ನು ತಡೆಹಿಡಿಯಲು ಬಯಸಿದಲ್ಲಿ ಅವರು ಮಸೂದೆಯನ್ನು ಅಥವಾ ನಿರ್ದಿಷ್ಟ ಅಂಶಗಳನ್ನು ಅಥವಾ ಸಲಹೆ ಮಾಡಲಾದ ತಿದ್ದುಪಡಿಗಳನ್ನು ಮರುಪರಿಶೀಲಿಸುವಂತೆ ಕೋರುವ ಟಿಪ್ಪಣಿಯೊಂದಿಗೆ 'ಸಾಧ್ಯವಾದಷ್ಟು ಬೇಗ' ಸರಕಾರಕ್ಕೆ ಮರಳಿಸಬೇಕು. ವಿಧಾನಸಭೆಯು ಮಸೂದೆಯನ್ನು ಮರುಪರಿಶೀಲಿಸಿ ಅಂಗೀಕರಿಸಿದರೆ ರಾಜ್ಯಪಾಲರು ಪುನಃ ಅದಕ್ಕೆ ಸಮ್ಮತಿಯನ್ನು ತಡೆ ಹಿಡಿಯುವಂತಿಲ್ಲ. ರಾಜ್ಯದ ಸಾಂವಿಧಾನಿಕ ಮುಖ್ಯಸ್ಥರು ಚುನಾಯಿತ ಶಾಸಕಾಂಗದ ಪರಿಶೀಲಿತ ನಿರ್ಧಾರಕ್ಕೆ ಅವಕಾಶ ನೀಡಬೇಕು ಎನ್ನುವುದು ಇದರ ಅರ್ಥವಾಗಿದೆ.

ಸತಾಯಿಸುವ ಚಾಳಿ

ಪ್ರತಿಪಕ್ಷಗಳು ಸರಕಾರ ನಡೆಸುವ ರಾಜ್ಯಗಳಲ್ಲಿ ಶಾಸನಸಭೆಗಳು ಅಂಗೀಕರಿಸಿದ ಮಸೂದೆಗಳಿಗೆ ಅಂಕಿತ ಹಾಕದೆ ಸತಾಯಿಸುವುದು ಕೂಡ ಮೋದಿ ಸರಕಾರದಲ್ಲಿ ರಾಜ್ಯಗಳ ಹಕ್ಕುಗಳ ಮೇಲಿನ ಒಟ್ಟಾರೆ ಆಕ್ರಮಣದ ಒಂದು ಸ್ವರೂಪವಾಗಿದೆ. ಕೇರಳದಲ್ಲಿ ರಾಜ್ಯಪಾಲ ಅರಿಫ್ ಮಹಮದ್ ಖಾನ್ ರಾಜ್ಯ ಶಾಸಕಾಂಗ ಅಂಗೀಕರಿಸಿದ ಎಂಟು ಮಸೂದೆಗಳನ್ನು ತಮ್ಮಲ್ಲೇ ಇಟ್ಟುಕೊಂಡಿದ್ದಾರೆ. ಆ ಪೈಕಿ ಮೂರು ಮಸೂದೆಗಳು ಎರಡು ವರ್ಷಕ್ಕಿಂತ ಹೆಚ್ಚು ಸಮಯದಿಂದ ಬಾಕಿಯಿವೆ. ತಮಿಳುನಾಡಿನಲ್ಲಿ ರಾಜ್ಯಪಾಲ ಆರ್. ಎನ್. ರವಿ 12 ಮಸೂದೆಗಳನ್ನು ತಮ್ಮಲ್ಲೇ ಇರಿಸಿಕೊಂಡಿದ್ದಾರೆ. ಪಂಜಾಬ್ ರಾಜ್ಯಪಾಲ ಭನ್ವಾರಿಲಾಲ್ ಪುರೋಹಿತ್ ಏಳು ಮಸೂದೆಗಳ ಬಗ್ಗೆ ಯಾವುದೇ ನಿರ್ಧಾರ ಕೈಗೊಂಡಿಲ್ಲ. ಅನುಮೋದನೆ ನೀಡದೇ ಬಾಕಿ ಉಳಿಸಿಕೊಂಡಿರುವ ಮಸೂದೆಗಳು ಸಾರ್ವಜನಿಕ ಆರೋಗ್ಯ, ಕುಲಪತಿಗಳ ನೇಮಕ ಸಂಬಂಧದ ಪ್ರಕ್ರಿಯೆ, ಉನ್ನತ ಶಿಕ್ಷಣ, ಲೋಕಾಯುಕ್ತ ಮತ್ತು ಸಹಕಾರಿ ಸಂಘಗಳು ಮುಂತಾದ ವಿಷಯಗಳಿಗೆ ಸಂಬಂಧಿಸಿದ್ದಾಗಿವೆ.

ಸುಪ್ರೀಂ ಕೋರ್ಟ್‌ಗೆ ಮೊರೆ

ರಾಜ್ಯಪಾಲರ ನಿಷ್ಕ್ರಿಯತೆ ಕುರಿತಂತೆ ಪಂಜಾಬ್ ಸರಕಾರವು ಸುಪ್ರೀಂ ಕೋರ್ಟ್ ಮೊರೆ ಹೊಕ್ಕಿದ್ದು ಕೇರಳ ಮತ್ತು ತಮಿಳುನಾಡು ಸರಕಾರಗಳು ಕೂಡ ಅದೇ ಹಾದಿ ಹಿಡಿದಿವೆ.

ಕೇರಳ ಸರಕಾರ ತನ್ನ ವಿಶೇಷ ಅರ್ಜಿಯಲ್ಲಿ (ಎಸ್‌ಎಲ್‌ಪಿ) ಹೀಗೆ ಹೇಳಿದೆ: 'ಪ್ರಸ್ತುತ ತೋರ್ಪಡಿಸುವಂತೆ ರಾಜ್ಯಪಾಲರ ವರ್ತನೆಯು ನಮ್ಮ ಸಂವಿಧಾನದ ಮೂಲ ತತ್ವಗಳು ಮತ್ತು ಮೂಲ ಅಡಿಪಾಯಗಳನ್ನೇ ಸೋಲಿಸುವ ಅಪಾಯವಿದೆ. ಕಾನೂನಿನ ಆಡಳಿತ ಮತ್ತು ಪ್ರಜಾಸತ್ತಾತ್ಮಕ ಉತ್ತಮ ಆಡಳಿತವೂ ಅದರಲ್ಲಿ ಒಳಗೊಂಡಿದೆ. ಅಲ್ಲದೆ, ಮಸೂದೆಗಳ ಮೂಲಕ ಅನುಷ್ಠಾನಗೊಳಿಸಲು ಬಯಸಿದ ಕಲ್ಯಾಣ ಕಾರ್ಯಕ್ರಮಗಳನ್ನು ಹೊಂದುವ ಜನರ ಹಕ್ಕುಗಳನ್ನು ಕೂಡ ಅದು ಸೋಲಿಸುತ್ತದೆ'.

ಯಾವುದೇ ವಿಧಾನಸಭೆ ಅಂಗೀಕರಿಸಿದ ಶಾಸನಕ್ಕೆ ವಿಟೋ ಚಲಾಯಿಸಲು ರಾಜ್ಯಪಾಲರಿಗೆ ಸಂವಿಧಾನ ಯಾವುದೇ ವಿವೇಚನಾ ಅಧಿಕಾರವನ್ನು ನೀಡಿಲ್ಲ. ಆದರೆ, ಶಾಸನದ ಬಗ್ಗೆ ರಾಜ್ಯಪಾಲರು ನಿರ್ಧರಿಸಲು ಆರ್ಟಿಕಲ್ 200 ಯಾವುದೇ ಕಾಲಮಿತಿಯನ್ನು ಸ್ಪಷ್ಟಪಡಿಸಿಲ್ಲ. 'ಆದಷ್ಟು ಬೇಗ' ಎಂದಷ್ಟೇ ನಮೂದಿಸಿದೆ. ಇದನ್ನೇ ಅಸ್ತ್ರವಾಗಿ ಬಳಸಿಕೊಂಡು ರಾಜ್ಯಪಾಲರುಗಳು 'ಪಾಕೆಟ್ ವಿಟೋ' ಚಲಾಯಿಸಿ ಮಸೂದೆಗಳನ್ನು ಅನಿರ್ದಿಷ್ಟಾವದಿಗೆ ಉಳಿಸಿಕೊಳ್ಳುತ್ತಾರೆ.

ಪರಿಣಾಮ ಬೀರದ ನಿರ್ದೇಶನ

ರಾಜ್ಯಪಾಲರು ಹತ್ತು ಮಸೂದೆಗಳಿಗೆ ಅಂಕಿತ ಹಾಕಿಲ್ಲ ಎಂದು ದೂರಿ ತೆಲಂಗಾಣ ಸರಕಾರ ಈ ವರ್ಷದ ಆರಂಭದಲ್ಲಿ ಸುಪ್ರೀಂ ಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿತ್ತು. ಅಂಕಿತಕ್ಕಾಗಿ ಕಳಿಸಿದ ಮಸೂದೆಗಳನ್ನು 'ಆದಷ್ಟು ಬೇಗ' ಮರಳಿಸಬೇಕು ಹಾಗೂ ರಾಜ್ಯ ಶಾಸನಸಭೆಗಳು ಅನಿರ್ದಿಷ್ಟಾವಧಿಗೆ ಕಾಯುವಂತೆ ಮಾಡಬಾರದು ಎಂದು ಭಾರತದ ಮುಖ್ಯ ನ್ಯಾಯಾಧೀಶ (ಸಿಜೆಐ) ಡಿ.ವೈ. ಚಂದ್ರಚೂಡ್ ಮತ್ತು ಜಸ್ಟಿಸ್ ಪಿ.ಎಸ್. ನರಸಿಂಹ ಅವರಿದ್ದ ನ್ಯಾಯ ಪೀಠ ತೆಲಂಗಾಣ ಪ್ರಕರಣದಲ್ಲಿ ಏಪ್ರಿಲ್ 23 ರಂದು ಹೇಳಿತ್ತು.

ಆದರೆ, ಸರ್ವೋನ್ನತ ನ್ಯಾಯಾಲಯದ ನಿರ್ದೇಶನವು ಕೇರಳ, ತಮಿಳುನಾಡು ಮತ್ತು ಪಂಜಾಬ್ ರಾಜ್ಯಪಾಲರ ಮೇಲೆ ಯಾವುದೇ ಪರಿಣಾಮ ಬೀರಿದಂತೆ ಕಾಣುತ್ತಿಲ್ಲ.

ರಾಜ್ಯಗಳು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ ನಂತರವಷ್ಟೇ ಕ್ರಮಕೈಗೊಳ್ಳಲು ರಾಜ್ಯಪಾಲರುಗಳು ಆರಂಭಿಸಬಾರದು ಎಂದು ನವೆಂಬರ್ 6 ರಂದು ಪಂಜಾಬ್ ಸರಕಾರದ ಅರ್ಜಿ ವಿಚಾರಣೆ ವೇಳೆ ಮೂರು ಸದಸ್ಯರ ಪೀಠದ ನೇತೃತ್ವ ವಹಿಸಿದ್ದ ಸಿಜೆಐ ಚಂದ್ರಚೂಡ್ ಹೇಳಿದರು. ತಾವು ಜನರಿಂದ ಚುನಾಯಿತರಾದ ಪ್ರತಿನಿಧಿಗಳಲ್ಲ ಎನ್ನುವ ವಾಸ್ತವವನ್ನು ಕೂಡ ರಾಜ್ಯಪಾಲರುಗಳು ಮರೆಯಬಾರದು ಎಂದು ನ್ಯಾ. ಚಂದ್ರಚೂಡ್ ಹೇಳಿದರು. ಪಂಜಾಬ್ ಅರ್ಜಿಯ ಜೊತೆಯಲ್ಲಿ ಕೇರಳ ಮತ್ತು ತಮಿಳು ನಾಡು ರಾಜ್ಯ ಸರಕಾರಗಳ ಅರ್ಜಿಗಳ ವಿಚಾರಣೆಯನ್ನು ನವೆಂಬರ್ 10 ರಂದು ನಡೆಸಲು ಸಿಜೆಐ ಒಪ್ಪಿಕೊಂಡರು.

ಖುಲ್ಲಂಖುಲ್ಲಾ ಅಸಾಂವಿಧಾನಿಕ

ಸಂವಿಧಾನದ 200ನೇ ವಿಧಿಯನ್ವಯ ರಾಜ್ಯ ಶಾಸಕಾಂಗಗಳ ಮಸೂದೆಗಳ ಮೇಲೆ ನಿರ್ಧಾರ ಕೈಗೊಳ್ಳಲು ಈ ರಾಜ್ಯಗಳ ರಾಜ್ಯಪಾಲರುಗಳು ನಿರಾಕರಿಸಿರುವುದು ಖುಲ್ಲಂಖುಲ್ಲಾ ಅಸಾಂವಿಧಾನಿಕವಾಗಿದೆ. ಮಸೂದೆಗಳನ್ನು ಅನಿರ್ದಿಷ್ಟಾವಧಿ ವರೆಗೆ ಇಟ್ಟುಕೊಳ್ಳಲು ಸಂವಿಧಾನ ಅವಕಾಶ ಕಲ್ಪಿಸಿಲ್ಲ ಮತ್ತು 200ನೇ ವಿಧಿಯಲ್ಲಿರುವ 'ಆದಷ್ಟು ಬೇಗ' ಎನ್ನುವ ಪದಪುಂಜವು ಅನಗತ್ಯ ವಿಳಂಬ ಸಲ್ಲದು ಎಂಬ ಸ್ಪಿರಿಟ್‌ಅನ್ನು ಸೂಚಿಸುತ್ತದೆ. ವಾಸ್ತವವಾಗಿ, ಕೀಶಂ ಮೇಘ ಚಂದ್ರ ಸಿಂಗ್ ಪ್ರಕರಣದಲ್ಲಿ 2020ರಲ್ಲಿ ನೀಡಿದ ತೀರ್ಪಿನಲ್ಲಿ, 'ಸಮಂಜಸವಾದ ಸಮಯ' (ರೀಸನೇಬಲ್ ಟೈಮ್) ಎಂದರೆ ಮೂರು ತಿಂಗಳು ಎಂದರ್ಥ ಎಂಬುದಾಗಿ ಜಸ್ಟಿಸ್ ರೋಹಿಂಗ್ಟನ್ ನಾರಿಮನ್ ಹೇಳಿದ್ದರು.

ಇದುವರೆಗೆ ಸುಪ್ರೀಂ ಕೋರ್ಟ್ ಮಾಡಿರುವ ಟಿಪ್ಪಣಿಗಳು ರಾಜ್ಯಪಾಲರು ಚುನಾಯಿತ ಜನಪ್ರತಿನಿಧಿಯೊಬ್ಬರ ಅಧಿಕಾರವನ್ನು ಚಲಾಯಿಸುವಂತಿಲ್ಲ ಅಥವಾ ಸಂವಿಧಾನದಡಿ ಅವರಿಗೆ ಯಾವುದೇ ವಿವೇಚನಾ ಅಧಿಕಾರವೂ ಇಲ್ಲ ಎನ್ನುವುದನ್ನು ಸೂಚಿಸುತ್ತವೆ. ಹೀಗಾಗಿ, ರಾಜ್ಯ ಶಾಸಕಾಂಗ ಅಂಗೀಕರಿಸಿದ ಮಸೂದೆಯೊಂದರ ಮೇಲೆ ರಾಜ್ಯಪಾಲರು ನಿರ್ಧಾರ ಕೈಗೊಳ್ಳಲು ಸಮಂಜಸವಾದ ಸಮಯದ ಚೌಕಟ್ಟು ಏನೆಂಬುದರ ಬಗ್ಗೆ ನಿರ್ಣಾಯಕವಾದ ತೀರ್ಪನ್ನು ಕೊಡುವುದು ಸುಪ್ರೀಂ ಕೋರ್ಟ್‌ಗೆ ಬಿಟ್ಟ ವಿಷಯವಾಗಿದೆ.

ಮೋದಿ ಸರಕಾರದಡಿ, ಚುನಾಯಿತ ಅಸೆಂಬ್ಲಿಯ ಶಾಸನಾತ್ಮಕ ಅಧಿಕಾರಗಳನ್ನು ಅಗೌರವಿಸುವ ರಾಜ್ಯಪಾಲರ ಸರ್ವಾಧಿಕಾರಿ ಪಾತ್ರವನ್ನು ಅಂತ್ಯಗೊಳಿಸಬೇಕಾಗಿದೆ.

ಅನು: ವಿಶ್ವ

ಮಾಡಿಕೊಂಡಿದ್ದರು. ಈ ವಿಷಯವಾಗಿ ಸಮಗ್ರ ತನಿಖೆಯಾಗಬೇಕೆಂದು ಕಾರ್ಮಿಕ ಸಂಘಟನೆಗಳು ಪ್ರಸ್ತುತ ರಾಜ್ಯ ಸರ್ಕಾರವನ್ನು ಒತ್ತಾಯಿಸಿವೆ. ಆದರೆ ಸಚಿವ ಸಂತೋಷ್ ಲಾಡ್ ಅವರು ತನಿಖೆಗೆ ಆಸಕ್ತಿ ತೋರುತ್ತಿಲ್ಲ. ಬಿಜೆಪಿ ಮುಖಂಡ ಶಿವರಾಂ ಹೆಬ್ಬಾರ್ ಕಾಂಗ್ರೆಸ್ ಸೇರಲು ಕೆಪಿಸಿಸಿ ಬಾಗಿಲು ಬಡಿಯುತ್ತಿದ್ದಾರೆ ಎಂದು ಮುಖ್ಯ ವಾಹಿನಿ ಮಾಧ್ಯಮಗಳು ವರದಿ ಮಾಡಿದ್ದವು. ಬಹುಶಃ ಈ ಕಾರಣದಿಂದಾಗಿಯೇ ತನಿಖೆಗೆ ಮುಂದಾಗದಿರಬಹುದು! ಅಥವಾ ತನಿಖೆಯ ತೂಗುಗತ್ತಿಯಿಂದ ತಪ್ಪಿಸಿಕೊಳ್ಳಲು ಹೆಬ್ಬಾರರೇ ಕಾಂಗ್ರೆಸ್ ಸೇರಲು ತುದಿಗಾಲಲ್ಲಿ ನಿಂತಿದ್ದಾರೆ ಎಂಬ ಸುದ್ದಿಗಳು ಹರಿದಾಡುತ್ತಿವೆ. ಈ ಎರಡೂ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ.

ಅನಗತ್ಯ ವೆಚ್ಚಗಳಿಗೆ ಬೇಕಿದೆ ನಿಯಂತ್ರಣ

ಎಲ್ಲ ರೀತಿಯ ಖರೀದಿಗಳನ್ನು ನಿಲ್ಲಿಸುವುದು, ಕಾರ್ಮಿಕರಿಗೆ ಯಾವ ರೀತಿಯಲ್ಲೂ ಪ್ರಯೋಜಕಾರಿ ಆಗದ ಮೊಬೈಲ್ ಕ್ಲಿನಿಕ್, ಶಿಶುವಿಹಾರದಂತಹ ಯೋಜನೆಗಳನ್ನು ಕೈಬಿಡಬೇಕು. ಜತೆಗೆ ಜಾಹಿರಾತು, ಕಚೇರಿ ನವೀಕರಣದಂತಹ ಐಷಾರಾಮಿ ಮನೋಭಾವದಿಂದ ಹೊರಬಂದು, ಅನಗತ್ಯ ವೆಚ್ಚಗಳಿಗೆ ನಿಯಂತ್ರಣ ಹೇರಿದ್ದಲ್ಲಿ ಹಾಗೂ ಬೋಗಸ್ ಕಾರ್ಡುಗಳ ನೋಂದಣಿಯ ನಿಯಂತ್ರಣಕ್ಕೆ ಕಟ್ಟುನಿಟ್ಟಿನ ಕ್ರಮ ಮತ್ತು ಮಂಡಳಿಯ ನಿಧಿಯನ್ನು ಪಾರದರ್ಶಕವಾಗಿ ಬಳಕೆ ಮಾಡಿದ್ದಲ್ಲಿ ಮೊದಲಿನ ಸ್ಲ್ಯಾಬ್‌ನಲ್ಲೇ ಶೈಕ್ಷಣಿಕ ಸಹಾಯಧನ ನೀಡಲು ಸಾಧ್ಯವಿದೆ. ಹಾಗೊಂದು ವೇಳೆ ಹಣದ ಕೊರತೆ ಬಿದ್ದಲ್ಲಿ ಶೇಕಡಾ 2 ರಷ್ಟು ಸೆಸ್ ಹೆಚ್ಚಳಕ್ಕೆ ಕಾನೂನಿನಲ್ಲಿರುವ ಅವಕಾಶವನ್ನು ಬಳಸಿಕೊಳ್ಳಬಹುದು. ಹೀಗಿರುವಾಗ ಮಕ್ಕಳ ವಿದ್ಯಾಭ್ಯಾಸದಂತಹ ಮಹತ್ವದ ಉದ್ದೇಶಕ್ಕಾಗಿ ನೀಡುವ ಸಹಾಯಧನವನ್ನು ಏಕಾಏಕಿ ಕಡಿತಗೊಳಿಸುವುದರಿಂದ ಕಾರ್ಮಿಕರ ಮಕ್ಕಳ ಭವಿಷ್ಯವನ್ನು ಕತ್ತಲಿಗೆ ದೂಡುತ್ತದೆ ಎಂಬ ಅರಿವು ಸಚಿವರ ಮನಸಿಗೆ ಬಾರದಿರುವುದು ದುರದೃಷ್ಟಕರ.

ನವೆಂಬರ್ 29 ರಂದು 'ಕಲ್ಯಾಣ ಮಂಡಳಿ ಚಲೋ'

ಕಲ್ಯಾಣ ಮಂಡಳಿಯು ತನ್ನ ತೀರ್ಮಾನವನ್ನು ವಾಪಸ್ ಪಡೆಯಬೇಕೆಂದು ನವೆಂಬರ್ 29 ರಂದು ಸಾವಿರಾರು ಕಟ್ಟಡ ನಿರ್ಮಾಣ ಕಾರ್ಮಿಕರಿಂದ ಕಲ್ಯಾಣ ಮಂಡಳಿಯನ್ನು ಮುತ್ತಿಗೆ ಹಾಕುವ 'ಕಲ್ಯಾಣ ಮಂಡಳಿ ಚಲೋ' ಕಾರ್ಯಕ್ರಮ ಹಮ್ಮಿಕೊಳ್ಳಲು ಕಟ್ಟಡ ಕಾರ್ಮಿಕ ಸಂಘಟನೆಗಳ ಸಮನ್ವಯ ಸಮಿತಿಯು ತೀರ್ಮಾನಿಸಿದೆ.

ಲೋಕಸಭಾ ಚುನಾವಣೆ ಹೊಸ್ತಿಲಲ್ಲಿರುವಾಗ ಈ ವಿಷಯದಲ್ಲಿ ಮುಖ್ಯಮಂತ್ರಿಗಳು ಮಧ್ಯಪ್ರವೇಶಿಸಿ ಆಗಿರುವ ತಪ್ಪನ್ನು ಸರಿಪಡಿಸುವ ಕ್ರಮಕ್ಕೆ ಮುಂದಾಗುತ್ತಾರೋ ಕಾದು ನೋಡಬೇಕು.

ಪ್ಯಾಲೆಸ್ತೀನಿನಲ್ಲಿ ತಕ್ಷಣ ಕದನ ವಿರಾಮಕ್ಕೆ ಎಡಪಕ್ಷಗಳ ಅಭಿಯಾನ



ಇಸ್ರೇಲಿಗಳಿಂದ ಪ್ಯಾಲೆಸ್ಟೀನಿಯರ ನರಮೇಧಕ್ಕೆ ಸಾಮ್ರಾಜ್ಯಶಾಹಿ ಬೆಂಬಲ ನಿಲ್ಲಬೇಕು, ಕದನವಿರಾಮ ತಕ್ಷಣ ಆಗಬೇಕು ಎಂದು ಆಗ್ರಹಿಸಲು ರಾಷ್ಟ್ರವ್ಯಾಪಿ ಅಭಿಯಾನಕ್ಕೆ ಎಡಪಕ್ಷಗಳ ಕರೆಯಂತೆ ದಿಲ್ಲಿಯ ಸುರ್ಜಿತ್ ಭವನದಲ್ಲಿ ನವಂಬರ್ 7ರಂದು ಒಂದು ಸಾರ್ವಜನಿಕ ಸಭೆ ನಡೆಯಿತು. ಇದರಲ್ಲಿ ಸಿಪಿಐ(ಎಂ), ಸಿಪಿಐ, ಸಿಪಿಐ(ಎಲ್), ಆರ್‌ಎಸ್‌ಪಿ ಮತ್ತು ಸಿಜಿಪಿಐ ಪ್ರಧಾನ ಕಾರ್ಯದರ್ಶಿಗಳು ಮಾತನಾಡಿದರು. ಅಲ್ಲದೆ ಭಾರತದಲ್ಲಿ ಪ್ಯಾಲೆಸ್ತೀನಿನ ರಾಯಭಾರಿ ಅದನಾನ್ ಅಬು ಅಲ್ಹೈಜ ಮತ್ತು ಸಿಪಿಐ(ಎಂ)ನ ಹಿರಿಯ ಮುಖಂಡ ಪ್ರಕಾಶ ಕಾರಟ್ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಇಸ್ರೇಲ್ ಆಳರಸರು ಪ್ಯಾಲೆಸ್ತೀನೀ ಜನತೆಯ ವಿರುದ್ಧ ಅಭೂತಪೂರ್ವ, ಅಮಾನುಷ ಬರ್ಬರತೆಯನ್ನು ಪ್ರದರ್ಶಿಸುತ್ತಿದೆ, ಎಂದ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ, ಪ್ಯಾಲೆಸ್ತೀನಿಯನ್ನರ ಸಂಕಟಗಳಿಗೆ ಅಕ್ಟೋಬರ್ 7ರ ಘಟನೆಗಳೇ ಕಾರಣ ಎಂದು ಹೇಳುವುದು ಸರಿಯಲ್ಲ, ಏಕೆಂದರೆ ಹಮಸ್ ಅಸ್ತಿತ್ವವೇ ಇಲ್ಲದ ಪಶ್ಚಿಮ ತಟದಲ್ಲೂ ಇಸ್ರೇಲ್ ದಾಳಿಗಳು ನಡೆದಿವೆ ಎಂದರು. ಪ್ಯಾಲೆಸ್ತೀನಿಯನ್ನರಿಗೆ ತಮ್ಮ ನಾಡನ್ನು ಹೊಂದುವ ಜನ್ಮಸಿದ್ಧ ಹಕ್ಕು ಇದೆ ಎಂದ ಗಾಂಧೀಜಿಯ ನುಡಿಯನ್ನು ಮತ್ತು "ಮಹಿಳೆಯರನ್ನೂ, ಮಕ್ಕಳನ್ನೂ ಬಿಡದ ಈ ನರಭಕ್ಷಕನ ಭೀಕರ ಹಸಿವಿಗೆ ಶಾಪ ಕೊಡಲು ಸಾಧ್ಯವಾಗುವಂತೆ ನನಗೆ ಗುಡುಗಿನ ಒಂದು ದನಿ ನೀಡು" ಎಂದ ರವೀಂದ್ರನಾಥ ಠಾಗೋರರ ಉದ್ಗಾರವನ್ನು ಯೆಚುರಿ ನೆನಪಿಸಿದರು.

ಪ್ಯಾಲೆಸ್ತೀನಿ ರಾಯಭಾರಿ ಅದನಾನ್ ಅಬು ಅಲ್ಹೈಜ ಪ್ರಸಕ್ತ ಸನ್ನಿವೇಶದ ಮೂಲಗಳನ್ನು ನೆನಪಿಸಿದರು. ಅವರು ಪ್ರಭುತ್ವದ ಅಪಾರ ಬೆಂಬಲ ಪಡೆದಿರುವ ಯೆಹೂದಿ ನೆಲೆಸಿಗ ಮತ್ತು ಬದುಕುಳಿಯುವ ಕನಿಷ್ಟ ಅಗತ್ಯಗಳನ್ನಷ್ಟೇ ಪಡೆದಿರುವ ಪ್ಯಾಲೆಸ್ತೀನಿಯ ಬದುಕಿನ ನಡುವೆ ಇರುವ ಅಗಾಧ ಕಂದರದ ಬಗ್ಗೆ ಹೇಳುತ್ತ ವಾಸ್ತವವಾಗಿ ಅಕ್ಟೋಬರ್ 7ರ ಮೊದಲೇ ಇಸ್ರೇಲಿ ಜನಾಂಗದ್ವೇಷಿ ಆಳ್ವಿಕೆ ಗಡಿ ದಾಟಿತ್ತು ಎಂದರು.

ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ. ರಾಜ ಮೋದಿ ಸರಕಾರ ತಂದಿರುವ ನೀತಿ ಪಲ್ಲಟವನ್ನು ವಿರೋಧಿಸುತ್ತ ಪ್ಯಾಲೆಸ್ತೀನಿ ಜನತೆಯ ಬೆಂಬಲಕ್ಕೆ ನಿಲ್ಲುವ ಅಗತ್ಯವನ್ನು ಒತ್ತಿ ಹೇಳಿದರು.

ಆರೆಸ್ಸೆಸ್-ಬಿಜೆಪಿ ದೇಶದಲ್ಲಿ ಧ್ರುವೀಕರಣ ತರಲು ಯತ್ನಸುತ್ತಿದ್ದರೆ, ಸರಕಾರ ಇಸ್ರೇಲಿನ ಪರವಾಗಿ ನಿಂತಿದೆ ಎಂದ ಸಿಪಿಐ(ಎಂಎಲ್) ಪ್ರಧಾನ ಕಾರ್ಯದರ್ಶಿ ಇಸ್ರೇಲಿ ನರಮೇಧದ ವಿರುದ್ಧ ಪಾಶ್ಚಿಮಾತ್ಯ ದೇಶಗಳಲ್ಲಿ ಆಕ್ರೋಶ ಹೆಚ್ಚುತ್ತಿದೆ, ಸರಕಾರಗಳ ನಿಲುವುಗಳಿಗೆ ತದ್ವಿರುದ್ಧವಾಗಿ ಜನರು ಪ್ಯಾಲೆಸ್ತೀನಿಯನ್ನರಿಗೆ ಬೆಂಬಲ ವ್ಯಕ್ತಪಡಿಸುತ್ತಿದ್ದಾರೆ ಎಂದರು.

ಇದನ್ನು ಭಯೋತ್ಪಾದನೆಯ ವಿರುದ್ಧ ಯುದ್ಧ ಎಂದು ಬಿಂಬಿಸುವ ಅಮೆರಿಕಾದ ಪ್ರಯತ್ನದಲ್ಲಿ ಅದರ ವಿದೇಶಾಂಗ ಮತ್ತು ರಕ್ಷಣಾ ಕಾರ್ಯದರ್ಶಿಗಳು ಇಸ್ರೇಲಿಗೆ ಭಾರತದ ಬೆಂಬಲವನ್ನು ಗಳಿಸಲು ಬರುತ್ತಿರುವ ಹಿನ್ನೆಲೆಯಲ್ಲಿ ಮತ್ತು ಆರೆಸ್ಸೆಸ್-ಬಿಜೆಪಿ ಅಂತಹ ಕಥನವನ್ನು ಕಟ್ಟುತ್ತಿರುವಾಗ, ಮೋದಿ ಸರಕಾರದ ಈ ನೀತಿ ಪಲ್ಲಟದ ವಿರುದ್ಧ ಜನಬೆಂಬಲವನ್ನು ಅಣಿನೆರೆಸುವ ಜವಾಬ್ದಾರಿ ಎಡಶಕ್ತಿಗಳ ಮೇಲಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯ ಪ್ರಕಾಶ ಕಾರಟ್ ಹೇಳಿದರು. ಈ ಸಂದರ್ಭದಲ್ಲಿ, ಕೇಂದ್ರ ಮಂತ್ರಿ ರಾಜೀವ ಚಂದ್ರಶೇಖರ್ ಕೇರಳದ ಎಲ್‌ಡಿಎಫ್ ಸರಕಾರ ಜಿಹಾದಿಗಳನ್ನು ಬೆಂಬಲಿಸುತ್ತಿದೆ ಎಂದು ಸುಳ್ಳು ಆರೋಪ ಹಾಕಿರುವುದರ ಬಗ್ಗೆ ಹೇಳಿದರು. ಅವರು ಇದನ್ನು ತಮ್ಮ ರಾಜಕೀಯ ಲಾಭಕ್ಕೆ ಬಳಸುತ್ತಿದ್ದಾರೆ, ಜಾತ್ಯತೀತ ಪಕ್ಷಗಳೂ ಒತ್ತಡಕ್ಕೆ ಒಳಗಾಗಿವೆ. ಕಾಂಗ್ರೆಸ್ ಆಡಳಿತವಿರುವ ಬೆಂಗಳೂರಿನಲ್ಲೂ ಇಸ್ರೇಲಿ ನರಮೇಧದ ವಿರುದ್ಧ ಪ್ರತಿಭಟನೆಗಳಿಗೆ ತಡೆ ಹಾಕಲಾಯಿತು. ಇಂತಹ ಸನ್ನಿವೇಶದಲ್ಲಿ ಈ ವಿಷಯವನ್ನು ಕೋಮುಗ್ರಸ್ತಗೊಳಿಸುತ್ತಿರುವುದನ್ನು ಪ್ರತಿರೋಧಿಸುವಲ್ಲಿ ಮತ್ತು ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡುವಲ್ಲಿ ಎಡಪಕ್ಷಗಳ ಪಾತ್ರ ನಿರ್ಣಾಯಕವಾಗಿದೆ ಎಂದು ಪ್ರಕಾಶ ಕಾರಟ್ ಹೇಳಿದರು.

ನವಂಬರ್ 7–10: ದೇಶಾದ್ಯಂತ ಅಮೆರಿಕ-ವಿರೋಧಿ ಪ್ರತಿಭಟನೆಗೆ ಎಡಪಕ್ಷಗಳ ಕರೆ "ಇಸ್ರೇಲಿಗಳಿಂದ ಪ್ಯಾಲೆಸ್ಟೀನಿಯರ ನರಮೇಧಕ್ಕೆ ಸಾಮ್ರಾಜ್ಯಶಾಹಿ ಬೆಂಬಲ ನಿಲ್ಲಬೇಕು"

ನವೆಂಬರ್ 7ರಿಂದ–10ರ ವರೆಗೆ ಅಮೆರಿಕನ್ ಸಾಮ್ರಾಜ್ಯಶಾಹಿಯ ವಿರುದ್ಧ ದೇಶಾದ್ಯಂತ ಪ್ರತಿಭಟನಾ ಕಾರ್ಯಾಚರಣೆ ನಡೆಸುವಂತೆ ಎಡಪಕ್ಷಗಳು ಕರೆ ನೀಡಿವೆ. ತಕ್ಷಣ ಕದನ ವಿರಾಮ ಆಗುವಂತೆ ಮಾಡಬೇಕು ಮತ್ತು ಪ್ಯಾಲೆಸ್ಟೀನಿಯನ್ನರ ನರಮೇಧಕ್ಕೆ ಹಣಕಾಸು, ಶಸ್ತ್ರಾಸ್ತ್ರ ಮತ್ತು ಬೆಂಬಲವನ್ನು ನಿಲ್ಲಿಸಬೇಕು ಎಂದು ಈ ಪ್ರತಿಭಟನೆಗಳಲ್ಲಿ ಆಗ್ರಹಿಸಬೇಕು ಎಂದು ಅವು ಹೇಳಿವೆ. ನವಂಬರ್ 7–10 ರ ವರೆಗೆ ಯುಎಸ್ ವಿದೇಶಾಂಗ ಕಾರ್ಯದರ್ಶಿ ಆಂಟನಿ ಬ್ಲಿಂಕೆನ್ ಮತ್ತು ರಕ್ಷಣಾ ಕಾರ್ಯದರ್ಶಿ ಲಾಯ್ಡ್ ಆಸ್ಟಿನ್ ಅವರು ಭಾರತೀಯ ರಕ್ಷಣಾ ಮತ್ತು ವಿದೇಶಾಂಗ ವ್ಯವಹಾರಗಳ ಸಚಿವರುಗಳೊಂದಿಗೆ 2+2 ಸಚಿವರ ಮಟ್ಟದ ಸಂವಾದದಲ್ಲಿ ಪಾಲ್ಗೊಳ್ಳಲು ಭಾರತಕ್ಕೆ ಭೇಟಿ ನೀಡುತ್ತಿದ್ದಾರೆ.

ಮೋದಿ ಸರಕಾರ ಪ್ಯಾಲೆಸ್ಟೀನಿಯರ ಮೇಲೆ ಅಮೆರಿಕನ್-ಇಸ್ರೇಲಿ ನರಮೇಧವನ್ನು ಅನುಮೋದಿಸುವುದನ್ನು ನಿಲ್ಲಿಸಬೇಕು ಮತ್ತು ತಕ್ಷಣದ ಕದನ ವಿರಾಮದ ಜಾಗತಿಕ ಕರೆಯ ಜತೆ ಸೇರಬೇಕು ಎಂದು ಎಡಪಕ್ಷಗಳು ಸರ್ಕಾರಕ್ಕೆ ಕರೆ ನೀಡಿವೆ.

ಎಡಪಕ್ಷಗಳ ರಾಜ್ಯ ಘಟಕಗಳು ಆಯಾ ರಾಜ್ಯಗಳಲ್ಲಿ ಈ ಪ್ರತಿಭಟನಾ ಕ್ರಮಗಳ ವಿಧಾನಗಳನ್ನು ನಿರ್ಧರಿಸುತ್ತವೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ, ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ.ರಾಜ, ಅಖಿಲ ಭಾರತ ಫಾರ್ವಡ್ ಬ್ಲಾಕ್ ಪ್ರಧಾನ ಕಾರ್ಯದರ್ಶಿ ಜಿ. ದೇವರಾಜನ್, ಸಿಪಿಐ(ಎಂಎಲ್)-ಲಿಬರೇಶನ್ ಪ್ರಧಾನ ಕಾರ್ಯದರ್ಶಿ ದೀಪಂಕರ್ ಭಟ್ಟಾಚಾರ್ಯ ಮತ್ತು ಆರ್.ಎಸ್.ಪಿ.ಯ ಪ್ರಧಾನ ಕಾರ್ಯದರ್ಶಿ ಮನೋಜ್ ಭಟ್ಟಾಚಾರ್ಯ ಈ ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಭಾರತೀಯ ಕಾರ್ಮಿಕರನ್ನು ಇಸ್ರೇಲ್‌ಗೆ ಕಳುಹಿಸಬೇಡಿ, ನರಮೇಧದಲ್ಲಿ ಪಾಲುದಾರರಾಗಿಸಬೇಡಿ–ಸಿಐಟಿಯು ಆಗ್ರಹ

ಪ್ಯಾಲೆಸ್ಟೈನ್ ಮೇಲೆ ಇಸ್ರೇಲ್ ನರಮೇಧದ ದಾಳಿ ನಡೆಸುತ್ತಿರುವಾಗ, ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ ಹಲವಾರು ಸಾವಿರ ಪ್ಯಾಲೆಸ್ತೀನ್ ಜನರನ್ನು ಕೊಂದಿರುವ ಸಂದರ್ಭದಲ್ಲಿ, ಇಸ್ರೇಲ್‌ನ ವಿವಿಧ ವಲಯಗಳಲ್ಲಿ ಕೆಲಸ ಮಾಡುವ ಪ್ಯಾಲೆಸ್ತೀನ್ ಕಾರ್ಮಿಕರಿಗೆ ಇಸ್ರೇಲ್ ತೊರೆಯುವಂತೆ ಆದೇಶ ನೀಡಲಾಗಿದೆ ಎಂದು ವರದಿಯಾಗಿದೆ. ಅದೇ ಪ್ರಕ್ರಿಯೆಯಲ್ಲಿ ಇಸ್ರೇಲಿ ಬಿಲ್ಡರ್ಸ್ ಅಸೋಸಿಯೇಷನ್, ಅಲ್ಲಿ ಕೆಲಸ ಮಾಡಲು ಕಟ್ಟಡ ಕಾರ್ಮಿಕರನ್ನು, ವಿಶೇಷವಾಗಿ ಭಾರತದಿಂದ 50,000 ರಿಂದ 1,00,000 ಕಾರ್ಮಿಕರನ್ನು, ಕಳುಹಿಸಬೇಕೆಂದು ಆಗ್ರಹಿಸಿರುವುದಾಗಿಯೂ, ಅದು ತನ್ನ ವಿನಂತಿಯನ್ನು ಭಾರತ ಸರ್ಕಾರಕ್ಕೆ ನೇರವಾಗಿ ಮತ್ತು ಇಸ್ರೇಲಿ ಸರ್ಕಾರದ ಮೂಲಕ ಕಳುಹಿಸಿದೆ ಎಂದೂ ವರದಿಯಾಗಿದೆ.

ಸಿಐಟಿಯು ಇಸ್ರೇಲ್‌ನಲ್ಲಿ ಪ್ಯಾಲೆಸ್ತೀನ್ ಕಾರ್ಮಿಕರ ವಿರುದ್ಧ ಇಂತಹ ಕ್ರೂರ ಅಮಾನವೀಯ ಕೃತ್ಯಗಳನ್ನು ಖಂಡಿಸುತ್ತ ಪ್ಯಾಲೆಸ್ಟೈನ್ ಮೇಲೆ ನಡೆಯುತ್ತಿರುವ ನರಮೇಧದ ಹತ್ಯಾಕಾಂಡಕ್ಕೆ ಪೂರಕವಾಗಿ ಈ ರೀತಿ ಕಟ್ಟಡ ಕಾರ್ಮಿಕರು ಸೇರಿದಂತೆ ಭಾರತೀಯ ಕಾರ್ಮಿಕರನ್ನು ಕಳುಹಿಸಲು ಅನುಮತಿ ನೀಡಬಾರದು ಎಂದು ಭಾರತ ಸರ್ಕಾರವನ್ನು ಒತ್ತಾಯಿಸಿದೆ. ಈ ಬಗ್ಗೆ ಭಾರತದ ದುಡಿಯುವ ಜನಗಳನ್ನು ಎಚ್ಚರಿಸಿರುವ ಸಿಐಟಿಯು, ಸರಕಾರ ಇಂತಹ ಯಾವುದೇ ಕ್ರಮ ಕೈಗೊಂಡರೆ ಅದಕ್ಕೆ ಸ್ಪಂದಿಸಬಾರದು, ಅದನ್ನು ತಿರಸ್ಕರಿಸಬೇಕು ಎಂದು ಕರೆ ನೀಡಿದೆ.

ಈ ನಿರ್ಣಾಯಕ ಸಮಯದಲ್ಲಿ ಭಾರತೀಯ ಕಾರ್ಮಿಕರನ್ನು ಇಸ್ರೇಲ್‌ಗೆ ಕಳುಹಿಸುವ ಯಾವುದೇ ಕ್ರಮವನ್ನು ಮುಖಾಮುಖಿಯಾಗಿ ವಿರೋಧಿಸಲು ಭಾರತದ ನಿರ್ಮಾಣ ಕಾರ್ಮಿಕರ ಫೆಡರೇಶನ್ (ಸಿಡಬ್ಲ್ಯುಎಫ್‌ಐ) ನಿರ್ಧರಿಸಿರುವುದನ್ನು ಸಿಐಟಿಯು ಸ್ವಾಗತಿಸಿದೆ.

ಇಸ್ರೇಲಿ ಸರ್ಕಾರ ಮತ್ತು ಅಲ್ಲಿನ ಬಿಲ್ಡರ್ಸ್ ಅಸೋಸಿಯೇಷನ್‌ನ ಯಾವುದೇ ಇಂತಹ ನಡೆಗೆ ಸ್ಪಂದಿಸಲು ನಿರಾಕರಿಸಬೇಕು ಎಂದು ಕಾರ್ಮಿಕ ವರ್ಗದ ಪರವಾಗಿ ಸಿಐಟಿಯು ಭಾರತ ಸರ್ಕಾರಕ್ಕೆ ತನ್ನ ಆಗ್ರಹವನ್ನು ಪುನರುಚ್ಚರಿಸಿದೆ. ಇದರ ಬದಲು ಸರಕಾರ ತನ್ನೆಲ್ಲ ಚಂಚಲತೆಗಳನ್ನು ಬದಿಗಿಟ್ಟು, ಮಾನವೀಯ ಕದನ ವಿರಾಮದ ಮೇಲೆ ಇಸ್ರೇಲ್ ತಕ್ಷಣ ಕದನ ವಿರಾಮ ಜಾರಿಗೊಳಿಸಬೇಕು ಮತ್ತು 1967 ರ ಹಿಂದೆ ಇದ್ದ ಗಡಿಯೊಂದಿಗೆ, ಎಲ್ಲ ಅತಿಕ್ರಮಣಗಳಿಂದ ಮುಕ್ತವಾದ ಪ್ಯಾಲೇಸ್ಟಿನಿಯನ್ ನಾಡನ್ನು ಖಾತ್ರಿಪಡಿಸಬೇಕು ಎಂಬ ವಿಶ್ವಸಂಸ್ಥೆಯ ನಿರ್ಣಯವನ್ನು ಬೆಂಬಲಿಸಬೇಕು ಎಂದು ಭಾರತ ಸರಕಾರವನ್ನು ಸಿಐಟಿಯು ಆಗ್ರಹಿಸಿದೆ.

ಪ್ಯಾಲೆಸ್ತೀನ್ ಜನತೆಗೆ ಮತ್ತು ತಾಯ್ನಾಡಿನ ಅವರ ಬೇಡಿಕೆಗೆ ಬೆಂಬಲವಾಗಿ ಮತ್ತು ಪ್ಯಾಲೆಸ್ಟೈನ್ ವಿರುದ್ಧ ಯುಎಸ್-ಸಾಮ್ರಾಜ್ಯಶಾಹಿ ಬೆಂಬಲಿತ ನರಮೇಧವನ್ನು ವಿರೋಧಿಸಿ ಬೃಹತ್ ಸೌಹಾರ್ದವನ್ನು ಭಾರತದಾದ್ಯಂತ ಅಣಿನೆರೆಸಬೇಕು ಎಂದು ಸಿಐಟಿಯು ದುಡಿಯುವ ಜನರಿಗೆ ಕರೆ ನೀಡಿದೆ.

ನವೆಂಬರ್ 15 ರಂದು ದೇಶಾದ್ಯಂತ ಪ್ರತಿಭಟನೆಗೆ ಸಿಡಬ್ಲ್ಯುಎಫ್‌ಐ ಕರೆ

ಇದಕ್ಕೆ ಮೊದಲು, ಇಸ್ರೇಲ್ ಯುದ್ಧದ ನಂತರ ಕೆಲಸ ಮಾಡಲು ಸಾಧ್ಯವಾಗದ ಪ್ಯಾಲೆಸ್ತೀನ್ ಕಾರ್ಮಿಕರ ಬದಲಿಗೆ ಭಾರತದಿಂದ ನಿರ್ಮಾಣ ಕಾರ್ಮಿಕರನ್ನು ಇಸ್ರೇಲ್‌ಗೆ ಕೆಲಸ ಮಾಡಲು ಕಳುಹಿಸುವ ಕುರಿತು ಭಾರತ ಮತ್ತು ಇಸ್ರೇಲ್ ನಡುವೆ ಮಾತುಕತೆ ನಡೆಯುತ್ತಿದೆ ಎಂಬ ವರದಿಗಳ ಬಗ್ಗೆ ಸಿಡಬ್ಲ್ಯುಎಫ್‌ಐ ಗಂಭೀರ ಕಳವಳ ವ್ಯಕ್ತಪಡಿಸಿತ್ತು.

ನಮ್ಮ ದೇಶದ ಬಡ ಕಟ್ಟಡ ಕಾರ್ಮಿಕರನ್ನು ಇಸ್ರೇಲ್ ಗೆ ಕಳುಹಿಸುವ ಯಾವುದೇ ಪ್ರಯತ್ನವನ್ನು ತಾನು ಬಲವಾಗಿ ವಿರೋಧಿಸುವುದಾಗಿ, ಮತ್ತು ಕಾರ್ಮಿಕರ ಕೊರತೆಯನ್ನು ನೀಗಿಸಲು ನಮ್ಮ ದೇಶದ ಬಡ ಕಟ್ಟಡ ಕಾರ್ಮಿಕರನ್ನು ಇಸ್ರೇಲ್‌ಗೆ ಕಳುಹಿಸುವ ಯಾವುದೇ ಪ್ರಯತ್ನವನ್ನು ಬಲವಾಗಿ ಆಕ್ಷೇಪಿಸುವುದಾಗಿ ಹೇಳಿರುವ ಸಿಡಬ್ಲ್ಯುಎಫ್‌ಐ, ಮಕ್ಕಳು ಮತ್ತು ಮಹಿಳೆಯರು ಸೇರಿದಂತೆ ಸಾವಿರಾರು ಅಮಾಯಕರನ್ನು ಕೊಲ್ಲುತ್ತಾ ಪ್ಯಾಲೆಸ್ತೀನ್ ಮೇಲೆ ನರಮೇಧದ ನಡೆಸುತ್ತಿರುವ ಇಸ್ರೇಲ್ ಗೆ ಯಾವುದೇ ಕಾರಣಕ್ಕೂ ನಮ್ಮ ದೇಶದ ಕಾರ್ಮಿಕರನ್ನು ಕಳಿಸಬಾರದು ಎಂದು ಆಗ್ರಹಿಸಿದೆ.


ನಮ್ಮ ದೇಶದ ಕಟ್ಟಡ ಕಾರ್ಮಿಕರರನ್ನು ಇಸ್ರೇಲ್‌ಗೆ ಕಳುಹಿಸುವ ಮತ್ತು ಪ್ಯಾಲೆಸ್ಟೀನಿಯನ್ನರ ಮೇಲಿನ ನರಮೇಧದ ದಾಳಿಯಲ್ಲಿ ಪರೋಕ್ಷ ಪಾಲುದಾರರನ್ನಾಗಿ ಮಾಡುವ ಕ್ರಮಗಳ ವಿರುದ್ಧ ನವೆಂಬರ್ 15 ರಂದು ದೇಶಾದ್ಯಂತ ಪ್ರತಿಭಟನೆಗಳನ್ನು ಸಂಘಟಿಸಬೇಕು ಎಂದು ಕನ್ಯಾಕುಮಾರಿ ಯಲ್ಲಿ ಎರಡು ದಿನಗಳ ಕಾಲ ನಡೆದ ಸಿಡಬ್ಲ್ಯುಎಫ್‌ಐ ನ ಅಖಿಲ ಭಾರತ ಪದಾಧಿಕಾರಿಗಳ ಸಭೆಯು ತನ್ನ ಎಲ್ಲ ಘಟಕಗಳಿಗೂ ಕರೆ ನೀಡಿದೆ.

ಚಿಲ್ಲರೆ ವ್ಯಾಪಾರದಲ್ಲಿ 'ವಿದೇಶಿ ನೇರ ಬಂಡವಾಳ ಹೂಡಿಕೆ'; ಅಂದು ವಿರೋಧಿಸುವ ನಾಟಕ

ಇಂದು: ಏಕ-ಬ್ರ್ಯಾಂಡ್ ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ ಗೆ ಶೇ. 100 ರಷ್ಟು ಅವಕಾಶ

ಸಿ. ಸಿದ್ದಯ್ಯ

2012 ರಲ್ಲಿ, ಕಾಂಗ್ರೆಸ್ ನೇತೃತ್ವದ ಯುನೈಟೆಡ್ ಪ್ರೋಗ್ರೆಸ್ಸಿವ್ ಅಲೈಯನ್ಸ್ (UPA-2) ಸರ್ಕಾರವು ಬಹು–ಬ್ರಾಂಡ್ ಚಿಲ್ಲರೆ ಅಂಗಡಿಗಳಲ್ಲಿ 51% ಎಫ್‌ಡಿಐಗೆ ಅವಕಾಶ ನೀಡಿತ್ತು. ಆ ಸಮಯದಲ್ಲಿ ನರೇಂದ್ರ ಮೋದಿಯವರು ಗುಜರಾತ್ ಮುಖ್ಯಮಂತ್ರಿಯಾಗಿದ್ದರು. ಎಫ್‌ಡಿಐ ವಿರೋಧಿಸಿ ಮೋದಿಯವರು 2012 ರಲ್ಲಿ ಮಾಡಿದ್ದ ಒಂದು ಟ್ವೀಟ್ ಹೀಗಿತ್ತು, "ಕಾಂಗ್ರೆಸ್ ದೇಶವನ್ನು ವಿದೇಶಿಯರಿಗೆ ನೀಡುತ್ತಿದೆ. ಹೆಚ್ಚಿನ ಪಕ್ಷಗಳು ಎಫ್‌ಡಿಐ ಅನ್ನು ವಿರೋಧಿಸಿದವು, ಆದರೆ ಸಿಬಿಐನ ಕತ್ತಿಯ ಭಯದಿಂದ ಕೆಲವರು ಮತ ಚಲಾಯಿಸಲಿಲ್ಲ ಮತ್ತು ಹಿಂಬಾಗಿಲ ಮೂಲಕ ಕಾಂಗ್ರೆಸ್ ಗೆದ್ದಿತು."



ಭಾಷಣವೊಂದರಲ್ಲಿ ಸುಷ್ಮಾ ಸ್ವರಾಜ್ ಹೇಳಿದ್ದು ಹೀಗೆ: "ಅಂತರರಾಷ್ಟ್ರೀಯ ಅನುಭವವು ಚಿಲ್ಲರೆ ವ್ಯಾಪಾರಿಗಳು ಪರಭಕ್ಷಕ ಬೆಲೆಯನ್ನು ತೋರಿಸುತ್ತದೆ ಮತ್ತು ಅವರು ಭಾರತಕ್ಕೆ ಬಂದ ನಂತರ, ಅವರು ಬೆಲೆಗಳನ್ನು ಕಡಿಮೆ ಮಾಡುತ್ತಾರೆ, ಇದರಿಂದಾಗಿ ಸಣ್ಣ ಅಂಗಡಿಗಳು ಮುಚ್ಚಲ್ಪಡುತ್ತವೆ... ಮತ್ತು ಸ್ಪರ್ಧೆಯು ಮುಗಿದ ನಂತರ, ಅವರು ಬೆಲೆಗಳನ್ನು ಹೆಚ್ಚಿಸುತ್ತಾರೆ ಮತ್ತು ಗ್ರಾಹಕರಿಗೆ ಖರೀದಿಸುವುದನ್ನು ಬಿಟ್ಟು ಬೇರೆ ಆಯ್ಕೆ ಇರುವುದಿಲ್ಲ. ಹೆಚ್ಚಿನ ಬೆಲೆಗಳು,"

ಬಿಜೆಪಿ ನಾಯಕ ಅರುಣ್ ಜೇಟ್ಲಿಯವರು, ಅಖಿಲ ಭಾರತ ವ್ಯಾಪಾರಿಗಳ ಒಕ್ಕೂಟ (ಸಿಎಐಟಿ) ವತಿಯಿಂದ ನವದೆಹಲಿಯ ರಾಮಲೀಲಾ ಮೈದಾನದಲ್ಲಿ ಮಾರ್ಚ್ 2013 ರಲ್ಲಿ ನಡೆದ ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡುತ್ತ, "ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ ಗ್ರಾಹಕ, ರೈತ, ವ್ಯಾಪಾರಿ, ತಯಾರಕ ಮತ್ತು ದೇಶದ ಪರವಾಗಿ ಇಲ್ಲ. ಅದಕ್ಕಾಗಿಯೇ ನಾವು ಇದನ್ನು ವಿರೋಧಿಸುತ್ತೇವೆ ಮತ್ತು ನಮ್ಮ ಕೊನೆಯ ಉಸಿರು ಇರುವವರೆಗೂ ಇದನ್ನು ವಿರೋಧಿಸುತ್ತೇವೆ. ನಾವು ಈ ದೇಶದ ವ್ಯಾಪಾರಿಗಳು ಮತ್ತು ಜನರೊಂದಿಗೆ ಒಂದಾಗಿದ್ದೇವೆ" ಎಂದು ಹೇಳಿದ್ದರು.

"ಎಫ್‌ಡಿಐ ಅಡಿಯಲ್ಲಿ ಶೇಕಡಾ 60–70 ರಷ್ಟು ವ್ಯವಹಾರವು ಕೇವಲ ಎರಡು ಅಥವಾ ಮೂರು ಕಂಪನಿಗಳ ಕೈಗೆ ಹೋಗುತ್ತದೆ, ಇದು ರೈತರಿಗೆ ಹಾನಿಕಾರಕವಾಗಿದೆ. ರೈತರು ತಮ್ಮ ಉತ್ಪನ್ನಗಳನ್ನು ಅವರಿಗೆ ಮಾರಾಟ ಮಾಡುವುದನ್ನು ಬಿಟ್ಟು ಬೇರೆ ದಾರಿಯಿಲ್ಲ. ಮಾರಾಟಗಾರರ ಸಂಖ್ಯೆ ಕಡಿಮೆಯಾದಾಗ, ರೈತರಿಗೆ ಹೇಗೆ ಪ್ರಯೋಜನವಾಗುತ್ತದೆ?" ಎಂದು ಶ್ರೀ ಜೇಟ್ಲಿ ಪ್ರಶ್ನಿಸಿದ್ದರು.

ಇದಕ್ಕೂ ಹಿಂದೆ, 2011ರ ನವೆಂಬರ್ ನಲ್ಲಿ ಅರುಣ್ ಜೇಟ್ಲಿ ಹೇಳಿದ್ದು ಹೀಗೆ; "ಬಿಜೆಪಿಯು ಚಿಲ್ಲರೆ ವಲಯದಲ್ಲಿ ಎಫ್‌ಡಿಐ ಅನ್ನು ಸಂಪೂರ್ಣವಾಗಿ ವಿರೋಧಿಸುತ್ತದೆ. ನಮ್ಮ ಆರ್ಥಿಕತೆಯು ಭಾರತದ ಜಿಡಿಪಿಯ ಶೇ. 58 ರಷ್ಟನ್ನು ಹೊಂದಿರುವ ಸೇವಾ ವಲಯದಿಂದ ಪ್ರಾಬಲ್ಯ ಹೊಂದಿದೆ. ಭಾರತದಲ್ಲಿನ ಸಣ್ಣ ಮತ್ತು ದೊಡ್ಡ ಎರಡೂ ಚಿಲ್ಲರೆ ಸರಪಳಿಗಳು ಈ ವಲಯದ ಪ್ರಮುಖ ವಿಭಾಗವನ್ನು ಹೊಂದಿವೆ. ಎಫ್‌ಡಿಐ ಈ ವಿಭಾಗವನ್ನು ಪ್ರವೇಶಿಸುವ ಆಳವಾದ ಪಾಕೆಟ್‌ಗಳೊಂದಿಗೆ ನಮ್ಮ ಬೆಳೆಯುತ್ತಿರುವ ದೇಶೀಯ ಚಿಲ್ಲರೆ ವಲಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ."

"ಭಾರತದಲ್ಲಿ ಸ್ವಯಂ–ಉದ್ಯೋಗವು ಉದ್ಯೋಗಗಳ ಏಕೈಕ ದೊಡ್ಡ ಮೂಲವಾಗಿದೆ ಎಂದು ಪಕ್ಷವು ಸಮರ್ಥಿಸುತ್ತದೆ ಮತ್ತು ಜನಸಂಖ್ಯೆಯ ಅಗಾಧ ವರ್ಗವು ಸ್ವಯಂ–ಉದ್ಯೋಗಿಗಳನ್ನು ಹೊಂದಿದೆ."

"ಬಹು–ಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ ಅನ್ನು ವಿರೋಧಿಸಲು ಬಿಜೆಪಿ ಸಂಸತ್ತಿನ ಒಳಗೆ ಮತ್ತು ಹೊರಗೆ ಪ್ರಜಾಪ್ರಭುತ್ವದ ಪ್ರತಿಭಟನೆಯ ಎಲ್ಲಾ ಮಾರ್ಗಗಳನ್ನು ಬಳಸುತ್ತದೆ."

ಅಧಿಕಾರಕ್ಕೆ ಬಂದ ನಂತರ ನಿಜ ಬಣ್ಣ ಬಯಲು

ಬಿಜೆಪಿ ವಿರೋಧ ಪಕ್ಷದಲ್ಲಿದ್ದಾಗ, 2012 ರಲ್ಲಿ, ಬಹುಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐಗೆ ಅವಕಾಶ ನೀಡುವ ಕಾಂಗ್ರೆಸ್ ನೇತೃತ್ವದ ಯುಪಿಎ–2 ರ ಸರ್ಕಾರದ ನಿರ್ಧಾರವನ್ನು ತೀವ್ರವಾಗಿ ವಿರೋಧಿಸಿದ್ದು ಹೀಗೆ. ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಹೂಡಿಕೆ ವಿರೋಧಿಸಿ, ಅದರ ವಿರುದ್ಧ ದೇಶಾದ್ಯಂತ ಚಿಲ್ಲರೆ ವ್ಯಾಪಾರಿಗಳನ್ನು ಸಂಘಟಿಸಿದ ಬಿಜೆಪಿ, ದೊಡ್ಡ ಮಟ್ಟದ ಹೋರಾಟ ನಡೆಸಿತು. 2014ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಪಡೆದ ಶೇ. 31 ರಷ್ಟು ಮತಗಳಲ್ಲಿ ಸಣ್ಣ ವ್ಯಾಪಾರಿಗಳ ಪಾಲೂ ಇದೆ.

ಇದರ ಜೊತೆಗೆ ವಿರೋಧ ಪಕ್ಷಗಳ ಮತ ವಿಭಜನೆಯ ತಂತ್ರದ ಮೂಲಕ ಅಧಿಕಾರಕ್ಕೆ ಬಂದ ಮೋದಿ ನಂತರ, ತಾನೇ ವಿರೋದಿಸಿದ್ದ ಎಫ್‌ಡಿಐ ಅನ್ನು ಸರ್ಕಾರದ ಅಧಿಸೂಚನೆಯ ಮೂಲಕ ಔಪಚಾರಿಕವಾಗಿ ರದ್ದುಗೊಳಿಸಲಿಲ್ಲ. ಅದನ್ನು ಉಳಿಸಿಕೊಂಡಿತು ಮತ್ತು 2018ರಲ್ಲಿ ಏಕ ಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ ಸ್ವಯಂಚಾಲಿತ ಮಾರ್ಗದ ಮೂಲಕ ಶೇ. 100 ವಿದೇಶಿ ನೇರ ಹೂಡಿಕೆಗೆ ಅವಕಾಶ ಕೊಟ್ಟಿತು. ಕೆಲವು ಷರತ್ತುಗಳಿಗೆ ಒಳಪಟ್ಟು, ಯಾವುದೇ ಸರ್ಕಾರದ ಅನುಮೋದನೆಯಿಲ್ಲದೆ, ಏಕ ಬ್ರಾಂಡ್ ಚಿಲ್ಲರೆ ವ್ಯಾಪಾರ (SBRT) ವ್ಯವಹಾರದಲ್ಲಿ ತೊಡಗಿರುವ ಘಟಕಗಳಲ್ಲಿ 100 ಪ್ರತಿಶತದವರೆಗೆ FDI ಅನ್ನು ಅನುಮತಿಸಿತು.

ಬಿಜೆಪಿ ಮತ್ತು ಸಂಘಪರಿವಾರದ ಆರ್ಥಿಕ ನೀತಿ, ನಿಲುವುಗಳನ್ನು, ಅವರ ಗುಪ್ತ ಅಜೆಂಡಾಗಳನ್ನು ಬಲ್ಲವರಿಗೆ ಬಿಜೆಪಿಯ ಈ ನಾಟಕ ಆಶ್ಚರ್ಯ ಉಂಟುಮಾಡುವುದಿಲ್ಲ. ಆದರೆ, ಇದನ್ನು ಅರಿಯದ ಜನತೆ ಇವರ ಮಾತುಗಳಿಗೆ ಸದಾ ಮರುಳಾಗುತ್ತಲೇ ಇರುತ್ತಾರೆ. ಅಂದು ಬಿಜೆಪಿ ಮತ್ತು ಸಂಘಪರಿವಾರದ ಅಂಗ ಸಂಸ್ಥೆಗಳನ್ನು ನಂಬಿ, ಅವರ ನಾಯಕತ್ವದಲ್ಲಿ ಹೋರಾಟ ನಡೆಸಿದ ಚಿಲ್ಲರೆ ವ್ಯಾಪಾರಿಗಳು ತಾವು ಮೋಸಕ್ಕೊಳಗಾದೆವು ಎಂಬ ಅರಿವು ಮೂಡುವಷ್ಟರಲ್ಲಿ ಬಹಳಷ್ಟು ಸಣ್ಣ ವ್ಯಾಪಾರಿಗಳು, 11 ವರ್ಷಗಳ ಹಿಂದೆ ಸ್ವತಃ ಮೋದಿಯವರೇ ಎಚ್ಚರಿಸಿದ್ದಂತೆ ತಮ್ಮ ಅಂಗಡಿಗಳ ಬಾಗಿಲು ಮುಚ್ಚಿದ್ದಾರೆ.

ಇಂದು ಎಫ್‌ಡಿಐ ಗೆ ಸಮರ್ಥನೆ

ಇಷ್ಟಾದರೂ ಬಿಜೆಪಿಯವರಿಗೆ ತಾವು ಸುಳ್ಳು ಹೇಳುವ ಮೂಲಕ ಜನರನ್ನು ವಂಚಿಸಿದೆವು ಅಥವಾ ಇಂದಿಗೂ ಸುಳ್ಳು ಹೇಳುವ ಮೂಲಕ ವಂಚಿಸುತ್ತಿದ್ದೇವೆ ಎಂಬ ಕನಿಷ್ಟ ಪಶ್ಚತ್ತಾಪವೂ ಇರುವುದಿಲ್ಲ. ಅಂದು ಎಫ್‌ಡಿಐ ವಿರೋಧಿಸುವುದನ್ನು ಸಮರ್ಥಿಸಿಕೊಳ್ಳಲು ಎಷ್ಟೆಲ್ಲಾ ನಾಟಕ ಮಾಡಿದರೋ, ಇಂದು ಎಫ್‌ಡಿಐ ಗೆ ಅವಕಾಶ ಕೊಟ್ಟಿರುವುದನ್ನು ಸಮರ್ಥಿಸಿಕೊಳ್ಳಲು ಹೊಸ ಹೊಸ ಪದಗುಚ್ಚಗಳನ್ನು ಸೃಷ್ಟಿಸತೊಡಗಿದ್ದಾರೆ.

ಮೇ, 2022 ರಲ್ಲಿ ಹೈದರಾಬಾದ್‌ನಲ್ಲಿ ಇಂಡಿಯನ್ ಸ್ಕೂಲ್ ಆಫ್ ಬ್ಯುಸಿನೆಸ್‌ನ ಘಟಿಕೋತ್ಸವ ಸಮಾರಂಭದಲ್ಲಿ ಪ್ರಧಾನಿ ಮೋದಿ ಎಫ್‌ಡಿಐ ಅನ್ನು ಸಮರ್ಥಿಸಿದ್ದು ಹೀಗೆ, "ಭಾರತವು ಇಂದು ಬೆಳವಣಿಗೆಯ ಪ್ರಮುಖ ಕೇಂದ್ರವಾಗಿ ಹೊರಹೊಮ್ಮುತ್ತಿದೆ. ಕಳೆದ ವರ್ಷ, ಅತಿ ಹೆಚ್ಚು ಎಫ್‌ಡಿಐ ಭಾರತಕ್ಕೆ ಬಂದಿತ್ತು. ಭಾರತ ಎಂದರೆ ವ್ಯಾಪಾರ ಎಂದು ಇಂದು ಪುಟ 14 ಕ್ಕೆ



"ನಾನು ಎಸ್‌ಪಿ(ಸಮಾಜವಾದಿ ಪಕ್ಷ) ಮತ್ತು ಬಿಎಸ್‌ಪಿ ನಾಯಕರನ್ನು ಕೇಳಲು ಬಯಸುತ್ತೇನೆ, ಅವರು ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ ಅನ್ನು ಪ್ರಾಮಾಣಿಕವಾಗಿ ವಿರೋಧಿಸಿದರೆ, ಅವರು ತಕ್ಷಣ ತಮ್ಮ ಬೆಂಬಲವನ್ನು ಹಿಂಪಡೆಯಬೇಕು."

"ಯುಪಿಎ ವಿದೇಶಿಯರ ಸರ್ಕಾರ, ವಿದೇಶಿಯರಿಂದ ಮತ್ತು ವಿದೇಶಿಯರಿಗಾಗಿ."

"ಪ್ರಧಾನಿ ಏನು ಮಾಡುತ್ತಿದ್ದಾರೆಂದು ನನಗೆ ಗೊತ್ತಿಲ್ಲ. ಸಣ್ಣ ವ್ಯಾಪಾರಿಗಳು ಈಗ ತಮ್ಮ ಅಂಗಡಿ ಬಾಗಿಲುಗಳನ್ನು ಮುಚ್ಚುವ ಒತ್ತಡಕ್ಕೆ ಒಳಗಾಗುತ್ತಾರೆ."

ಚಿಲ್ಲರೆ ವ್ಯಾಪಾರದಲ್ಲಿ ಶೇ. 51 ರಷ್ಟು ವಿದೇಶಿ ನೇರ ಬಂಡವಾಳ ಹೂಡಿಕೆ (FDI) ವಿರೋಧಿಸಿ, ನರೇಂದ್ರ ಮೋದಿಯವರು ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ 2013ರಲ್ಲಿ ಹೇಳಿದ್ದು ಹೀಗೆ. ಇದೇ ಮೋದಿ ತಾನು ಅಧಿಕಾರಕ್ಕೆ ಬಂದ ನಂತರ, ಚಿಲ್ಲರೆ ವ್ಯಾಪಾರ, ಸೇವಾ ವಲಯ, ವಿಮೆ, ಹಣಕಾಸು ವಲಯ ಸೇರಿದಂತೆ ಬಹುತೇಕ ವಲಯಗಳಲ್ಲಿ ಎಫ್‌ಡಿಐ ಗೆ ಮುಕ್ತ ಅವಕಾಶ ಕೊಟ್ಟಿದೆ. ಬಿಜೆಪಿಯವರು ತಮ್ಮ ನಿಜವಾದ ಅಜೆಂಡಾಗಳನ್ನು ಮರೆಮಾಚಿ, ಕಾಲಕಾಲಕ್ಕೆ ಎನೆಲ್ಲಾ ನಾಟಕವಾಡುತ್ತಾರೆ ಎಂಬುದಕ್ಕೆ ಎಫ್.ಡಿ.ಐ. ವಿಷಯದಲ್ಲಿನ ಇವರ ವಿಭಿನ್ನ ಪಾತ್ರಗಳೇ ಸಾಕ್ಷಿ.

ಮೋದಿ–9 ವರ್ಷಗಳು–ಭಾಗ–24

ಎಫ್‌ಡಿಐ ವಿರೋಧಿಸಿ ಬಿಜೆಪಿ ಬುಕ್ ಲೆಟ್

ಅಂದು ಬಿಜೆಪಿ ಎಫ್‌ಡಿಐ ವಿರೋಧಿಸಿ, ಇದರ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು 40 ಪುಟಗಳ ಪುಸ್ತಕ ಮುದ್ರಿಸಿ ಪ್ರಕಟಿಸಿತ್ತು. ಪುಸ್ತಕದ ಮುನ್ನುಡಿ ಹೀಗಿದೆ.

ಬಹು ಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐಗೆ ಅನುಮತಿ ನೀಡಿದ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ನಿರ್ಧಾರವು ಎಲ್ಲಾ ಸುತ್ತಿನ ಟೀಕೆ ಮತ್ತು ಖಂಡನೆಗೆ ಗುರಿಯಾಗಿದೆ. 'ಸುಧಾರಣೆ' ಹೆಸರಿನಲ್ಲಿ, ಸರ್ಕಾರವು ದೀರ್ಘಾವಧಿಯ ರಾಷ್ಟ್ರೀಯ ಹಿತಾಸಕ್ತಿಯೊಂದಿಗೆ ರಾಜಿ ಮಾಡಿಕೊಂಡಿದೆ, ಇದು ನಮ್ಮ ಆರ್ಥಿಕತೆಯ ಮೇಲೆ ದೂರಗಾಮಿ ಪರಿಣಾಮಗಳನ್ನು ಬೀರುತ್ತದೆ. ಸರ್ಕಾರವು ನೀತಿ ಪಾರ್ಶ್ವವಾಯುವಿನ ಹಿಡಿತದಲ್ಲಿಲ್ಲ ಎಂದು ತೋರಿಸಲು, ಕಾಂಗ್ರೆಸ್ ನೇತೃತ್ವದ ಯುಪಿಎ ವಿದೇಶಿ ಒತ್ತಡಕ್ಕೆ ಮಣಿದಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಉದ್ಯೋಗ ಕಳೆದುಕೊಳ್ಳಲಿರುವ ಲಕ್ಷಾಂತರ ಸಣ್ಣ ವ್ಯಾಪಾರಿಗಳ ಮೇಲೆ ಈ ನಿರ್ಧಾರದ ಪರಿಣಾಮ ಬೀರುವುದು ಖಚಿತ. ಅದೇ ಸಮಯದಲ್ಲಿ ಉತ್ಪಾದನಾ ವಲಯವು ದೇಶದಲ್ಲಿ ಹೊಸ ಆರ್ಥಿಕ ಬಿಕ್ಕಟ್ಟನ್ನು ಸೃಷ್ಟಿಸುತ್ತದೆ. ಕಾಂಗ್ರೆಸ್ ನೇತೃತ್ವದ ಯುಪಿಎ ಈ ವಿಷಯದಲ್ಲಿ ತನ್ನ ಸಮ್ಮಿಶ್ರ ಪಾಲುದಾರರನ್ನು ಸಂಪರ್ಕಿಸಲು ಚಿಂತಿಸಲಿಲ್ಲ ಅಥವಾ ಪ್ರತಿಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದಿರುವುದು ಬಹಳ ದುರದೃಷ್ಟಕರ. ಬಹು ಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ ಅನ್ನು ಬಿಜೆಪಿ ಮೊದಲಿನಿಂದಲೂ ವಿರೋಧಿಸಿದೆ. 24 ನವೆಂಬರ್ 2011 ರಂದು ಕ್ಯಾಬಿನೆಟ್ ಮೊದಲ ಬಾರಿಗೆ ಪ್ರಸ್ತಾವನೆಯನ್ನು ಅನುಮೋದಿಸಿದಾಗ, ಲೋಕಸಭೆಯ ವಿರೋಧ ಪಕ್ಷದ ನಾಯಕಿ ಶ್ರೀಮತಿ ಸುಷ್ಮಾ ಸ್ವರಾಜ್ ಮತ್ತು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಶ್ರೀ ಅರುಣ್ ಜೇಟ್ಲಿ ಜಂಟಿ ಹೇಳಿಕೆಯಲ್ಲಿ ಈ ಕ್ರಮವನ್ನು ವಿರೋಧಿಸಿದ್ದಾರೆ. ನಂತರ ಸರ್ಕಾರ ನಿರ್ಧಾರವನ್ನು ಮುಂದೂಡಿತು. ಈ ನಿರ್ಧಾರವು ಭಾರತದ ಆರ್ಥಿಕತೆಯ ಸ್ವರೂಪವನ್ನೇ ಬದಲಿಸುವ ಸಾಧ್ಯತೆಯಿರುವುದರಿಂದ ಈ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಅಗತ್ಯವಿದೆ. ನಾವು ಈ ವಿಷಯದ ಬಗ್ಗೆ ವಿವಿಧ ದಾಖಲೆಗಳು, ಲೇಖನಗಳು ಮತ್ತು ಸಂಬಂಧಿತ ಪೇಪರ್‌ಗಳನ್ನು ಪ್ರಕಟಿಸುತ್ತಿದ್ದೇವೆ ಇದರಿಂದ ಜನರು ಸತ್ಯವನ್ನು ಅರಿತುಕೊಳ್ಳುತ್ತಾರೆ ಮತ್ತು ತಮ್ಮ ಕಳವಳಗಳನ್ನು ಬಲವಾಗಿ ಧ್ವನಿಸುತ್ತಾರೆ. ಸಮಸ್ಯೆಯ ವಿವಿಧ ಅಂಶಗಳನ್ನು ಹೈಲೈಟ್ ಮಾಡಲು ಕಿರುಪುಸ್ತಕವು ಸಹಾಯ ಮಾಡುತ್ತದೆ ಎಂದು ನಾವು ಭಾವಿಸುತ್ತೇವೆ.


ಪ್ರಕಾಶಕರು ಭಾರತೀಯ ಜನತಾ ಪಾರ್ಟಿ 11, ಅಶೋಕ ರಸ್ತೆ, ನವದೆಹಲಿ – 110003
ಅಕ್ಟೋಬರ್ 2012

ನೋಟು ರದ್ಧತಿಯ 7 ವರ್ಷಗಳ ನಂತರ ನಗದು ಚಲಾವಣೆ ದ್ವಿಗುಣ

ಇದು ಅಮೃತ ಕಾಲ

ಈ ನವೆಂಬರ್ 8 ನೋಟುರದ್ಧತಿಯ 7ನೇ 'ವಾರ್ಷಿಕ'ದ ದಿನ. ಪ್ರಚಾರಕ್ಕೆ ಕೋಟಿಗಟ್ಟಲೆ ಖರ್ಚು ಮಾಡಲು ಹೆಸರಾದ ಸರಕಾರದಿಂದ ಅದರ ಈ 'ಮಾಸ್ಟರ್‌ಸ್ಟ್ರೋಕ್' ನೆನಪಿನಲ್ಲಿ ಯಾವುದೇ ಜಾಹೀರಾತು ಪ್ರಕಟವಾಗಲಿಲ್ಲ, ಆದರೆ ಹಲವರು ಇದನ್ನು 'ರಾಷ್ಟ್ರೀಯ ಚಿಪ್ಪು ದಿನ'ವಾಗಿ ನೆನಪಿಸಿಕೊಂಡಿದ್ದಾರೆ. ಇದನ್ನು ಅನ್ವರ್ಥಕಗೊಳಿಸುವಂತೆ ಕಪ್ಪು ಹಣದ ಮೇಲೆ ಹತೋಟಿ ತರುವ ಒಂದು ಕ್ರಮವಾಗಿ ನಗದು ಚಲಾವಣೆಯನ್ನು ಕಡಿಮೆ ಮಾಡಲು ನೋಟುರದ್ಧತಿಯ ಹಿನ್ನೆಲೆಯಲ್ಲಿ ತಂದ ಹಣಕಾಸು ಡಿಜಿಟಲೀಕರಣದ ಕ್ರಮದ ನಿಜ ಫಲಿತಾಂಶ ದೇಶದ ಮುಂದೆ ಬಂದಿದೆ. ನವಂಬರ್ 2016ರಲ್ಲಿ 17ಲಕ್ಷ ಕೋಟಿ ರೂ. ಗಳಷ್ಟಿದ್ದ ನಗದು ಚಲಾವಣೆ ಅಕ್ಟೋಬರ್ 2023ರಲ್ಲಿ 33ಲಕ್ಷ ಕೋಟಿ ರೂ.ಗಳಿಗೇರಿದೆ ಎಂದು ಒಂದು ಸಮೀಕ್ಷೆ ತಿಳಿಸುತ್ತದೆ (ನ್ಯೂಸ್ ಕ್ಲಿಕ್, ನವಂಬರ್8).

ಕಳೆದ ವರ್ಷ ಇದು 30.88 ಲಕ್ಷ ಕೋಟಿ ರೂ. ಇತ್ತು. ಕಳೆದ ವರ್ಷದ ಈ ವ್ಯಂಗ್ಯಚಿತ್ರವನ್ನು ನೋಡಿ:



ಕೃಪೆ: ಪಿ.ಮಹಮ್ಮದ್

ಕಪ್ಪು ಹಣದ ಬಳಕೆಗೆ ಕಡಿವಾಣ ಹಾಕಲು ನವೆಂಬರ್ 8 2016 ರಂದು 500 ಮತ್ತು 1,000 ರೂ ನೋಟುರದ್ಧತಿಯನ್ನು ಘೋಷಿಸಲಾಯಿತು. ಶೀಘ್ರದಲ್ಲೇ, ನಗದು ವಹಿವಾಟುಗಳನ್ನು ಕಡಿಮೆ ಮಾಡಲು ಯುನಿಫೈಡ್ ಪೇಮೆಂಟ್ಸ್ ಇಂಟರ್ಫೇಸ್ (ಯುಪಿಐ) ಮತ್ತು ಇತರ ಡಿಜಿಟಲ್ ಪಾವತಿ ಕಾರ್ಯವಿಧಾನಗಳನ್ನು ಪರಿಚಯಿಸಲಾಯಿತು.

ಆದರೂ ಚಲಾವಣೆಯಲ್ಲಿರುವ ನಗದು ಪ್ರಮಾಣ ಕಡಿಮೆಯಾಗುವುದು ಒತ್ತಟ್ಟಿಗಿರಲಿ, ತದ್ವಿರುದ್ಧವಾಗಿ ವರ್ಷ-ವರ್ಷ ಹೆಚ್ಚುತ್ತಿದೆ, ಏಳು ವರ್ಷಗಳಲ್ಲಿ ದ್ವಿಗುಣಗೊಂಡಿದೆ.

363 ಜಿಲ್ಲೆಗಳಲ್ಲಿ 44,000 ಮಂದಿಯ ನಡುವೆ ನಡೆಸಿದ ಈ ಸಮೀಕ್ಷೆಯ ಪ್ರಕಾರ, ಮೇ ತಿಂಗಳಲ್ಲಿ ಒಟ್ಟು ಚಿಲ್ಲರೆ ಡಿಜಿಟಲ್ ಪಾವತಿಗಳಲ್ಲಿ 78% ಕ್ಕಿಂತ ಹೆಚ್ಚು ಯುಪಿಐ ಮೂಲಕವೇ ನಡೆದಿದ್ದರೂ, 76% ಆಸ್ತಿ ಖರೀದಿದಾರರು ಕಳೆದ ಏಳು ವರ್ಷಗಳಲ್ಲಿ ತಾವು ತೆತ್ತ ಬೆಲೆಯ ಒಂದು ಭಾಗವನ್ನು ನಗದು ರೂಪದಲ್ಲಿ ಪಾವತಿಸಬೇಕಾಗಿ ಬಂದಿದೆ ಎಂದು ಹೇಳಿದ್ದಾರೆ. ಮೇಲ್ನೋಟಕ್ಕೇ ಅನುಭವಕ್ಕೆ ಬರುತ್ತಿರುವ ಸಂಗತಿಯನ್ನು ಇದು ಖಾತ್ರಪಡಿಸಿದೆಯಷ್ಟೇ. "ನಗದನ್ನು ಇನ್ನೂ ದೊಡ್ಡ ವಹಿವಾಟುಗಳಲ್ಲಿ, ವಿಶೇಷವಾಗಿ ಆಸ್ತಿ ವಹಿವಾಟುಗಳಲ್ಲಿ ಹೆಚ್ಚು ಬಳಸಲಾಗುತ್ತಿದೆ" ಎಂದು ಸಮೀಕ್ಷೆ ಹೇಳಿದೆ.

ವಾಸ್ತವವಾಗಿ, ಆಸ್ತಿ ವಹಿವಾಟುಗಳಲ್ಲಿನ ನಗದು ಅಂಶವು ಮತ್ತೆ ಹೆಚ್ಚುತ್ತಿದೆ. ಏಕೆಂದರೆ ಎರಡು ವರ್ಷಗಳ ಹಿಂದೆ 30% ನಷ್ಟು ಹಣವನ್ನು ನಗದಿನಲ್ಲಿ ಪಾವತಿಸಬೇಕಾಗಿ ಬರಲಿಲ್ಲ ಎಂದಿದ್ದರೆ, ಈಗ ಆ ಸಂಖ್ಯೆ 24% ಕ್ಕೆ ಇಳಿದಿದೆ. ಆದರೆ 2021 ರ ಸಮೀಕ್ಷೆಗೆ ಹೋಲಿಸಿದರೆ, ನಗದು ರೂಪದಲ್ಲಿ ವಸ್ತುಗಳನ್ನು ಖರೀದಿಸದ ಗ್ರಾಹಕರ ಶೇಕಡಾವಾರು ಪ್ರಮಾಣವು 11 ರಿಂದ 15 ಕ್ಕೆ ಸ್ವಲ್ಪ ಹೆಚ್ಚಾಗಿದೆ.

ಯುಪಿಐ ವಹಿವಾಟುಗಳು 1,140 ಕೋಟಿ ದಾಟಿ, 17.6 ಲಕ್ಷ ಕೋಟಿ ಮೌಲ್ಯವನ್ನು ಮೀರಿದ ಹೊಸ ದಾಖಲೆ ನಿರ್ಮಾಣವಾದರೂ, 10,861 ಜನರಲ್ಲಿ, 15% ಜನರು 50% ವಹಿವಾಟುಗಳನ್ನು ನಗದು ರೂಪದಲ್ಲಿ ಪಾವತಿಸಬೇಕಾಗಿ ಬಂತು ಎಂದು ಹೇಳಿದ್ದಾರೆ, 18% ಜನರು ನಗದು ಘಟಕವು 30-50% ಎಂದು ಹೇಳಿದ್ದಾರೆ. ಮತ್ತು 15% ಇದು 0-10% ಎಂದು ಹೇಳಿದರು.

ವಾಹನ ಅಥವಾ ಗ್ಯಾಜೆಟ್‌ನಂತಹ ಹೆಚ್ಚಿನ-ಮೌಲ್ಯದ ಉತ್ಪನ್ನಗಳನ್ನು ಹೊರತುಪಡಿಸಿ, ಹೆಚ್ಚಿನ ಗ್ರಾಹಕರು ಇನ್ನೂ ತಮ್ಮ ದೈನಂದಿನ ಖರೀದಿಗಳಲ್ಲಿ ನಗದನ್ನೇ ಬಳಸುತ್ತಾರೆ ಎಂದು ಸಮೀಕ್ಷೆ ತೋರಿಸುತ್ತದೆ.

ಅಲ್ಲದೆ, ಸಮೀಕ್ಷೆಗೆ ಒಳಗಾದ 26% ಭಾರತೀಯರು ಇನ್ನೂ ತಮ್ಮ ಮನೆಯ ಹೆಚ್ಚಿನ ಖರೀದಿಗಳಿಗೆ ಮತ್ತು ರಸೀದಿ ಇಲ್ಲದೆ ಹಣವನ್ನು ಬಳಸುವುದಾಗಿ ಹೇಲಿದ್ದಾರೆ. ಕೇವಲ 15% ಜನರು ಮಾತ್ರ ನಗದು ವಹಿವಾಟು ನಡೆಸುವುದಿಲ್ಲ.

ಪ್ರತಿಕ್ರಿಯಿಸಿದವರಲ್ಲಿ ಶೇಕಡಾ 7 ರಷ್ಟು ಜನರು ಕಳೆದ 12 ತಿಂಗಳುಗಳಲ್ಲಿ ದೀರ್ಘಾವಧಿಯ ಆಸ್ತಿಗಳು ಅಥವಾ ಆಸ್ತಿ, ಆಭರಣಗಳು, ಬಳಸಿದ ವಾಹನಗಳು ಇತ್ಯಾದಿ ಮೌಲ್ಯಯುತ ವಸ್ತುಗಳನ್ನು ಖರೀದಿಸಿದ್ದಾರೆ. ಕಳೆದ 12 ತಿಂಗಳುಗಳಲ್ಲಿ ಸ್ಮಾರ್ಟ್‌ಫೋನ್‌ಗಳು ಮತ್ತು ಲ್ಯಾಪ್‌ಟಾಪ್‌ಗಳನ್ನು ಖರೀದಿಸಲು ಕೇವಲ ನಾಲ್ಕು ಪ್ರತಿಶತದಷ್ಟು ಜನರು ಮಾತ್ರ ಹಣವನ್ನು ಬಳಸಿದ್ದಾರೆ.

18% ಜಿಎಸ್ಟಿ ದರಗಳು ತೆರಿಗೆ ವಿಧಿಸಬಹುದಾದ ವ್ಯವಹಾರಗಳಲ್ಲಿ ನಗದು ವ್ಯವಹಾರಕ್ಕೆ ಪ್ರೇರೇಪಿಸುವ ಒಂದು ಸಂಗತಿಯಾಗಿದೆ ಎಂದೂ ಸಮೀಕ್ಷೆಯಲ್ಲಿ ತಿಳಿದು ಬಂದಿದೆ.

ನೋಟುರದ್ದತಿಯ ಇತರ ಘೋಷಿತ ಉದ್ದೇಶಗಳಂತೂ ಮರೆತೇ ಹೋದಂತಿದೆ. ಏಳು ವರ್ಷಗಳಾದರೂ ಕಪ್ಪುಹಣ ಸ್ವಿಸ್ ಬ್ಯಾಂಕುಗಳಿಂದ ವಾಪಾಸು ಬರಲಿಲ್ಲ, ಭ್ರಷ್ಟಾಚಾರ ಕೊನೆಗೊಂಡಿಲ್ಲ, ಭಯೋತ್ಪಾದನೆಯೂ ನಿಂತಿಲ್ಲ ಎಂದು ಎದ್ದು ಕಾಣುತ್ತಿದೆ.

ಇವನ್ನೆಲ್ಲ ತಡೆಯುವ 'ಚಿಪ್' ಹೊಂದಿದೆಯೆಂದು ಭಕ್ತರು ಪ್ರಚಾರ ಮಾಡಿದ 2000ರೂ. ನೋಟೇ ಒಂದು ತಿಂಗಳ ಹಿಂದೆ ಸಂಪೂರ್ಣ ಚಲಾವಣೆಯಿಂದ ಹೊರಗಾಗಿದೆ.

ಕಳೆದ 10 ವರ್ಷಗಳಲ್ಲಿ ಸ್ವಿಸ್ ಬ್ಯಾಂಕ್‌ಗಳಲ್ಲಿ ಪೇರಿಸಿಟ್ಟ ಕಪ್ಪುಹಣ ಎಷ್ಟು ಎಂಬ ಬಗ್ಗೆ ಅಂದಾಜುಮಾಡಿಲ್ಲ ಎಂದು ಹಣಕಾಸು ಮಂತ್ರಾಲಯ ಹೇಳುತ್ತದೆ.

ಭ್ರಷ್ಟಾಚಾರ ಎಂದಿನಂತೆ ಮುಂದುವರೆದಿದೆ ಎಂಬುದಕ್ಕೆ ಸಾಕ್ಷ್ಯಗಳೇ ಬೇಕಿಲ್ಲ. ಭ್ರಷ್ಟಾಚಾರದ ಆರೋಪಕ್ಕೆ ಒಳಗಾದ ಬಿಜೆಪಿ ಶಾಸಕರು ತಲೆಮರೆಸಿಕೊಂಡ ಘಟನೆ ಕರ್ನಾಟಕದಲ್ಲೇ ನಡೆದಿದೆ. ಕೇಂದ್ರ ಸರಕಾರದ ಸ್ಕೀಮುಗಳು/ಯೋಜನೆಗಳಲ್ಲಿ ಭ್ರಷ್ಟಾಚಾರದ ಸಂಗತಿಗಳನ್ನು ವರದಿ ಮಾಡಿದ್ದಕ್ಕೆ ಸಿಎಜಿ ಅಧಿಕಾರಿಗಳನ್ನು ವರ್ಗ ಮಾಡಲಾಗಿದೆ ಎಂಬ ಆರೋಪವೂ ಇತ್ತೀಚೆಗೆ ಕೇಳಬಂದಿದೆ.

ಹಾಗೆಯೇ, ನೋಟು ರದ್ಧತಿಯಿಂದ ಭಯೋತ್ಪಾದಕರಿಗೆ ನಿಧಿ ನೀಡಿಕೆ ಕಡಿತಗೊಳ್ಳುತ್ತದೆ ಎಂಬುದೂ ಯಾವಾಗಲೋ ಹುಸಿಯಾಗಿದೆ. ಅಷ್ಟೇ ಅಲ್ಲ, ಕೆಲವು ತಿಂಗಳ ಹಿಂದೆ ಸೆರೆಸಿಕ್ಕ ಲಷ್ಕರ್ ಭಯೋತ್ಪಾದಕ ಜಮ್ಮುವಿನ ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾದ ಐಟಿ ಸೆಲ್ ಮುಖ್ಯಸ್ಥ ಎಂದು ಬಯಲಿಗೆ ಬಂದಿದೆ. ಅಲ್ಲದೆ "ಭಯೋತ್ಪಾದಕರಿಗೆ ನಿಧಿ ಒದಗಿಸಿದ" ಎಂಬ ತನಿಖೆಗೆ ಒಳಗಾದ ಕಂಪೆನಿಯಿಂದ ಬಿಜೆಪಿಯೇ ಡೋನೇಷನ್ ಸ್ವೀಕರಿಸಿದೆ ಎಂದೂ ವರದಿಯಾಗಿತ್ತು.

ಆಗಲೇ ಭಾರೀ ಟೀಕೆಗಳು ಬಂದಾಗ 50 ದಿನಗಳಲ್ಲಿ ನೋಟುರದ್ಧತಿಯ ಫಲ ಕಾಣದಿದ್ದರೆ ಎಂತಹ ಶಿಕ್ಷೆಗೂ ಸಿದ್ಧ ಎಂದು ಭಾವುಕರಾಗಿ ಹೇಳಿದ್ದ ಪ್ರಧಾನಿಗಳು, ಆಮೇಲೆ ಇದರ ಫಲಗಳು ಭವಿಷ್ಯದಲ್ಲಿ ಕಾಣುತ್ತದೆ ಎಂದಿದ್ದರು ಎಂಬುದನ್ನು ಮೇಲಿನ ವ್ಯಂಗ್ಯಚಿತ್ರ ನೆನಪಿಸುತ್ತದೆ.



7 ವರ್ಷಗಳ ನಂತರ ...."ಯಾರಾದರೂ ನನ್ನ ಭವಿಷ್ಯ ಹೇಳಬಲ್ಲರೇ?"
ಕೃಪೆ: ಅಲೋಕ್ ನಿರಂತರ್, ಫೇಸ್‌ಬುಕ್

"ಕಡಿಮೆ ಸರಕಾರ"-ಪಾಶ್ಚಾತ್ಯ ಕನ್ಸಲ್ಟೆನ್ಸಿ ಕಂಪನಿಗಳಿಗೆ ಹೊರಗುತ್ತಿಗೆ ನೀಡುವ ಸರಕಾರ!

ಕಳೆದ 5 ವರ್ಷಗಳಲ್ಲಿ 16 ಮಂತ್ರಾಲಯಗಳು ಬಹು ಮಹತ್ವದ 308 ಪ್ರಾಜೆಕ್ಟ್‌ಗಳನ್ನು 5 ಬಹುದೊಡ್ಡ ಪಾಶ್ಚಾತ್ಯ ಕನ್ಸಲ್ಟೆನ್ಸಿ ಕಂಪನಿಗಳಿಗೆ ಹೊರಗುತ್ತಿಗೆ ನೀಡಿವೆ, ಇದಕ್ಕಾಗಿ ಕೇಂದ್ರ ಸರಕಾರ 500 ಕೋಟಿ ರೂ.ಗಳನ್ನು ಖರ್ಚು ಮಾಡಿದೆ ಎಂಬ ಸಂಗತಿ ಬಯಲಿಗೆ ಬಂದಿದೆ. ಇನ್ನೊಂದು ವರ್ಷದಲ್ಲಿ ಇದು 750 ಕೋಟಿ ರೂ.ಗಳಿಗೆ ಏರಬಹುದು ಎಂದು ಅಂದಾಜು ಮಾಡಲಾಗಿದೆ. ಈ 16ರಲ್ಲಿ ಗ್ರಾಮೀಣ ಅಭಿವೃದ್ಧಿ ಮಂತ್ರಾಲಯವೂ ಸೇರಿದೆ! ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯವೂ ಸೇರಿದೆ!

'ಇಂಡಿಯನ್ ಎಕ್ಸ್‌ಪ್ರೆಸ್' ಆರ್‌ಟಿಐ ಅರ್ಜಿಯ ಮೂಲಕ ಪಡೆದ ಮಾಹಿತಿಗಳ ಪ್ರಕಾರ ಪ್ರೈಸ್ ವಾಟರ್ ಕೂಪರ್ (ಪಿಡಬ್ಲ್ಯುಸಿ) ಕಂಪನಿ 156 ಕೋಟಿ ರೂ.ಗಳ 92 ಕಾಂಟ್ರಾಕ್ಟುಗಳನ್ನು, ಡಿಲೋಯ್ಟ್ 130 ಕೋಟಿ ರೂ.ಗಳ (59), ಅರ್ನ್ಸ್ಟ್ ಅಂಡ್ ಯಂಗ್(ಇ&ವೈ) 88 ಕೋಟಿ ರೂ. ಗಳ (87), ಕೆಪಿಎಂಜಿ 68 ಕೋಟಿ ರೂ.ಗಳ (66) ಮತ್ತು ಮೆಕಿನ್ಸೆ 50 ಕೋಟಿ ರೂ.ಗಳ (3) ಕಾಂಟ್ರಾಕ್ಟುಗಳನ್ನು ಪಡೆದಿವೆ.

ಇದಕ್ಕೆ ಮೊದಲು ಮೋದಿ ಸರಕಾರ ತನ್ನ 'ವಿಷನ್ 2047' ಅಂದರೆ ಭಾರತ ಪಾಶ್ಚಿಮಾತ್ಯರ ವಸಾಹತುಶಾಹಿಯಿಂದ ಸ್ವಾತಂತ್ರ್ಯ ಪಡೆದು ನೂರು ವರ್ಷಗಳಾಗುವ ವೇಳೆಗೆ ಹೇಗಿರಬೇಕು ಎಂಬ ಕಣ್ಣೋಟ ನೀಡಲು ಅದೇ ಪಾಶ್ಚಿಮಾತ್ಯ ದೇಶಗಳ 'ಸಲಹಾಗಾರ' ಕಂಪನಿಯ 'ಸಲಹೆ'ಯನ್ನು ಪಡೆಯಲು ನಿರ್ಧರಿಸಿದೆ ಎಂದು ವರದಿಯಾಗಿತ್ತು. ಅಂದರೆ, ವಸಾಹತುಶಾಹಿ ಆಳ್ವಿಕೆಯಿಂದ ಸ್ವತಂತ್ರಗೊಂಡ ದೇಶದ ಸ್ವತಂತ್ರ ಭವಿಷ್ಯವನ್ನು ರೂಪಿಸಿದ ಯೋಜನಾ ಆಯೋಗವನ್ನು ರದ್ದು ಮಾಡಿದ ಸರಕಾರ ಈಗ ಆ ಕೆಲಸವನ್ನು ಪಾಶ್ಚಾತ್ಯ ಸಲಹಾ ಕಂಪನಿ ಬೋಸ್ಟನ್ ಕನ್ಸಲ್ಟಿಂಗ್ ಗ್ರುಪ್(ಬಿಸಿಜಿ)ಗೆ ಹೊರಗುತ್ತಿಗೆ ನೀಡಲು ಹೊರಟಿದೆ, ಇದು ಅಪಾಯಕಾರಿ ನಡೆ ಎಂದು ಈ ವಿದ್ಯಮಾನವನ್ನು ಆಳವಾಗಿ ಅಧ್ಯಯನ ಮಾಡಿರುವವರಲ್ಲಿ ಒಬ್ಬರಾದ ಗೋಪಿ ಕರುಣಾಕರನ್ ಹೇಳುತ್ತಾರೆ (ದಿ ಲೀಫ್‌ಲೆಟ್, ನವಂಬರ್5).

ಈ ಬಿಸಿಜಿ ಜಗತ್ತಿನ ಪ್ರಮುಖ ಬಂಡವಾಳಶಾಹಿ ರಾಷ್ಟ್ರ ಮತ್ತು ಸಾಮ್ರಾಜ್ಯಶಾಹಿ ಮನೋಭಾವದ ಯುಎಸ್‌ನ ಮೂರು ಅತಿ ದೊಡ್ಡ ಕನ್ಸಲ್ಟೆನ್ಸಿ ಕಂಪನಿಗಳಲ್ಲಿ ಒಂದು. ಇವು ಕಾರ್ಪೊರೇಟ್‌ಗಳಿಗೆ ಹೇಗೆ ಲಾಭ ಗಳಿಸಬೇಕು ಎಂದು ತಮ್ಮ ಪರಿಣಿತರ ಮೂಲಕ ಸಲಹೆ ಮಾಡುವುದನ್ನು ಅರ್ಥಮಾಡಿಕೊಳ್ಳಬಹುದು, ಆದರೆ ಸರಕಾರಗಳಿಗೆ, ಮತ್ತು ನಾಗರಿಕ ಸಮಾಜದ ಸಂಘಟನೆಗಳಿಗೆ ಸಲಹೆ ಕೊಡುವುದನ್ನು ಊಹಿಸಿಕೊಳ್ಳುವುದು ಬಹಳ ಕಷ್ಟವೇ ಎನ್ನುತ್ತಾರೆ ಇವರು. ಬಹುಶಃ ನಾವು ಅದಕ್ಕೆ 'ಅದೂ ಸಂಪೂರ್ಣವಾಗಿ ಭಿನ್ನ ಐತಿಹಾಸಿಕ ಸನ್ನಿವೇಶಗಳನ್ನು ಹೊಂದಿರುವ ಮೂರನೇ ಜಗತ್ತಿನ ದೇಶಗಳ ಸರಕಾರಗಳಿಗೆ' ಎಂದು ಸೇರಿಸಬಹುದೇನೋ.

ಜಾಗತಿಕ ಸಲಹಾ ಕಂಪನಿಗಳು ಸರಕಾರಗಳಿಗೆ ನೀಡಿರುವ ಇಂತಹ 'ಸಲಹಾ' ಸೇವೆಗಳ ಇತಿಹಾಸ ವಿಫಲತೆಗಳಿಂದ, ಕೆಟ್ಟ ಸಲಹೆಗಳಿಂದ, ವಶೀಲಿಬಾಜಿಯಿಂದ ಮತ್ತು ಹಲವು ವರ್ಷಗಳಿಂದ ಸಂಚಿತವಾದ ಸರಕಾರೀ ಪರಿಣಿತಿ, ಕೌಶಲ ಮತ್ತು ಜ್ಞಾನಗಳ ಕುಸಿತಗಳಿಂದ ತುಂಬಿದೆ ಎಂದು ಗೋಪಿ ಕರುಣಾಕರನ್ ಹೇಳುತ್ತಾರೆ.

ಆದರೆ ಸರ್ಕಾರಗಳ ಸಲಹಾ ಯೋಜನೆಗಳಿಂದ ಸಲಹಾ ಉದ್ಯಮವಂತೂ ಹೆಚ್ಚಿನ ಪ್ರಯೋಜನ ಪಡೆದಿದೆ. ಕನ್ಸಲ್ಟೆನ್ಸಿ ಕಂಪನಿಗಳು ಪಡೆಯುವ ಸಲಹಾ ಶುಲ್ಕ ಎಂಬ ಭಾರೀ ಮೊತ್ತಗಳ ಅವರು ನೀಡುವ 'ಸಲಹೆಗಳ' ಮೌಲ್ಯಗಳಿಗೆ ಹೋಲಿಸಿದರೆ ಬಹಳ ಹೆಚ್ಚು.

ಸಲಹಾ ಉದ್ಯಮವು ಸಾರ್ವಜನಿಕರನ್ನು ರಕ್ಷಿಸಲು ಇರುವ ಪ್ರಜಾಪ್ರಭುತ್ವ' ನಿಯಮಗಳಿಗೆ ವಿರುದ್ಧವಾಗಿರುತ್ತದೆ. ಸಲಹಾ ಉದ್ಯಮದ ಅಪಾರದರ್ಶಕತೆ ಹೊಸದೇನಲ್ಲ. ಈ ಸಲಹಾ ಸಂಸ್ಥೆಗಳು ಸರ್ಕಾರದ ನಿರ್ಧಾರಗಳಲ್ಲಿ ಪ್ರಭಾವ ಬೀರುವುದು ಸಾರ್ವಜನಿಕರ ಅವಗಾಹನೆಗೆ ಬಾರದೆ ನಡೆಯುತ್ತದೆ, ಇಲ್ಲಿ ಪಾರದರ್ಶಕತೆಯ ಕೊರತೆಯಿರುತ್ತದೆ.

ಸರಕಾರ ಎಂಬುದು ಕೇವಲ ಲಾಭ-ನಷ್ಟಗಳ ಲೆಕ್ಕ ಹಾಕುವ ಕಂಪನಿಯಲ್ಲ. ಎಲರಿಗೂ ಒಳಿತು ಮಾಡುವಂತೆ ಸಾಮಾಜಿಕ-ಆರ್ಥಿಕ ವ್ಯವಸ್ಥೆಗಳನ್ನು, ಪರಿವರ್ತಿಸಲು ಅಗತ್ಯವಾದ ಪರಿಣಿತಿಗಳನ್ನು ಸರಕಾರ ವಿಕಾಸಗೊಳಿಸದಂತೆ ಈ ಕನ್ಸಲ್ಟೆನ್ಸಿ ಎಂಬುದು ತಡೆಯುತ್ತವೆ.

ಸಲಹಾ ಸಂಸ್ಥೆಗಳು ಸಾರ್ವಜನಿಕ ವಲಯದ ಸಂಸ್ಥೆಗಳನ್ನು ವಶಪಡಿಸಿಕೊಂಡಿವೆ, ಇದರಿಂದಾಗಿ ಅಂತಹ ಸಂಸ್ಥೆಗಳು ಸಾಮರ್ಥ್ಯಗಳನ್ನು ಕಳಕೊಂಡಿವೆ ಮಾತ್ರವಲ್ಲದೆ ಸಾರ್ವಜನಿಕ ಉದ್ದೇಶ ಮತ್ತು ದಿಕ್ಕಿನ ಪ್ರಜ್ಞೆಯನ್ನು ಕೂಡ ಕಳೆದುಕೊಳ್ಳುತ್ತವೆ ಎಂಬ ತೀರ್ಮಾನಕ್ಕೆ ಬಂದಿರುವ ಗೋಪಿಕುಮಾರ್, "ಹೆಚ್ಚಾಗಿ ಸರಕಾರಗಳು ವೈಫಲ್ಯಗಳಿಗೆ ಹೊಣೆಯನ್ನು ತಪ್ಪಿಸಿಕೊಳ್ಳಲು ಸಲಹೆಗಾರರನ್ನು ನೇಮಿಸುತ್ತವೆ. ಆದರೆ ಇಂತಹ ವೈಫಲ್ಯಗಳ ಹಣಕಾಸಿನ ವೆಚ್ಚದ ಹೊಣೆಗಾರಿಕೆ ಸರ್ಕಾರದ್ದೇ ಆಗಿರುತ್ತದೆ" ಎನ್ನುತ್ತಾರೆ.

ಮುಂದಿನ 25 ವರ್ಷಗಳಲ್ಲಿ ಒಂದು ಅಭಿವೃದ್ಧಿ ಹೊಂದಿದ ಅರ್ಥವ್ಯವಸ್ಥೆಯಾಗುವ ನಿಟ್ಟಿನಲ್ಲಿ ದೇಶದ ಮಧ್ಯಾವಧಿ ಗುರಿಗಳನ್ನು ಮತ್ತು ಆದ್ಯತೆಗಳನ್ನು ರೂಪಿಸುವ, ಆಳ್ವಿಕೆಯನ್ನು ಮತ್ತು ಸಾರ್ವಜನಿಕ ಒಳಿತುಗಳ ಲಭ್ಯತೆಯನ್ನು ಉತ್ತಮ ಪಡಿಸುವ ಬಗ್ಗೆ ಯೋಚಿಸಬೇಕಾದ 'ವಿಷನ್ 2047' ದಸ್ತಾವೇಜನ್ನು ಒಂದು ಜಾಗತಿಕ ಕನ್ಸಲ್ಟೆನ್ಸಿ ಕಂಪನಿಗೆ ವಹಿಸಿ ಕೊಡುವ ನಡೆಯ ಬಗ್ಗೆ ಎಚ್ಚರದಿಂದಿರಬೇಕಾಗಿದೆ ಎಂದು ಅವರು ಹೇಳುತ್ತಾರೆ.

ನವ-ಉದಾರವಾದಿ ವ್ಯವಸ್ಥೆಯಲ್ಲಿ ಖಾಸಗೀಕರಣದ ಭರವನ್ನು ನೋಡಿ, ಇವರು ಸರಕಾರವನ್ನೇ ಏಕೆ ಖಾಸಗೀಕರಿಸುವುದಿಲ್ಲ ಎಂದು ಖಾಸಗೀಕರಣದ ಟೀಕಾಕಾರರು ತಮಾಷೆಯಾಗಿ ಹೇಳುತ್ತಿದ್ದರು. ಆದರೆ ಈಗ ಈ ತಮಾಷೆಯೇ ನಿಜವಾಗುತ್ತಿರುವಂತೆ ಕಾಣುತ್ತದೆ.

"ಕಡಿಮೆ ಸರಕಾರ, ಹೆಚ್ಚು ಆಳ್ವಿಕೆ" ಎಂಬುದು 'ಅಚ್ಛೇ ದಿನ್'ಗಳ ಆರಂಭದಲ್ಲಿ ಈ ಸರಕಾರ ಕೊಟ್ಟ ಘೋಷಣೆ. ಅಂದರೆ ನಿಜವಾದ ಆಳ್ವಿಕೆ ಜನಗಳ ಪರವಾಗಿರುವ ಸರಕಾರದ್ದಲ್ಲ, ಸರಕಾರದಲ್ಲಿರುವವರ ಮೆಚ್ಚುಗೆಗೊಳಗಾದ ಕಂಪನಿಗಳದ್ದು ಎಂದರ್ಥವೇ?

ಚೀನಾವೂ ಒಂದು ಬಂಡವಾಳಶಾಹಿ ದೇಶವೇ?

ಅಮೆರಿಕಾ ಮತ್ತು ಚೀನಾ ನಡುವಿನ ವೈರುಧ್ಯವು ಸಾಮ್ರಾಜ್ಯಶಾಹಿಯ ನಡುವಿನ ಪೈಪೋಟಿಯ ಒಂದು ಅಭಿವ್ಯಕ್ತಿಯೇ? ಅಲ್ಲದಿದ್ದರೆ, ಇತ್ತೀಚಿನ ಅವಧಿಯಲ್ಲಿ ಚೀನಾದ ಎದ್ದುಕಾಣುವ ಪ್ರಗತಿಯನ್ನು ಹೇಗೆ ವಿವರಿಸಬಹುದು? ಕಮ್ಯುನಿಸ್ಟೇತರ ಎಡಪಂಥೀಯರು ಈ ಬಗ್ಗೆ ಗೊಂದಲ ಮಾಡಿಕೊಳ್ಳುತ್ತಿರುವಂತೆ ಕಾಣುತ್ತದೆ– ವಿಶೇಷವಾಗಿ ಪಾಶ್ಚಾತ್ಯ ಬಂಡವಾಳಶಾಹಿ ದೇಶಗಳಲ್ಲಿ. ಆದರೆ ಅವರು ವಿಶ್ಲೇಷಿಸುವಂತೆ, ಚೀನಾವೂ ಮುಂದುವರೆದ ಪಾಶ್ಚಾತ್ಯ ದೇಶಗಳಂತೆ ಸಾಮ್ರಾಜ್ಯಶಾಹಿ ಚಟುವಟಿಕೆಗಳಲ್ಲಿ ತೊಡಗಿದೆ ಅಂದರೆ, ಅದೂ ಈಗ ಒಂದು ಬಂಡವಾಳಶಾಹಿ ಅರ್ಥವ್ಯವಸ್ಥೆಯೇ ಎಂದು ಟೀಕಿಸುವುದು ಹಾಸ್ಯಾಸ್ಪದವಾಗುತ್ತದೆ. ಇದು ವಿಶ್ಲೇಷಣಾತ್ಮಕವಾಗಿ ತಪ್ಪು ಮಾತ್ರವಲ್ಲ, ಪಾಶ್ಚಾತ್ಯ ಬಂಡವಾಳಶಾಹಿ ದೇಶಗಳ ಕಾರ್ಮಿಕ ವರ್ಗಗಳು ಮತ್ತು ಭಾರತಂತಹ ಜಾಗತಿಕ ದಕ್ಷಿಣದ ದುಡಿಯುವ ಜನರ ಹಿತಾಸಕ್ತಿಗಳಿಗೆ ವಿರುದ್ಧವಾದ ನಿಲುವುಗಳಿಗೂ ಕಾರಣವಾಗುತ್ತಿದೆ. ವಾಸ್ತವವಾಗಿ, ಇದು ಅಂತರ್–ಸಾಮ್ರಾಜ್ಯಶಾಹಿ ಪೈಪೋಟಿ ಅಲ್ಲ, ಬದಲಾಗಿ, ನವ–ಉದಾರೀಕರಣದ ಕಾಲದಲ್ಲಿ ಮೂರನೇ ಜಗತ್ತಿನ ದೇಶಗಳ ಸಂಪನ್ಮೂಲಗಳ ಮೇಲೆ ಪಾಶ್ಚಾತ್ಯ ಸಾಮ್ರಾಜ್ಯಶಾಹಿಯು ಮತ್ತೆ ತನ್ನ ಪ್ರಾಬಲ್ಯವನ್ನು ಸ್ಥಾಪಿಸುವುದಕ್ಕೆ ಚೀನಾದ ಮತ್ತು ಇತರ ದೇಶಗಳ ಪ್ರತಿರೋಧವನ್ನು ವ್ಯಕ್ತಮಾಡುತ್ತದೆ.

ಪ್ರೊ. ಪ್ರಭಾತ್ ಪಟ್ನಾಯಕ್ **ಅನು:ಕೆ.ಎಂ.ನಾಗರಾಜ್**

ಅಮೆರಿಕಾ ಮತ್ತು ಚೀನಾದ ನಡುವೆ ಬೆಳೆಯುತ್ತಿರುವ ವೈರುಧ್ಯವನ್ನು ಪಾಶ್ಚಾತ್ಯ ಕಮ್ಯುನಿಸ್ಟೇತರ ಎಡಪಂಥೀಯರಲ್ಲಿ ಅನೇಕರು ಒಂದು ಸಾಮ್ರಾಜ್ಯಶಾಹಿಗಳ ನಡುವೆಯೇ ಇರುವ ಪೈಪೋಟಿಯ ದೃಷ್ಟಿಕೋನದಿಂದ ನೋಡುತ್ತಾರೆ. ಅವರ ದೃಷ್ಟಿಯಲ್ಲಿ ಇದು ಮೂರು ವಿಭಿನ್ನ ಸೈದ್ಧಾಂತಿಕ ಕಾರ್ಯಗಳನ್ನು ನಿರ್ವಹಿಸುತ್ತದೆ: ಮೊದಲನೆಯದು, ಇದು ಅಮೆರಿಕಾ ಮತ್ತು ಚೀನಾದ ನಡುವೆ ಬೆಳೆಯುತ್ತಿರುವ ವೈರುಧ್ಯದ ಬಗ್ಗೆ ಒಂದು ವಿವರಣೆಯಾಗುತ್ತದೆ. ಎರಡನೆಯದು, ಇದಕ್ಕೆ ಸಾಮ್ರಾಜ್ಯಶಾಹಿಯ ಬಗ್ಗೆ ಲೆನಿನ್‌ರವರು ಪ್ರತಿಪಾದಿಸಿದ ಪರಿಕಲ್ಪನೆಯನ್ನು ತಾವು ಲೆನಿನ್‌ವಾದೀ ಚೌಕಟ್ಟಿನ ಪರಿಧಿಯೊಳಗೇ ಬಳಸುತ್ತಿದ್ದೇವೆ ಎಂಬ ಭಾವನೆ, ಮತ್ತು ಮೂರನೆಯದು, ಚೀನಾವನ್ನು ಉದಯೋನ್ಮುಖ ಸಾಮ್ರಾಜ್ಯಶಾಹಿ ಶಕ್ತಿ ಅಂದರೆ, ಚೀನಾ ಒಂದು ಬಂಡವಾಳಶಾಹಿ ಅರ್ಥವ್ಯವಸ್ಥೆಯೇ ಎಂದು ಟೀಕಿಸುವುದು. ಚೀನಾದ ಬಗ್ಗೆ ಅವರ ಈ ವ್ಯಾಖ್ಯಾನವು ಅತಿ–ಎಡಪಂಥದ ವಿಮರ್ಶೆಗೆ ಅನುಗುಣವಾಗಿದೆ.

ಈ ವಿವರಣೆಯಲ್ಲಿರುವ ಒಂದು ವಿಪರ್ಯಾಸವೆಂದರೆ, ಚೀನಾದ ವಿರುದ್ಧ ಅಮೆರಿಕನ್ ಸಾಮ್ರಾಜ್ಯಶಾಹಿಯ ಒಳಸಂಚುಗಳಲ್ಲಿ ಈ ಎಡಪಂಥೀಯರು ಸೂಚ್ಯವಾಗಿ ಅಥವಾ ನೇರವಾಗಿಯೇ ಭಾಗಿಯಾಗುವಂತೆ ಮಾಡುತ್ತದೆ ಎಂಬುದು. ಹೆಚ್ಚೆಂದರೆ, ಈ ವಿವರಣೆಯು ಈ ಎರಡೂ ದೇಶಗಳೂ ಸಾಮ್ರಾಜ್ಯಶಾಹಿ ದೇಶಗಳೇ ಎಂಬ ನಿಲುವಿನತ್ತ ಕೊಂಡೊಯ್ಯುತ್ತದೆ. ಹಾಗಾಗಿ, ಇವುಗಳಲ್ಲಿ ಒಂದನ್ನು ಇನ್ನೊಂದರ ವಿರುದ್ಧ ಬೆಂಬಲಿಸುವುದು ಅರ್ಥವಿಲ್ಲದ್ದು. ಒಂದು ಅತಿ ನಿಕೃಷ್ಟ ಮಟ್ಟದಲ್ಲಿ ಹೇಳುವುದಾದರೆ, ಇದು ಈ ಎರಡು ಸಾಮ್ರಾಜ್ಯಶಾಹಿ ಶಕ್ತಿಗಳ ನಡುವಿನ ಸಂಘರ್ಷದಲ್ಲಿ, "ಕಡಿಮೆ ದುಷ್ಟ" ಎಂದು ಅಮೆರಿಕಾವನ್ನು ಚೀನಾದ ವಿರುದ್ಧ ಬೆಂಬಲಿಸುವ ನಿಲುವಾಗುತ್ತದೆ. ಈ ಎರಡೂ ಸಂದರ್ಭಗಳಲ್ಲೂ, ಇದು ಚೀನಾದ ವಿರುದ್ಧ ಅಮೆರಿಕನ್ ಸಾಮ್ರಾಜ್ಯಶಾಹಿಯ ಆಕ್ರಮಣಕಾರಿ ನಿಲುವುಗಳಿಗೆ ವಿರೋಧದ ನಿಲುವನ್ನು ಅಳಿಸಿ ಬಿಡುತ್ತದೆ ತಪ್ಪಿಸುತ್ತದೆ. ಮತ್ತು, ಇದರಿಂದಾಗಿ, ಈ ಎರಡು ದೇಶಗಳು ಹೆಚ್ಚಿನ ಸಮಕಾಲೀನ ವಿಷಯಗಳಲ್ಲಿ ಹಣಾಹಣಿ ನಡೆಸುತ್ತಿರುವುದರಿಂದ, ಒಟ್ಟಾರೆಯಾಗಿ, ಅಮೆರಿಕನ್ ಸಾಮ್ರಾಜ್ಯಶಾಹಿಗೆ ವಿರೋಧವನ್ನು ತಗ್ಗಿಸಲು ಇದು ಕಾರಣವಾಗುತ್ತದೆ.




ಇತ್ತೀಚೆಗೆ ಬಹಳ ದಿನಗಳಿಂದಲೂ, ಅನೇಕ ಮಂದಿ ಪಾಶ್ಚಾತ್ಯ ಎಡಪಂಥೀಯರು, ತಾವು ಪಾಶ್ಚಾತ್ಯ ಸಾಮ್ರಾಜ್ಯಶಾಹಿಯನ್ನು ವಿರೋಧಿಸುವುದಾಗಿ ಹೇಳಿಕೊಳ್ಳುವವರೂ ಸಹ, ನಿರ್ದಿಷ್ಟ ಸಂದರ್ಭಗಳಲ್ಲಿ ಈ ಸಾಮ್ರಾಜ್ಯಶಾಹಿಯ ಕ್ರಮಗಳನ್ನು ಬೆಂಬಲಿಸುವ ನಿಲುವನ್ನೆ ತಳೆಯುವುದು ಕಂಡುಬಂದಿದೆ. ಸೆರ್ಬಿಯಾ ದೇಶವನ್ನು ಸ್ಲೊಬೊಡಾನ್ ಮಿಲೋಸೆವಿಚ್ ಆಳುತ್ತಿದ್ದಾಗ ಆ ದೇಶದ ಮೇಲೆ ನಡೆಸಿದ ಬಾಂಬ್ ದಾಳಿಯನ್ನು ಅವರು ಖಂಡಿಸಲಿಲ್ಲ. ಇನ್ನೂ ಮುಂದುವರೆಯುತ್ತಿರುವ ಉಕ್ರೇನ್ ಯುದ್ಧದಲ್ಲಿ ನ್ಯಾಟೋವನ್ನು ಬೆಂಬಲಿಸುವ ಅವರ ನಿಲುವಿನಲ್ಲೂ ಇದು ಸ್ಪಷ್ಟವಾಗಿ ಗೋಚರಿಸುತ್ತದೆ. ಪಾಶ್ಚಾತ್ಯ ಸಾಮ್ರಾಜ್ಯಶಾಹಿಯ ಸಕ್ರಿಯ ಬೆಂಬಲದೊಂದಿಗೆ ಗಾಝಾದಲ್ಲಿನ ಪ್ಯಾಲೆಸ್ತೀನಿಯರ ಮೇಲೆ ಇಸ್ರೇಲ್ ನಡೆಸುತ್ತಿರುವ ನರಮೇಧವನ್ನು ಬಲವಾಗಿ ವಿರೋಧಿಸದೆ ಇರುವ ಅವರ ನಿಲುವಿನಲ್ಲೂ ಇದು ಸ್ಪಷ್ಟವಾಗಿ ಗೋಚರಿಸುತ್ತದೆ. ಚೀನಾದ ಮೇಲೆ ಸಾಮ್ರಾಜ್ಯಶಾಹಿಗಳು ಹೊಂದಿರುವ ಆಕ್ರಮಣಕಾರಿ ನಿಲುವಿನ ಬಗ್ಗೆಯೂ ಸಹ ಅವರು, ಒಂದೋ ಮೌನ ವಹಿಸುತ್ತಾರೆ ಅಥವಾ ಅಮೆರಿಕಾವನ್ನು ಬೆಂಬಲಿಸುತ್ತಿರುವುದು ಇಂತಹುದೇ ನಿಲುವು ಎಂದು ಹೇಳಲಾಗದಿದ್ದರೂ, ಖಂಡಿತವಾಗಿಯೂ ಅವುಗಳಿಗೆ ಅನುಗುಣವಾಗಿಯೇ ಇದೆ.

ತಪ್ಪು ವಿಶ್ಲೇಷಣೆಯಷ್ಟೇ ಅಲ್ಲ...
ಕಾರ್ಮಿಕ–ವಿರೋಧಿ ನಿರೂಪಣೆ ಕೂಡ

ಪಾಶ್ಚಾತ್ಯ ಸಾಮ್ರಾಜ್ಯಶಾಹಿಯನ್ನು ನೇರವಾಗಿ ವಿರೋಧಿಸದಿರುವ ಇಂತಹ ನಿಲುವಿನ ಒಂದು ವಿಪರ್ಯಾಸವೆಂದರೆ, ಅದು ಮುಂದುವರೆದ ಬಂಡವಾಳಶಾಹೀ (ಮೆಟ್ರೊಪಾಲಿಟನ್) ದೇಶಗಳ ಕಾರ್ಮಿಕ ವರ್ಗದ ಹಿತಾಸಕ್ತಿಗಳಿಗೆ ಮತ್ತು ಭಾವನೆಗಳಿಗೆ ವ್ಯತಿರಿಕ್ತವಾಗಿದೆ. ಉದಾಹರಣೆಗೆ, ಯುರೋಪಿನ ಕಾರ್ಮಿಕ ವರ್ಗವು ಉಕ್ರೇನ್‌ನಲ್ಲಿ ನ್ಯಾಟೋದ ಪರೋಕ್ಷ ಯುದ್ಧವನ್ನು ಬಲವಾಗಿ ವಿರೋಧಿಸುತ್ತದೆ. ಉಕ್ರೇನ್‌ಗೆ ಯುರೋಪಿನ ಶಸ್ತ್ರಾಸ್ತ್ರಗಳ ಸಾಗಣೆಯಲ್ಲಿ ಅವನ್ನು ಲೋಡ್ ಮಾಡಲು ಕಾರ್ಮಿಕರು ನಿರಾಕರಿಸಿದ ಅನೇಕ ನಿದರ್ಶನಗಳಲ್ಲಿ ಅವರ ಯುದ್ಧ ವಿರೋಧಿ ನಿಲುವು ನಿಚ್ಚಳವಾಗಿ ಕಾಣುತ್ತದೆ. ಇದು ಆಶ್ಚರ್ಯದ ಸಂಗತಿಯೇನಲ್ಲ. ಏಕೆಂದರೆ, ಯುದ್ಧವು ಹಣದುಬ್ಬರವನ್ನು ಉಲ್ಬಣಗೊಳಿಸುವ ಮೂಲಕ ಕಾರ್ಮಿಕರ ಜೀವನದ ಮೇಲೆ ನೇರ ಪರಿಣಾಮ ಬೀರುತ್ತದೆ. ಆದರೆ, ಎಡಪಂಥೀಯರು ಈ ಯುದ್ಧವನ್ನು ನೇರವಾಗಿ ವಿರೋಧಿಸದಿರುವ ಸನ್ನಿವೇಶದಲ್ಲಿ, ಅನೇಕ ಕಾರ್ಮಿಕರು ಬಲಪಂಥೀಯ ಪಕ್ಷಗಳತ್ತ ತಿರುಗುವಂತಾಗಿದೆ. ಬಲಪಂಥೀಯರು ಅಧಿಕಾರಕ್ಕೆ ಬಂದ ನಂತರ, ಅವರ ನಿಲುವುಗಳು ಸಾಮ್ರಾಜ್ಯಶಾಹಿ ನಿಲುವುಗಳಿಗೆ ಅನುಗುಣವಾಗಿದ್ದರೂ, ವಿರೋಧ ಪಕ್ಷದಲ್ಲಿದ್ದ ಸಂದರ್ಭದಲ್ಲಿ ಕೊನೆಯ ಪಕ್ಷ ಅವರು ಸಾಮ್ರಾಜ್ಯಶಾಹಿ ನಿಲುವುಗಳನ್ನು ಟೀಕಿಸುತ್ತಾರೆ. ಇಟಲಿಯಲ್ಲಿ ಮೆಲೋನಿ ಅಧಿಕಾರ ಹಿಡಿದ ನಂತರ ಮಾಡಿದ್ದು ಇದನ್ನೇ. ಪಾಶ್ಚಾತ್ಯ ಸಾಮ್ರಾಜ್ಯಶಾಹಿಯ ವಿರುದ್ಧ ಪಾಶ್ಚಾತ್ಯ ಎಡಪಂಥೀಯರು ಸುಮ್ಮನಿರುವುದು ಈ ಮೆಟ್ರೊಪಾಲಿಟನ್ ದೇಶಗಳ ರಾಜಕೀಯವು ಬಲಪಂಥದತ್ತ ಹೊರಳಲು ಕಾರಣವಾಗುತ್ತಿದೆ. ಅಮೆರಿಕಾ–ಚೀನಾ ದೇಶಗಳ ನಡುವಿನ ವೈರುಧ್ಯವನ್ನು ಒಂದು ಅಂತರ್–ಸಾಮ್ರಾಜ್ಯಶಾಹಿ ಪೈಪೋಟಿಯಾಗಿ ನೋಡುವ ಕ್ರಮವೂ ಸಹ ಈ ನಿರೂಪಣೆಯ ಭಾಗವೇ.

ಒಂದು ಬಂಡವಾಳಶಾಹಿ ಅರ್ಥವ್ಯವಸ್ಥೆಯಾಗಿರುವ ಚೀನಾ, ಅಮೆರಿಕದೊಂದಿಗಿನ ಪೈಪೋಟಿಯಲ್ಲಿ ಪ್ರಪಂಚದಾದ್ಯಂತ ಸಾಮ್ರಾಜ್ಯಶಾಹಿ ಚಟುವಟಿಕೆಗಳಲ್ಲಿ ತೊಡಗಿದೆ ಎಂದು ಭಾವಿಸುವುದರ ಬಗ್ಗೆ ಹೇಳುವುದಾದರೆ, ಈ ದೃಷ್ಟಿಕೋನವನ್ನು ಹೊಂದಿರುವವರು, ಹೆಚ್ಚೆಂದರೆ,, ಅಂದರೆ "ಬಂಡವಾಳಶಾಹಿ" ಎಂದರೆ “ಕೆಟ್ಟದ್ದು”, “ಸಮಾಜವಾದ” ಎಂದರೆ "ಒಳ್ಳೆಯದು" ಎಂಬಂತಹ ಒಂದು ಉಪದೇಶಕಾರೀ ನಿಲುವನ್ನು ತೆಗೆದುಕೊಳ್ಳುತ್ತಾರೆ. ಅವರ ನಿಲುವನ್ನು ಹೀಗೆ ವಿವರಿಸಬಹುದು: “ಒಂದು ಸಮಾಜವಾದಿ ಸಮಾಜವು ಹೇಗೆ ವರ್ತಿಸಬೇಕು ಎಂಬುದರ ಬಗ್ಗೆ ನನಗೆ ನನ್ನದೇ ಆದ ಒಂದು ಕಲ್ಪನೆ ಇದೆ (ಅಂದರೆ, ಅದನ್ನು ಆದರ್ಶೀಕರಿಸುವ ಕಲ್ಪನೆ). ಒಂದು ವೇಳೆ ಚೀನಾದ ನಡವಳಿಕೆಯು ಕೆಲವು ವಿಷಯಗಳಲ್ಲಿ ನಾನು ಹೊಂದಿರುವ ಕಲ್ಪನೆಗಿಂತ ಭಿನ್ನವಾಗಿದ್ದರೆ, ಚೀನಾ ಸಮಾಜವಾದಿಯಾಗಿರುವುದು ಸಾಧ್ಯವಿಲ್ಲ. ಆದ್ದರಿಂದ, ಅದು ಬಂಡವಾಳಶಾಹಿಯೇ.”

‘ಬಂಡವಾಳಶಾಹಿ’ ಮತ್ತು ‘ಸಮಾಜವಾದಿ’ ಪದಗಳು ಒಂದು ನಿರ್ದಿಷ್ಟ ಅರ್ಥವನ್ನು ಹೊಂದಿವೆ. ಅವು ಒಂದು ನಿರ್ದಿಷ್ಟ ರೀತಿಯ ಚಲನೆಯೊಂದಿಗೆ ಸಂಬಂಧ ಹೊಂದಿವೆ ಮತ್ತು ಈ ಪ್ರತಿಯೊಂದು ಚಲನೆಯ ಮೂಲವೂ ಕೆಲವು ಮೂಲಭೂತ ಆಸ್ತಿ ಸಂಬಂಧಗಳಲ್ಲಿ ನೆಲೆಸಿದೆ. ನಿಜ, ಚೀನಾವು ಒಂದು ಗಮನಾರ್ಹ ಪ್ರಮಾಣದ ಬಂಡವಾಳಶಾಹಿ ವಲಯವನ್ನು ಹೊಂದಿದೆ. ಅಂದರೆ, ಬಂಡವಾಳಶಾಹಿ ಆಸ್ತಿ ಸಂಬಂಧಗಳಿರುವ ವಲಯ. ಆದರೆ, ಚೀನಾದ ಅರ್ಥವ್ಯವಸ್ಥೆಯ ಬಹುಪಾಲು ಇನ್ನೂ ಸರ್ಕಾರಿ ಸ್ವಾಮ್ಯದಲ್ಲಿದೆ ಮತ್ತು ಕೇಂದ್ರೀಕೃತ ದಿಕ್ಕಿನ ಲಕ್ಷಣವನ್ನೇ ಹೊಂದಿದೆ. ಹಾಗಾಗಿ, ಬಂಡವಾಳಶಾಹಿಯ ಹೆಗ್ಗುರುತು ಎನಿಸಿದ ಸ್ವಯಂಪ್ರೇರಣೆ(ಅಥವ "ಸ್ವಯಂಸ್ಫೂರ್ತತೆ")ಗೆ ತಡೆಯಿದೆ. ಚೀನಾದ ಅರ್ಥವ್ಯವಸ್ಥೆಯ ಬಗ್ಗೆ ಮತ್ತು ಚೀನೀ ಸಮಾಜದ ಅನೇಕ ಅಂಶಗಳ ಬಗ್ಗೆ ಟೀಕೆ ಟಿಪ್ಪಣಿ ಅಥವಾ ವಿಮರ್ಶೆ ಮಾಡುವುದೇನೊ ಸರಿ. ಆದರೆ, ಅದನ್ನು "ಬಂಡವಾಳಶಾಹಿ" ಎಂದು ಕರೆಯುವುದು ಮತ್ತು ಅದು ಪಾಶ್ಚಾತ್ಯ ಮೆಟ್ರೊಪಾಲಿಟನ್ (ಅಂದರೆ ಮುಂದುವರೆದ ಬಂಡವಾಳಶಾಹಿ) ದೇಶಗಳ ಅರ್ಥವ್ಯವಸ್ಥೆಗಳ ರೀತಿಯಲ್ಲಿ ಸಾಮ್ರಾಜ್ಯಶಾಹಿ ಚಟುವಟಿಕೆಗಳಲ್ಲಿ ತೊಡಗಿದೆ ಎಂದು ಹೇಳುವುದು ಹಾಸ್ಯಾಸ್ಪದವಾಗುತ್ತದೆ. ಇದು ವಿಶ್ಲೇಷಣಾತ್ಮಕವಾಗಿ ತಪ್ಪು ಮಾತ್ರವಲ್ಲ, ಮೆಟ್ರೊಪಾಲಿಟನ್ ದೇಶಗಳ ಕಾರ್ಮಿಕ ವರ್ಗಗಳು ಮತ್ತು ಜಾಗತಿಕ ದಕ್ಷಿಣದ ದುಡಿಯುವ ಜನರ ಹಿತಾಸಕ್ತಿಗಳಿಗೆ ವಿರುದ್ಧವಾದ ನಡವಳಿಕೆಗಳಿಗೂ ಕಾರಣವಾಗುತ್ತದೆ.



ಚೀನಾದ ಪ್ರಗತಿ–ಹೇಗೆ ವಿವರಿಸಬಹುದು?

ಆದರೆ ತಕ್ಷಣವೇ ಉದ್ಭವಿಸುವ ಒಂದು ಪ್ರಶ್ನೆಯೆಂದರೆ: ಅಮೆರಿಕಾ–ಚೀನಾ ನಡುವಿನ ವೈರುಧ್ಯವು ಒಂದು ಅಂತರ್–ಸಾಮ್ರಾಜ್ಯಶಾಹಿ ಪೈಪೋಟಿಯ ಅಭಿವ್ಯಕ್ತಿಯಲ್ಲದಿದ್ದರೆ, ಇತ್ತೀಚಿನ ಅವಧಿಯಲ್ಲಿ ಚೀನಾದ ಎದ್ದುಕಾಣುವ ಪ್ರಗತಿಯನ್ನು ನಾವು ಹೇಗೆ ವಿವರಿಸಬಹುದು? ಇದನ್ನು ಅರ್ಥಮಾಡಿಕೊಳ್ಳಲು ನಾವು ಎರಡನೇ ಮಹಾಯುದ್ಧದ ನಂತರದ ಅವಧಿಗೆ ಹಿಂತಿರುಗಬೇಕಾಗುತ್ತದೆ. ಯುದ್ಧದಿಂದ ಹೈರಾಣಾಗಿದ್ದ ಬಂಡವಾಳಶಾಹಿಯು ತನ್ನ ಅಸ್ತಿತ್ವದ ಬಿಕ್ಕಟ್ಟನ್ನು ಎದುರಿಸಿತು: ಮೆಟೊಪಾಲಿಟನ್ ದೇಶಗಳ ಕಾರ್ಮಿಕ ವರ್ಗವು ಸಾಮೂಹಿಕ ನಿರುದ್ಯೋಗ ಮತ್ತು ಬಡತನವನ್ನು ಉಂಟುಮಾಡಿದ್ದ ಯುದ್ಧಪೂರ್ವ ಬಂಡವಾಳಶಾಹಿ ರೀತಿ–ನೀತಿಗಳಿಗೆ ಹಿಂತಿರುಗಲು ಸಿದ್ಧವಿರಲಿಲ್ಲ. ಸಮಾಜವಾದವು ಪ್ರಪಂಚದಾದ್ಯಂತ ಮಹತ್ತರವಾದ ಪ್ರಗತಿಯನ್ನು ಸಾಧಿಸಿತ್ತು. ವಸಾಹತುಶಾಹಿ ಮತ್ತು ಅರೆ–ವಸಾಹತುಶಾಹಿ ದಬ್ಬಾಳಿಕೆಯ ವಿರುದ್ಧ ಜಾಗತಿಕ ದಕ್ಷಿಣದಲ್ಲಿ ವಿಮೋಚನಾ ಹೋರಾಟಗಳು ಉತ್ತುಂಗವನ್ನು ತಲುಪಿದ್ದವು. ಹಾಗಾಗಿ, ಬಂಡವಾಳಶಾಹಿಯು ತನ್ನ ಉಳಿವಿಗಾಗಿ ಹಲವಾರು ರೀತಿಯ ರಿಯಾಯಿತಿಗಳನ್ನು ಕೊಡಬೇಕಾಯಿತು: ಸಾರ್ವತ್ರಿಕ ವಯಸ್ಕ ಮತದಾನ, ಜನ ಕಲ್ಯಾಣ ಕ್ರಮಗಳು, ಅರ್ಥವ್ಯವಸ್ಥೆಯಲ್ಲಿ ಬೇಡಿಕೆ ನಿರ್ವಹಣೆಯಲ್ಲಿ ಸರ್ಕಾರದ ಹಸ್ತಕ್ಷೇಪ ಮತ್ತು ಎಲ್ಲಕ್ಕಿಂತ ಮಿಗಿಲಾಗಿ, ರಾಜಕೀಯ ಅವಸಾಹತೀಕರಣವನ್ನು ಔಪಚಾರಿಕವಾಗಿ ಒಪ್ಪಿಕೊಳ್ಳುವುದು.

ರಾಜಕೀಯ ಅವಸಾಹತೀಕರಣ ಎಂದರೆ ವಸಾಹತುಶಾಹೀ ಆಳ್ವಿಕೆಗೆ ಒಳಪಟ್ಟಿರುವ ದೇಶಗಳು ಆರ್ಥಿಕ ವಸಾಹತೀಕರಣದಿಂದ ಬಿಡುಗಡೆ ಹೊಂದುವುದು ಎಂದರ್ಥವಲ್ಲ. ಅಂದರೆ, ಅಲ್ಲಿಯವರೆಗೂ ಮೆಟ್ರೋಪಾಲಿಟನ್ ಬಂಡವಾಳವು ಹೊಸದಾಗಿ ಸ್ವತಂತ್ರವಾದ ಪಡೆದ ದೇಶಗಳಲ್ಲಿ ಮೂರನೇ ಜಗತ್ತಿನ ಸಂಪನ್ಮೂಲಗಳ ಮೇಲೆ ಚಲಾಯಿಸುತ್ತಿದ್ದ ನಿಯಂತ್ರಣವನ್ನು ವರ್ಗಾಯಿಸುವುದು ಎಂದಲ್ಲ. ವಾಸ್ತವವಾಗಿ ಅಂತಹ ವರ್ಗಾವಣೆಗಳ ವಿರುದ್ಧ ಸಾಮ್ರಾಜ್ಯಶಾಹಿಯು ಒಂದು ದೀರ್ಘಕಾಲದ ಹೋರಾಟವನ್ನೇ ನಡೆಸಿದೆ. ಗ್ವಾಟೆಮಾಲಾದ

ಪುಟ 15 ಕ್ಕೆ

ರಸಗೊಬ್ಬರ ಸಬ್ಸಿಡಿಗಳಲ್ಲಿ ತೀವ್ರ ಕಡಿತ-ಎಐಕೆಎಸ್ ಕಳವಳ

ಭಾರತ ಸರಕಾರ ಪೋಷಣಾಂಶ ಆಧಾರಿತ ಸಬ್ಸಿಡಿ(ಎನ್‌ಬಿಎಸ್) ಅಡಿಯಲ್ಲಿ ರಸಗೊಬ್ಬರದ ಮೇಲಿನ ಸಬ್ಸಿಡಿಗಳನ್ನು ಗಮನಾರ್ಹವಾಗಿ ಇಳಿಸುವ ನಿರ್ಧಾರವನ್ನು ದಿನಾಂಕ ಅಕ್ಟೋಬರ್ 26, 2023ರ ಅಧಿಸೂಚನೆಯಲ್ಲಿ ಘೋಷಿಸಿದೆ. ರಸಗೊಬ್ಬರ ಸಬ್ಸಿಡಿಗಳಲ್ಲಿ ಈ ಹಠಾತ್ ಮತ್ತು ತೀವ್ರ ಕಡಿತವು ಭಾರತದಾದ್ಯಂತ ರೈತರು ಮುಂಗಾರು ಬೆಳೆ ಋತುವಿಗೆ ಸಜ್ಜಾಗುತ್ತಿರುವ ನಿರ್ಣಾಯಕ ಸಮಯದಲ್ಲಿ ಬರುತ್ತಿದೆ ಎಂದು ಅಖಿಲ ಭಾರತ ಕಿಸಾನ್ ಸಭಾ ಈ ನಿರ್ಧಾರದ ಬಗ್ಗೆ ತನ್ನ ಆಳವಾದ ಕಳವಳ ಮತ್ತು ನಿರಾಶೆಯನ್ನು ವ್ಯಕ್ತಪಡಿಸಿದೆ.

ರಸಗೊಬ್ಬರ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ, ಅತ್ಯಂತ ಕೆಟ್ಟ ಕಾಲ ಕಳೆದಿದೆ ಎಂದು ನಿರಾಳವಾಗುತ್ತಿರುವಾಗಲೇ, ಬಿಕ್ಕಟ್ಟಿಗೆ ಸ್ಪಂದಿಸಿ ತಂದ ನೀತಿಗಳನ್ನು ಸರ್ಕಾರವು ತ್ವರಿತವಾಗಿ ಹಿಂದಕ್ಕೆ ಪಡೆಯುತ್ತಿದೆ. ರಸಗೊಬ್ಬರಗಳಿಗೆ, ವಿಶೇಷವಾಗಿ ಫಾಸ್ಫೇಟ್ ಮತ್ತು ಪೊಟ್ಯಾಶ್‌ಗಳಿಗೆ ಸಬ್ಸಿಡಿಗಳನ್ನು ತೀವ್ರವಾಗಿ ಕಡಿತಗೊಳಿಸಲಾಗಿದೆ, ಇದು ಭಾರತೀಯ ರೈತರ ದುಃಸ್ಥಿತಿಯನ್ನು ಉಲ್ಬಣಗೊಳಿಸುತ್ತದೆ ಎಂದು ಎಐಕೆಎಸ್ ಹೇಳಿದೆ. ಈ ಪ್ರಮುಖ ರಸಗೊಬ್ಬರಗಳ ಅಂತರರಾಷ್ಟ್ರೀಯ ಬೆಲೆಗಳು ಗಗನಕ್ಕೇರಿರುವ ಸಮಯದಲ್ಲಿ ಸಬ್ಸಿಡಿಗಳಲ್ಲಿನ ಈ ಕಡಿತವು ಭಾರತೀಯ ಕೃಷಿಯನ್ನು ಮಾರುಕಟ್ಟೆಯ ಏರಿಳಿತಗಳಿಗೆ ಈಡು ಮಾಡುತ್ತಿದೆ.

ವಿನಿಮಯ ದರದ ತೀವ್ರ ಸವಕಳಿಯನ್ನು ಲೆಕ್ಕಹಾಕಿದಾಗ, ಅಕ್ಟೋಬರ್ 2023 ರಲ್ಲಿ ಫಾಸ್ಫೇಟ್‌ಗಳ ಮೇಲಿನ ಸಬ್ಸಿಡಿಯು ಜೂನ್ 2020 ರಲ್ಲಿನ ಸಬ್ಸಿಡಿ ದರಕ್ಕಿಂತ ಕೇವಲ 9% ಹೆಚ್ಚಾಗಿದೆ ಎಂದು ದತ್ತಾಂಶಗಳು ಬಹಿರಂಗಪಡಿಸುತ್ತವೆ. ರಾಕ್ ಫಾಸ್ಫೇಟ್‌ನ ಅಂತರರಾಷ್ಟ್ರೀಯ ಬೆಲೆಗಳು ಜೂನ್ 2020 ರ ಬೆಲೆಗಳಿಗಿಂತ ಸರಿಸುಮಾರು 4.6 ಪಟ್ಟು ಹೆಚ್ಚಿವೆ. ಪೊಟ್ಯಾಷ್ ಪರಿಸ್ಥಿತಿಯ ಇನ್ನಷ್ಟು ಭೀಕರವಾಗಿದೆ, ಅಲ್ಲಿ ಸಬ್ಸಿಡಿಯನ್ನು ಬಿಕ್ಕಟ್ಟಿನ ಪೂರ್ವದ ಮಟ್ಟದ 23%ಕ್ಕೆ ಕಡಿತ ಮಾಡಲಾಗಿದೆ. ವಿನಿಮಯ ದರದ ಸವಕಳಿಯನ್ನು ಪರಿಗಣಿಸುವಾಗ ಈ ಕಡಿತ 80 %ದಷ್ಟಾಗುತ್ತದೆ. ತದ್ವಿರುದ್ಧವಾಗಿ, ಪೊಟ್ಯಾಸಿಯಮ್ ಕ್ಲೋರೈಡ್‌ನ ಅಂತರರಾಷ್ಟ್ರೀಯ ಬೆಲೆಗಳು ಜೂನ್ 2020 ರಲ್ಲಿದ್ದಕ್ಕಿಂತ 1.75 ಪಟ್ಟು ಹೆಚ್ಚಾಗಿವೆ.

“ರೈತರು ತಮ್ಮ ಜೀವನಾಧಾರವನ್ನು ಉಳಿಸಿಕೊಳ್ಳಲು ಮತ್ತು ದೇಶದ ಆಹಾರ ಭದ್ರತೆಯನ್ನು ಸುರಕ್ಷಿತಗೊಳಿಸಲು ಅಗತ್ಯವಾದ ಬೆಂಬಲ ಮತ್ತು ಸಬ್ಸಿಡಿಗಳನ್ನು ಪಡೆಯುವಂತಾಗಬೇಕು”

ಈ ತೀವ್ರವಾದ ಸಬ್ಸಿಡಿ ಕಡಿತಗಳು ಅನಿವಾರ್ಯವಾಗಿ ಭಾರತದಲ್ಲಿ ರಸಗೊಬ್ಬರ ಬೆಲೆಗಳಲ್ಲಿ ತೀವ್ರ ಹೆಚ್ಚಳಕ್ಕೆ ಕಾರಣವಾಗುತ್ತವೆ ಎಂದು ಎಐಕೆಎಸ್ ಆತಂಕ ವ್ಯಕ್ತಪಡಿಸಿದೆ.

ಭಾರತದ ಆಹಾರ ಭದ್ರತೆ ಮತ್ತು ರಾಸಾಯನಿಕ ಗೊಬ್ಬರಗಳ ಬಳಕೆಯ ನಡುವೆ ಆಳವಾದ ಸಂಬಂಧವಿದೆ. ಈ ಬಹುಮಹತ್ವದ ಲಾಗುವಾಡಿನಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆಗಳ ಮೇಲೆ ದೇಶದ ಅವಲಂಬನೆಯು ದಶಕಗಳ ನವ ಉದಾರವಾದಿ ನೀತಿಗಳಿಂದ ಉಲ್ಬಣಗೊಂಡಿದೆ. ರಸಗೊಬ್ಬರ ಬಿಕ್ಕಟ್ಟನ್ನು ಎದುರಿಸುವ ಪ್ರಶ್ನೆಗೆ ಭಾರತ ಸರ್ಕಾರದ ಎಡಬಿಡಂಗಿ ಅವ್ಯವಸ್ಥಿತ ಮತ್ತು ವಿಳಂಬವಾದ ಸ್ಪಂದನೆ ಅದರ ಆಂತರಿಕ ಬೆಲೆಗಳ ಮೇಲಿನ ಹಣದುಬ್ಬರದ ಪರಿಣಾಮವನ್ನು ತಗ್ಗಿಸುವಲ್ಲಿ ಮತ್ತು ರಸಗೊಬ್ಬರಗಳ ಸಮರ್ಪಕ ಪೂರೈಕೆಯನ್ನು ಖಾತ್ರಿಪಡಿಸುವಲ್ಲಿ ಏನೇನೂ ಸಾಲದಾಗಿದೆ ಎಂದು ಎಐಕೆಎಸ್ ತೀವ್ರ ನಿರಾಸೆ ವ್ಯಕ್ತಪಡಿಸಿದೆ.

ಈ ಬಿಕ್ಕಟ್ಟಿನಿಂದ ಯಾವುದೇ ಗಣನೀಯ ಪಾಠಗಳನ್ನು ಕಲಿತಿಲ್ಲ ಎಂಬುದು ಸ್ಪಷ್ಟವಾಗಿದೆ. ಕೆಲವು ರಸಗೊಬ್ಬರ ಕಂಪನಿಗಳಿಗೆ ಸಬ್ಸಿಡಿ ನೀಡುವುದನ್ನು ಮುಂದುವರಿಸುತ್ತಲೇ, ಯೂರಿಯಾವನ್ನು ಹೊರತುಪಡಿಸಿ ಇತರ ರಸಗೊಬ್ಬರಗಳ ಬೆಲೆಗಳನ್ನು ನಿಯಂತ್ರಣದಿಂದ ತೆಗೆದುಹಾಕಿರುವ ಪೋಷಣಾಂಶ ಆಧಾರಿತ ಸಬ್ಸಿಡಿ (ಎನ್‌ಬಿಎಸ್) ವ್ಯವಸ್ಥೆಯು ಬದಲಾಗದೆ ಉಳಿದಿದೆ. ಕಳೆದ ಮೂರು ವರ್ಷಗಳಿಂದ, ಗೊಬ್ಬರದ ಬೆಲೆ ಏರಿಕೆ, ರಸಗೊಬ್ಬರಗಳ ಪಡಿತರ ಪೂರೈಕೆ ಮಿತಿ, ವ್ಯಾಪಕವಾದ ಕಾಳಸಂತೆ ಮತ್ತು ರಸಗೊಬ್ಬರ ಕಂಪನಿಗಳು ಮತ್ತು ಡೀಲರ್‌ಗಳ ವಿವಿಧ ರೀತಿಯ ಅವ್ಯವಹಾರಗಳ ಹೊರೆಗಳಿಂದ ರೈತರು ಸಂಕಟಗ್ರಸ್ತರಾಗಿದ್ದಾರೆ. ಈಗಾಗಲೇ ಹಲವಾರು ಸವಾಲುಗಳನ್ನು ಎದುರಿಸುತ್ತಿರುವ ಭಾರತೀಯ ರೈತರ ಭವಿಷ್ಯ ಸರ್ಕಾರವು ಘೋಷಿಸಿರುವ ಈ ತೀವ್ರ ಸಬ್ಸಿಡಿ ಕಡಿತದಿಂದಾಗಿ ಮತ್ತಷ್ಟು ಮಸುಕಾಗಿದೆ ಎಂದಿರುವ ಅಖಿಲ ಭಾರತ ಕಿಸಾನ್ ಸಭಾ, ಸರ್ಕಾರವು ತನ್ನ ಈ ನಿರ್ಧಾರವನ್ನು ಹಿಂತೆಗೆದುಕೊಳ್ಳಬೇಕು ಮತ್ತು ರೈತರ ಸಮಸ್ಯೆಗಳನ್ನು ಪರಿಹರಿಸಲು ತಕ್ಷಣದ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದೆ, ರೈತರು ತಮ್ಮ ಜೀವನಾಧಾರವನ್ನು ಉಳಿಸಿಕೊಳ್ಳಲು ಮತ್ತು ದೇಶದ ಆಹಾರ ಭದ್ರತೆಯನ್ನು ಸುರಕ್ಷಿತಗೊಳಿಸಲು ಅಗತ್ಯವಾದ ಬೆಂಬಲ ಮತ್ತು ಸಬ್ಸಿಡಿಗಳನ್ನು ಪಡೆಯುವಂತಾಗಬೇಕು ಎಂದು ಅದು ಆಗ್ರಹಪಡಿಸಿದೆ. ●

ನ್ಯೂಸ್‌ಕ್ಲಿಕ್ ಎಫ್‌ಐಆರ್ ಸುಟ್ಟು ದೇಶಾದ್ಯಂತ ರೈತರ ಪ್ರತಿಭಟನೆ

ಸಂಯುಕ್ತ ಕಿಸಾನ್ ಮೋರ್ಚಾದ (ಎಸ್‌ಕೆಎಂ) ಕರೆಯ ಮೇರೆಗೆ ನ್ಯೂಸ್‌ಕ್ಲಿಕ್ ಮಾಧ್ಯಮ ಸಂಸ್ಥೆ ಮೇಲಿನ ಅನ್ಯಾಯಪೂರ್ಣ ದಾಳಿಯ ವಿರುದ್ಧ ಮತ್ತು ಅದರ ವಿರುದ್ಧ ಎಫ್‌ಐಆರ್ ರೈತರ ಆಂದೋಲನವು ದೇಶ ವಿರೋಧಿ ಮತ್ತು ವಿದೇಶಿ ಮತ್ತು ಭಯೋತ್ಪಾದಕ ಶಕ್ತಿಗಳಿಂದ ಹಣ ಪಡೆದಿದೆ ಎಂದು ಆಧಾರರಹಿತವಾಗಿ ಆರೋಪಿಸಿರುವುದನ್ನು ವಿರೋಧಿಸಿ ನವಂಬರ್ 6ರಂದು ರಾಷ್ಟ್ರವ್ಯಾಪಿ ಪ್ರತಿಭಟನೆಗಳನ್ನು ರೈತರು ಯಶಸ್ವಿಯಾಗಿ ಸಂಘಟಿಸಿದ್ದಾರೆ ಎನ್ನುತ್ತ ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಅವರನ್ನು ಅಭಿನಂದಿಸಿದೆ. ಐತಿಹಾಸಿಕ ರೈತರ ಚಳವಳಿಯನ್ನು ದುರ್ಬಲಗೊಳಿಸುವ ಉದ್ದೇಶದಿಂದ ಸರ್ಕಾರ ಹಾಕಿರುವ ಸುಳ್ಳು ಆರೋಪಗಳನ್ನು ವ್ಯಾಪಕವಾಗಿ ತಿರಸ್ಕರಿಸಲಾಗಿದೆ ಎಂದು ಅದು ಹೇಳಿದೆ.

ನ್ಯೂಸ್‌ಕ್ಲಿಕ್ ವಿರುದ್ಧದ ಎಫ್‌ಐಆರ್ ರೈತರ ಬದ್ಧತೆ ಮತ್ತು ಅವರ ದೇಶಪ್ರೇಮಿ ಹೋರಾಟಕ್ಕೆ ಅಪಖ್ಯಾತಿ ಮೆತ್ತುವ ಉದ್ದೇಶಪೂರ್ವಕ ಪ್ರಯತ್ನವಾಗಿದೆ. ಐತಿಹಾಸಿಕ ಆಂದೋಲನಗಳಿಂದ ಪ್ರೇರಿತರಾದ ರೈತರು, ಕೃಷಿ, ಮಂಡಿಗಳು ಮತ್ತು ಆಹಾರ ವಿತರಣೆಯ ನಿಯಂತ್ರಣವನ್ನು ಕಾರ್ಪೊರೇಟ್ ದೈತ್ಯರಿಗೆ ಹಸ್ತಾಂತರಿಸಲೆಂದೇ ರೂಪಿಸಲಾದ ಮೂರು ಕೃಷಿ ಕಾನೂನುಗಳ ಹಿಂದಿರುವ ಮೋಸದ ಅಜೆಂಡಾವನ್ನು ಗುರುತಿಸಿದರು ಎಂದು ಎಐಕೆಎಸ್ ಹೇಳಿದೆ.

ಪ್ರತಿಭಟನೆಯ ಸಂಕೇತವಾಗಿ, ನ್ಯೂಸ್‌ಕ್ಲಿಕ್ ವಿರುದ್ಧ ದಾಖಲಿಸಲಾದ ಎಫ್‌ಐಆರ್ ಅನ್ನು ಸುಡಲಾಯಿತು. ಈ ಪ್ರತಿಭಟನೆಗಳು ಒಂದು ಪ್ರದೇಶಕ್ಕೆ ಸೀಮಿತವಾಗದೆ ಹರಿಯಾಣ, ಪಂಜಾಬ್, ಗುಜರಾತ್, ಜಮ್ಮು ಮತ್ತು ಕಾಶ್ಮೀರ, ಹಿಮಾಚಲ ಪ್ರದೇಶ, ತಮಿಳುನಾಡು, ಉತ್ತರ ಪ್ರದೇಶ, ಕೇರಳ, ತ್ರಿಪುರಾ, ಪಶ್ಚಿಮ ಬಂಗಾಳ ಮತ್ತು ಇತರ ಹಲವು ರಾಜ್ಯಗಳಲ್ಲಿ ನಡೆದವು.

ನವೆಂಬರ್ 26–28 ರ ಅಭಿಯಾನ ಮತ್ತು ಪ್ರತಿಭಟನೆಯ ಸಮಯದಲ್ಲಿಯೂ, ಕರಾಳ ಯುಎಪಿಎ ಅಡಿಯಲ್ಲಿ ಅನ್ಯಾಯವಾಗಿ ಜೈಲಿನಲ್ಲಿಟ್ಟಿರುವ ನ್ಯೂಸ್‌ಕ್ಲಿಕ್‌ನ ಪ್ರಧಾನ ಸಂಪಾದಕ ಪ್ರಬೀರ್ ಪುರಕಾಯಸ್ಥ ಮತ್ತು ಮಾನವ ಸಂಪನ್ಮೂಲ ಮುಖ್ಯಸ್ಥ ಅಮಿತ್ ಚಕ್ರವರ್ತಿ ಅವರನ್ನು ಬಿಡುಗಡೆ ಮಾಡಬೇಕೆಂಬ ಬೇಡಿಕೆಯನ್ನು ಒತ್ತಿಹೇಳಲಾಗುತ್ತದೆ, ಇದು ಮಾಧ್ಯಮ ಸ್ವಾತಂತ್ರ್ಯಕ್ಕೆ ನಮ್ಮ ಬದ್ಧತೆಯನ್ನು ಒತ್ತಿಹೇಳುತ್ತದೆ. ಈ ಪ್ರತಿಭಟನೆಗಳು ರಾಜ್ಯ ರಾಜಧಾನಿಗಳಲ್ಲಿ ಎಲ್ಲಾ ರಾಜಭವನದ ಮುಂದೆ 72 ಗಂಟೆಗಳ ಅಹೋರಾತ್ರಿ ಧರಣಿ ಹೋರಾಟವನ್ನು ಒಳಗೊಂಡಿರುತ್ತದೆ ಎಂದು ಎಐಕೆಎಸ್ ಹೇಳಿದೆ. ಎಸ್.ಕೆ.ಎಂ.ಮತ್ತು ಕೇಂದ್ರ ಕಾರ್ಮಿಕ ಸಂಘಟನೆಗಳ ವೇದಿಕೆಯ ಜಂಟಿ ಬ್ಯಾನರ್ ಅಡಿಯಲ್ಲಿ ಒಂದಾಗಿ ರೈತರು ಮತ್ತು ಕಾರ್ಮಿಕರ ಬೃಹತ್ ಪ್ರಮಾಣದಲ್ಲಿ ಭಾಗವಹಿಸುತ್ತಾರೆ ಎಂದು ಪ್ರಧಾನ ಕಾರ್ಯದರ್ಶಿ ವಿಜೂ ಕೃಷ್ಣನ್ ಮತ್ತು ಅಧ್ಯಕ್ಷರು ಡಾ ಅಶೋಕ್ ಧವಳೆ ಹೇಳಿಕೆಯಲ್ಲಿ ತಿಳಿಸಿದ್ದಾರೆ. ●

ಚಿಲ್ಲರೆ ವ್ಯಾಪಾರದಲ್ಲಿ ‘ವಿದೇಶಿ ನೇರ ಬಂಡವಾಳ ಹೂಡಿಕೆ’....

ಪುಟ 11 ರಿಂದ

ಜಗತ್ತು ಅರಿತುಕೊಳ್ಳುತ್ತಿದೆ. ನಮ್ಮ ಯುವಕರು ಜಾಗತಿಕ ನಾಯಕರಾಗಬಹುದು ಎಂಬುದನ್ನು ಸಾಬೀತುಪಡಿಸಿದ್ದಾರೆ.”

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾ ಅವರು ದಾಖಲೆಯ ಎಫ್‌ಡಿಐ ಒಳಹರಿವಿಗೆ ಮೋದಿಯವರ "ಅಂತರರಾಷ್ಟ್ರೀಯ ವೇದಿಕೆಯಲ್ಲಿನ ರಾಜತಾಂತ್ರಿಕ ಪ್ರಯತ್ನಗಳು" ಕಾರಣವೆಂದು ಹೇಳಿದರೆ, ಪಕ್ಷದ ರಾಷ್ಟ್ರೀಯ ಉಪಾಧ್ಯಕ್ಷ ಡಿಕೆ ಅರುಣಾ ಇದು "ಕನಿಷ್ಠ ಸರ್ಕಾರ, ಗರಿಷ್ಠ ಆಡಳಿತ" ಫಲಿತಾಂಶವಾಗಿದೆ ಎಂದು ಹೇಳಿದರು.

‘ಸ್ವದೇಶಿ ಜಾಗರಣ ಮಂಚ್’ ಈಗೆಲ್ಲಿ?

‘ಸ್ವದೇಶಿ ಜಾಗರಣ ಮಂಚ್’ ಎಂಬ ಸಂಘಟನೆ “ಸ್ವದೇಶೀ ವಸ್ತುಗಳನ್ನೇ ಖರೀದಿಸಿ, ವಿದೇಶೀ ವಸ್ತುಗಳನ್ನು ತಿರಸ್ಕರಿಸಿ” ಎಂಬ ಘೋಷಣೆಯೊಂದಿಗೆ ವಿದೇಶಿ ವಸ್ತುಗಳನ್ನು ಬೀದಿಗೆ ಎಸೆದು ಬೆಂಕಿ ಹಚ್ಚುವ ಪ್ರತಿಭಟನೆ ನಡೆಸುತ್ತಿದ್ದುದು ಎಷ್ಟು ಜನರಿಗೆ ನೆನಪಿದೆಯೋ ಗೊತ್ತಿಲ್ಲ. ಇಂದಿನ ವಿದ್ಯಾರ್ಥಿ, ಯುವಜನತೆಗೆ ಇದರ ಬಗ್ಗೆ ತಿಳಿದಿರಲಾರದು. ರಾಷ್ಟ್ರೀಯ ಸ್ವಯಂಸೇವಕ ಸಂಘ (**RSS**)ವು, ರಾಷ್ಟ್ರೀಯ ಸ್ವಾವಲಂಬನೆಯನ್ನು ಪ್ರೋತ್ಸಾಹಿಸುವ ಗುರಿಗಾಗಿ ಎನ್ನುತ್ತಾ, ‘ಸ್ವದೇಶಿ ಜಾಗರಣ ಮಂಚ್’ ಅನ್ನು 1991 ರಲ್ಲಿ ಹುಟ್ಟುಹಾಕಿತು. ಸ್ಥಾಪನೆಯಾದ ರಾಜಕೀಯ ಮತ್ತು ಸಾಂಸ್ಕೃತಿಕ ಸಂಘಟನೆಯಾಗಿದೆ. ಸಂಘಪರಿವಾರದ ಘಟಕವೂ ಆಗಿದೆ. ಸಂಘಪರಿವಾರದ ಈ ಅಂಗ ಸಂಸ್ಥೆ ಸ್ವದೇಶಿ ಜಾಗರಣ ಮಂಚ್ ಈಗ ಎಲ್ಲಿದೆ? ತಾವೇ ಅಧಿಕಾರಕ್ಕೆ ಬಂದ ಮೇಲೆ ಸಂಘಪರಿವಾರಕ್ಕೆ ಈ ‘ನಾಟಕ ಕಂಪನಿ’ಯ ಅಗತ್ಯವೇನಿದೆ ಅಲ್ಲವೇ?

ಭಾರತ ಸರ್ಕಾರ ಜಾಗತೀಕರಣವನ್ನು ಮುಕ್ತವಾಗಿ ಒಪ್ಪಿಕೊಂಡಿರುವ ಪರಿಣಾಮದಿಂದಾಗಿ ಇಂದು ವಿದೇಶಿ ಉತ್ಪನ್ನಗಳನ್ನು ದೇಶದಲ್ಲಿ ತಂದು ಸುರಿಯಲಾಗುತ್ತಿದೆ. ಇದರಿಂದ ದೇಶೀಯ ಉತ್ಪನ್ನಗಳ ಬೆಲೆ ಕುಸಿದಿದೆ. ಜಗತ್ತಿನ ದೈತ್ಯ ವ್ಯಾಪಾರಿ ಸಂಸ್ಥೆ ಅಮೆರಿಕದ ‘ವಾಲ್ ಮಾರ್ಟ್’ ಗೆ ಭಾರತದಲ್ಲಿ ವ್ಯವಹರಿಸಲು ಮುಕ್ತ ಅವಕಾಶ ಕೊಡಲಾಗಿದೆ. ಅಮೆಜಾನ್, ಫ್ಲಿಪ್ ಕಾರ್ಟ್ ನಂತಹ ವಿದೇಶಿ ಬಹುರಾಷ್ಟ್ರೀಯ ವ್ಯಾಪಾರಿ ಸಂಸ್ಥೆಗಳ ಜೊತೆಗೆ ನಮ್ಮ ದೇಶದ ರಿಲಯನ್ಸ್, ಟಾಟಾ, ಬಿರ್ಲಾ, ಅದಾನಿ ಕಂಪನಿಗಳೂ ಸಹ ವ್ಯಾಪಾರ ವಲಯದಲ್ಲಿ ಸಾವಿರಾರು ಕೋಟಿ ಬಂಡವಾಳ ಹೂಡಿಕೆ ಮಾಡಿವೆ. ದೊಡ್ಡ ದೊಡ್ಡ ಮಾಲ್ ಗಳ ಸ್ಥಾಪನೆ ಮಾಡಿವೆ. ಈ ಸಂಸ್ಥೆಗಳು ಕಿರಾಣಿ ಅಂಗಡಿಗಳನ್ನೂ ತೆರೆಯಲು ಮುಂದಾಗಿವೆ. ಈ ದೊಡ್ಡ ಕಂಪನಿಗಳು ಗ್ರಾಹಕರನ್ನು ತಮ್ಮತ್ತ ಸೆಳೆಯಲೆಂದೇ, ರಿಯಾಯಿತಿ, ವಿನಾಯಿತಿ, ಉಚಿತ ಎಂಬ ಹಲವು ಬಗೆಯ ಆಮಿಷಗಳಿಗಾಗಿ ಮತ್ತು ಜಾಹಿರಾತುಗಳಿಗಾಗಿ ಸಹಸ್ರಾರು ಕೋಟಿ ವೆಚ್ಚ ಮಾಡುತ್ತವೆ. ಇವರ ದರ ಪೈಪೋಟಿ ಮತ್ತು ವ್ಯಾಪಾರ ತಂತ್ರಗಳನ್ನು ಎದುರಿಸಲಾಗದೆ ಕೋಟ್ಯಾಂತರ ಸಣ್ಣ ವ್ಯಾಪಾರಿಗಳು ಬಾಗಿಲು ಮುಚ್ಚಿದ್ದಾರೆ. ಸಣ್ಣ ಉದ್ಯಮಗಳು, ಗುಡಿ ಕೈಗಾರಿಕೆಗಳು ತಯ್ಯಾರಿಸುವ ವಸ್ತುಗಳನ್ನು ಕೊಳ್ಳುವವರೇ ಇಲ್ಲದಂತಾಗಿದೆ. ಉತ್ಪನ್ನಗಳನ್ನು ಖರೀದಿಸುವಲ್ಲಿಯೂ ಗುಣಮಟ್ಟದ ನೆಪದಲ್ಲಿ ಮತ್ತು ನಿಕೃಷ್ಟ ಬೆಲೆ ನಿಗದಿ ಮೂಲಕ ಈಗ ಉಳಿದಿರುವ ಸಣ್ಣ ಮತ್ತು ಗುಡಿ ಕೈಗಾರಿಕೆಗಳು ಈ ದೊಡ್ಡ ವ್ಯಾಪಾರಿ ಸಂಸ್ಥೆಗಳಿಂದ ಶೋಷಣೆಗೆ ಒಳಗಾಗಿವೆ.

ವಿದೇಶಿ ಬಹುರಾಷ್ಟ್ರೀಯ ಸಂಸ್ಥೆಗಳ ಜೊತೆಗೂಡಿ ದೇಶದ ಸಂಪತ್ತನ್ನು ಲೂಟಿ ಮಾಡಲು ಹೊರಟಿರುವ, ಎಲ್ಲಾ ಸಾರ್ವಜನಿಕ ಸಂಪತ್ತನ್ನು ತಮ್ಮದಾಗಿಸಿಕೊಳ್ಳಲು ಮುಂದಾಗಿರುವ ಮತ್ತು ಎಲ್ಲಾ ವಲಯಗಳಲ್ಲೂ ಏಕಸ್ವಾಮ್ಯ ಸಾಧಿಸಲು ಹೊರಟಿರುವ ಭಾರತದ ಆಳುವ ವರ್ಗ, ಮತ್ತದರ ಸೇವಕರಾದ ಬಿಜೆಪಿ, ಸಂಘಪರಿವಾರ, ಒಟ್ಟಾರೆ ಹೇಳುವುದಾದರೆ, ಕಾರ್ಪೊರೇಟ್-ಹಿಂದುತ್ವ ಆಡಳಿತದ ಬಗ್ಗೆ ಭಾರತೀಯರು ಅದರಲ್ಲೂ ಜನಸಾಮಾನ್ಯರು ಬಹಳ ಎಚ್ಚರಿಕೆಯಿಂದ ಇರಬೇಕಾಗಿದೆ.

ಸತತ 72 ಗಂಟೆಗಳ 'ಮಹಾಧರಣಿ'ಗೆ ವ್ಯಾಪಕ ಸಿದ್ದತೆ.......

ಪುಟ 16 ರಿಂದ

ಕಾಪಾಡುವ ಕೇಂದ್ರೀಯ ಶಾಸನ ಜಾರಿ ಮಾಡಬೇಕು.

5. ಐತಿಹಾಸಿಕ ದೆಹಲಿ ರೈತ ಹೋರಾಟದ ಸಂದರ್ಭದಲ್ಲಿ ನೀಡಿದ್ದ ಲಿಖಿತ ಭರವಸೆಗಳನ್ನು ಜಾರಿ ಮಾಡಬೇಕು. ಈ ಆಧಾರದಲ್ಲಿ ಹೋರಾಟವನ್ನು ಮುಂದೂಡಲಾಗಿತ್ತು. ಸಿಂಗು ಗಡಿಯಲ್ಲಿ ಹುತಾತ್ಮ ರೈತರ ಸ್ಮಾರಕ ನಿರ್ಮಿಸಲು ಜಾಗ ನೀಡಬೇಕು, ಹುತಾತ್ಮ ರೈತ ಕುಟುಂಬಕ್ಕೆ ಪರಿಹಾರ ಹಾಗೂ ಪುನರ್ವಸತಿ ಕಲ್ಪಿಸಬೇಕು. ಹೋರಾಟ ಸಂದರ್ಭದಲ್ಲಿ ರೈತರ ಮೇಲೆ ಹಾಕಿರುವ ಎಲ್ಲಾ ಪೊಲೀಸ್ ಕೇಸ್ ಗಳನ್ನು ವಾಪಸ್ಸು ಪಡೆಯಬೇಕು. ರೈತರ ಹತ್ಯಾಕಾಂಡ ನಡೆಸಿದ ಅಜಯ್ ಮಿಶ್ರ ತೇಣಿ ಯನ್ನು ಕೇಂದ್ರ ಮಂತ್ರಿ ಮಂಡಲದಿಂದ ತೆಗೆಯಬೇಕು.
6. ಉದ್ಯೋಗದ ಹಕ್ಕನ್ನು ಮೂಲಭೂತ ಹಕ್ಕನ್ನಾಗಿ ಮಾಡಬೇಕು. ಖಾಲಿ ಇರುವ ಎಲ್ಲಾ ಉದ್ಯೋಗಗಳನ್ನು ಭರ್ತಿ ಮಾಡಬೇಕು. ನಿರುದ್ಯೋಗಿ ಯುವಜನತೆಗೆ ಕೆಲಸ ಒದಗಿಸಲು, ಉದ್ಯೋಗ ಸೃಷ್ಟಿಸಲು, ಸಾರ್ವಜನಿಕ ಹೂಡಿಕೆ ಹೆಚ್ಚಿಸಬೇಕು. ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕು. 200 ದಿನಗಳಿಗೆ ವಿಸ್ತರಿಸಿ 600 ರೂ. ಕೂಲಿ ನಿಗದಿ ಮಾಡಬೇಕು.
7. ಗೃಹ ಕೃತ್ಯಗಳ ಕೆಲಸಗಾರರು ಹಾಗೂ ಗೃಹ ಆಧಾರಿತ ಕೆಲಸಗಾರರಿಗೆ ILO ಸಮ್ಮೇಳನ ಶಿಫಾರಸ್ಸುಗಳನ್ನು ಖಾತರಿಪಡಿಸಲು ಸೂಕ್ತ ಕಾನೂನು ರಚಿಸಬೇಕು. ವಲಸೆ ಕಾರ್ಮಿಕರ ಕುರಿತು ಸಮಗ್ರ ಧೋರಣೆ ರೂಪಿಸಬೇಕು. ಈಗ ಇರುವ ಅಂತರ್ ರಾಜ್ಯ ವಲಸೆ ಕೆಲಸಗಾರರ (ಉದ್ಯೋಗ ನಿಯಂತ್ರಣ) ಕಾಯ್ದೆ 1979 ಅನ್ನು ಸಾಮಾಜಿಕ ಸುರಕ್ಷೆ ಸೌಲಭ್ಯಗಳನ್ನು ಪಡೆಯಲು ಅನುಕೂಲವಾಗುವಂತೆ ಬಲಪಡಿಸಬೇಕು.
8. ಹೊಸ ಪಿಂಚಣಿ ಯೋಜನೆ (NPS) ಅನ್ನು ರದ್ದು ಮಾಡಿ, ಹಳೇ ಪಿಂಚಣಿ ಯೋಜನೆ (OPS) ಜಾರಿ ಮಾಡಬೇಕು. ಎಲ್ಲರಿಗೂ ಸಾಮಾಜಿಕ ಭದ್ರತೆ ಒದಗಿಸಬೇಕು.
9. ಬೆಲೆ ಏರಿಕೆ ನಿಯಂತ್ರಿಸಬೇಕು. ಅಗತ್ಯ ವಸ್ತುಗಳಾದ ಆಹಾರ, ಔಷಧ, ಕೃಷಿ ಲಾಗುವಾಡು- ಯಂತ್ರೋಪಕರಣಗಳ ಮೇಲಿನ ಜಿ.ಎಸ್.ಟಿ. ರದ್ದುಪಡಿಸಬೇಕು. ಪೆಟ್ರೋಲ್, ಡೀಸೆಲ್, ಅಡುಗೆ ಅನಿಲದ ಮೇಲಿನ ಕೇಂದ್ರೀಯ ತೆರಿಗೆಯನ್ನು ಗಣನೀಯವಾಗಿ ಇಳಿಕೆ ಮಾಡಬೇಕು.
10. ಕೋವಿಡ್ ನೆಪದಲ್ಲಿ ಹಿರಿಯ ನಾಗರಿಕರು, ಮಹಿಳೆಯರು, ಅಂಗವಿಕಲರು, ಕ್ರೀಡಾಪಟುಗಳಿಗೆ ರದ್ದುಪಡಿಸಿದ್ದ ರೈಲ್ವೆ ಪ್ರಯಾಣ ರಿಯಾಯಿತಿಯನ್ನು ಪುನರ್ ಸ್ಥಾಪಿಸಬೇಕು.
11. ಆಹಾರ ಭದ್ರತೆ/ಪೋಷಕಾಂಶ ಸುರಕ್ಷತೆಯನ್ನು ಖಾತರಿಪಡಿಸಬೇಕು. ಸಾರ್ವತ್ರಿಕ ಪಡಿತರ ವ್ಯವಸ್ಥೆ ಜಾರಿಗೆ ಬರಬೇಕು. ಮೂಲಭೂತ ಅಗತ್ಯ ವಸ್ತುಗಳನ್ನು ಪಿಡಿಎಸ್ ಮೂಲಕ ವಿತರಿಸಬೇಕು. ನೇರ ನಗದು ವರ್ಗಾವಣೆ ರದ್ದುಪಡಿಸಬೇಕು.
12. ಉಚಿತ ಶಿಕ್ಷಣ, ಉಚಿತ ಆರೋಗ್ಯ ಸೇವೆ, ಉಚಿತ ನೀರು ಮತ್ತು ನೈರ್ಮಲ್ಯವನ್ನು ಮೂಲಭೂತ ಹಕ್ಕಾಗಿ ಒದಗಿಸಬೇಕು. ರಾಷ್ಟ್ರೀಯ ಶಿಕ್ಷಣ ನೀತಿ(ಎನ್.ಇ.ಪಿ.)-2020 ರದ್ದಾಗಬೇಕು.
13. ಪ್ರತಿಯೊಬ್ಬರಿಗೂ ವಸತಿ ಹಕ್ಕನ್ನು ಖಾತರಿಪಡಿಸಬೇಕು. ವಸತಿ-ನಿವೇಶನಕ್ಕಾಗಿ ಭೂ ಸ್ವಾಧೀನ ನೀತಿ ಜಾರಿ ಮಾಡಬೇಕು.
14. ಅರಣ್ಯ ಹಕ್ಕು ಕಾಯ್ದೆ-2006 ಅನ್ನು ಕಟ್ಟುನಿಟ್ಟಾಗಿ ಜಾರಿ ಮಾಡಬೇಕು. ಅರಣ್ಯಗಳನ್ನು ಕಾರ್ಪೊರೇಟ್ ಗೆ ಹಸ್ತಾಂತರಿಸಲು ಅವಕಾಶ ನೀಡಿರುವ ಅರಣ್ಯ ಸಂರಕ್ಷಣಾ ತಿದ್ದುಪಡಿ ಕಾಯ್ದೆ-2023 ಹಾಗೂ ಜೀವ ವೈವಿಧ್ಯ ಕಾಯ್ದೆ ಮತ್ತು ನಿಯಮಗಳನ್ನು ರದ್ದುಪಡಿಸಬೇಕು. ಬಗರ್ ಹುಕುಂ ಸಾಗುವಳಿದಾರರು, ಅರಣ್ಯ ಭೂಮಿ ಸಾಗುವಳಿದಾರರು ಸೇರಿದಂತೆ ಎಲ್ಲಾ ಉಳುಮೆ ರೈತರಿಗೆ ಭೂಮಿ ಹಕ್ಕು ಖಾತರಿಪಡಿಸಬೇಕು. ಬಲವಂತದ ಭೂ ಸ್ವಾಧೀನ ನಿಲ್ಲಿಸಬೇಕು ಮತ್ತು ಪರಿಹಾರ ಕ್ರಮ ವೈಜ್ಞಾನಿಕ ಹಾಗೂ ರೈತ ಸ್ನೇಹಿಯಾಗಿರಬೇಕು.
15. ವಿದ್ಯುತ್, ರಕ್ಷಣೆ, ಗಣಿಗಾರಿಕೆ, ಬಂದರು, ರೈಲ್ವೆ, ವಿಮಾನ ನಿಲ್ದಾಣ ಸೇರಿದಂತೆ ಎಲ್ಲಾ ಸಾರ್ವಜನಿಕ ಉದ್ದಿಮೆಗಳ ಹಾಗೂ ಸರ್ಕಾರಿ ಇಲಾಖೆಗಳ ಖಾಸಗೀಕರಣ ನಿಲ್ಲಬೇಕು. ಸಾರ್ವಜನಿಕ ಶಿಕ್ಷಣ, ಆರೋಗ್ಯ, ಮತ್ತಿತ್ತರೆ ಸಾರ್ವಜನಿಕ ಸೇವೆಗಳ ಖಾಸಗೀಕರಣ ನಿಲ್ಲಬೇಕು. ರಾಷ್ಟ್ರೀಯ ನಗದೀಕರಣ ಪೈಪ್ ಲೈನ್ ಯೋಜನೆ ರದ್ದಾಗಬೇಕು.
16. ಖನಿಜ ಹಾಗೂ ಲೋಹ ಗಣಿಗಾರಿಕಾ ಕಾಯ್ದೆ ಗೆ ತಿದ್ದುಪಡಿ ತಂದು ಕಲ್ಲಿದ್ದಲು ಸೇರಿದಂತೆ ಗಣಿ ಕಂಪನಿಗಳ ಲಾಭದ ಶೇ.50 ರಷ್ಟನ್ನು ಆದಿವಾಸಿಗಳು, ರೈತರು ಮುಂತಾದ ಸ್ಥಳೀಯ ನಿವಾಸಿಗಳ ಅಭಿವೃದ್ಧಿಗೆ ಬಳಸಬೇಕು.
17. ವಿದ್ಯುತ್ ರಂಗವನ್ನು ಖಾಸಗೀಕರಣಗೊಳಿಸುವ ವಿದ್ಯುತ್ ತಿದ್ದುಪಡಿ ಮಸೂದೆ-2022 ಅನ್ನು ಸಂಸತ್ತಿನಿಂದ ವಾಪಸ್ಸು ಪಡೆಯಬೇಕು. ಯಾವುದೇ ಕಾರಣಕ್ಕೂ ಪ್ರೀ ಪೇಯ್ಡ್ ಮೀಟರ್ ಅಳವಡಿಸಬಾರದು. ವಿದ್ಯುತ್ ಉಪಕರಣಗಳ ಸಂಪೂರ್ಣ ವೆಚ್ಚ ಭರಿಸುವಂತೆ ಕೃಷಿ ಪಂಪ್‌ಸೆಟ್ ರೈತರನ್ನು ಬಲವಂತ ಪಡಿಸುವ ಆದೇಶವನ್ನು ರದ್ದುಪಡಿಸಬೇಕು.
18. ಭಾರತೀಯ ಕಾರ್ಮಿಕ ಸಮ್ಮೇಳನವನ್ನು ನಿಯಮಿತವಾಗಿ ಆಯೋಜಿಸಬೇಕು.
19. ಎಲ್ಲಾ ರೀತಿಯ ಅಸಂಘಟಿತ ವಲಯದ ಕಾರ್ಮಿಕರನ್ನು ನೊಂದಾಯಿಸಿ ಪಿಂಚಣಿ ಸೇರಿದಂತೆ ಸಮಗ್ರ ಸಾಮಾಜಿಕ ಸುರಕ್ಷತೆಯನ್ನು ಒದಗಿಸಬೇಕು. ಇ-ಶ್ರಮ್ ಪೋರ್ಟಲ್‌ನಲ್ಲಿ ನೊಂದಾಯಿಸಿರುವ ಎಲ್ಲಾ ಅಸಂಘಟಿತ ಕಾರ್ಮಿಕರಿಗೆ ಆರೋಗ್ಯ ಯೋಜನೆ, ತಾಯ್ತನದ ಆರೈಕೆ ಸೌಲಭ್ಯ, ಜೀವಾ ಹಾಗೂ ಅಂಗವೈಕಲ್ ವಿಮೆ, ಮತ್ತಿತರೆ ಕಲ್ಯಾಣ ಸೌಲಭ್ಯಗಳನ್ನು ಒದಗಿಸಬೇಕು.
20. ಐ.ಸಿ.ಡಿ.ಎಸ್., ಅಕ್ಷರ ದಾಸೋಹ, ಆಶಾ ಮುಂತಾದ ಯೋಜನೆಗಳನ್ನು ಯಾವುದೇ ಸ್ವರೂಪದಲ್ಲಿ ಖಾಸಗೀಕರಣ ಮಾಡಬಾರದು. ಗ್ರಾಮ ಪಂಚಾಯತಿ ನೌಕರರಿಗೆ ಕನಿಷ್ಠ ವೇತನ ಸಮರ್ಪಕವಾಗಿ ಜಾರಿ ಮಾಡಬೇಕು.
21. ಕಲ್ಯಾಣ ಮಂಡಳಿಯ ನಿಧಿ ದುರ್ಬಳಕೆ ನಿಲ್ಲಿಸಿ, ಕಟ್ಟಡ ಕಾರ್ಮಿಕರಿಗೆ ಜಾರಿಯಲ್ಲಿರುವ ಸೌಲಭ್ಯಗಳ ಜೊತೆಗೆ ಇ.ಎಸ್.ಐ., ವಸತಿ ಸೌಲಭ್ಯವನ್ನು ಒದಗಿಸಬೇಕು. ಬಾಕಿ ಇರುವ ಶೈಕ್ಷಣಿಕ ಸಹಾಯ ಧನವನ್ನು ಕೂಡಲೇ ಬಿಡುಗಡೆ ಮಾಡಬೇಕು.
22. ಕೇಂದ್ರ-ರಾಜ್ಯ ಸರ್ಕಾರಗಳ ನಿಗಮ, ಮಂಡಳಿ, ವಿವಿಧ ಇಲಾಖೆಗಳಲ್ಲಿ, ಆಸ್ಪತ್ರೆ, ನಗರ ಸ್ಥಳೀಯ ಸಂಸ್ಥೆಗಳಲ್ಲಿ, ಖಾಸಗಿ ಕೈಗಾರಿಕೆಗಳಲ್ಲಿ ನಿರಂತರ ಕೆಲಸಗಳಲ್ಲಿ ದುಡಿಯುತ್ತಿರುವ ಗುತ್ತಿಗೆ, ಹೊರಗುತ್ತಿಗೆ, ಕಾರ್ಮಿಕರ ಸೇವೆಗಳನ್ನು ಕಾಯಂ ಗೊಳಿಸಬೇಕು.
23. ಕೆಲಸದ ಸ್ಥಳದಲ್ಲಿ ಸಮಾನತೆ ಹಾಗೂ ಸುರಕ್ಷಿತೆ ಖಾತರಿಪಡಿಸಬೇಕು. ಶ್ರಮವನ್ನು ಶಾಶ್ವತ ಖಾಯಂ ರಹಿತವಾಗಿ ದುಡಿಸಿಕೊಳ್ಳುವ ಪ್ರವೃತ್ತಿ ನಿಲ್ಲಬೇಕು. ಗೃಹ ಅಧಾರಿತ ಕಾರ್ಮಿಕರು, ಸಣ್ಣ ಪುಟ್ಟ ವ್ಯಾಪಾರಸ್ಥರು, ಚಿಂದಿ ಆಯುವವರು, ಮನೆಗೆಲಸಗಾರರು, ಕಟ್ಟಡ ಕಾರ್ಮಿಕರು, ವಲಸೆ ಕಾರ್ಮಿಕರು, ಅಂಗನವಾಡಿ, ಬಿಸಿಯೂಟ, ಆಶಾ ಸೇರಿದಂತೆ ಯೋಜನಾ ಕಾರ್ಮಿಕರು, ಕೃಷಿ ಕೂಲಿಕಾರರು, ಅಂಗಡಿ/ಮಳಿಗೆಗಳ ಕಾರ್ಮಿಕರು, ಹಮಾಲಿ ಕಾರ್ಮಿಕರು, ಗೀಗ್ ಕಾರ್ಮಿಕರು, ಊದುಬತ್ತಿ/ಉಪ್ಪಿನಕಾಯಿ ಕಾರ್ಮಿಕರು, ಬೀಡಿ ಕಾರ್ಮಿಕರು, ಸೇಂದಿ ಕಾರ್ಮಿಕರು, ರಿಕ್ಷಾ ಎಳೆಯುವವರು, ಆಟೋ ರಿಕ್ಷಾ/ಟ್ಯಾಕ್ಸಿ ಚಾಲಕರು, ವಿದೇಶಿ ಕಾರ್ಮಿಕರು, ಮೀನುಗಾರ ಸಮುದಾಯ ಮುಂತಾದ ಎಲ್ಲಾ ರೀತಿಯ ಅಸಂಘಟಿತ ವಲಯದ ಕಾರ್ಮಿಕರನ್ನು ನೊಂದಾಯಿಸಿ, ಪಿಂಚಣಿ ಸೇರಿದಂತೆ ಸಮಗ್ರ ಸಾಮಾಜಿಕ ಸುರಕ್ಷೆಯನ್ನು ಒದಗಿಸಬೇಕು.
24. ಸಂವಿಧಾನದ ಮೂಲಭೂತ ಮೌಲ್ಯಗಳಾದ ಅಭಿವ್ಯಕ್ತಿ ಸ್ವಾತಂತ್ರ್ಯ, ಭಿನ್ನಾಭಿಪ್ರಾಯ ಹೊಂದುವ ಹಕ್ಕು, ಧಾರ್ಮಿಕ ಸ್ವಾತಂತ್ರ್ಯ, ಸಾಂಸ್ಕೃತಿಕ -ಭಾಷೆ ವೈವಿಧ್ಯತೆ ಗೆ ಮನ್ನಣೆ, ದೇಶದ ಕಾನೂನಿನ ಮುಂದೆ ಎಲ್ಲರೂ ಸಮಾನರು ಹಾಗೂ ಒಕ್ಕೂಟ ರಚನೆ ಮುಂತಾದವುಗಳ ಮೇಲಿನ ಆಕ್ರಮಣವನ್ನು ನಿಲ್ಲಿಸಬೇಕು.

ಚೀನಾವೂ ಒಂದು ಬಂಡವಾಳಶಾಹಿ ದೇಶವೇ?........

ಪುಟ 13 ರಿಂದ

ಜಾಕೊಬ್ ಅರ್ಬೆಜ್, ಇರಾನಿನ ಮೊಹಮದ್ ಮೊಸದೆಘ್, ಚಿಲಿ ದೇಶದ ಸಾಲ್ವಡೋರ್ ಅಲೆಂಡೆ, ಗಯಾನಾದ ಚೆಡ್ಡಿ ಜಗನ್, ಕೀನ್ಯಾದ ಲುಮುಂಬಾ ಮುಂತಾದವರನ್ನು ಕೊಲೆಗೈದು ಅವರನ್ನು ಪದಚ್ಯುತಗೊಳಿಸಿದೆ. ಆದಾಗ್ಯೂ, ವಸಾಹತುಶಾಹೀ ಆಳ್ವಿಕೆಯಿಂದ ಈ ದೇಶಗಳ ವಿಮೋಚನೆಯ ನಂತರ, ಮೂರನೇ ಜಗತ್ತಿನ ಸಂಪನ್ಮೂಲಗಳು ಸಾಮ್ರಾಜ್ಯಶಾಹಿ ನಿಯಂತ್ರಣದಿಂದ ಹೊರಹೋಗಿ ಈ ದೇಶಗಳು ಪ್ರಭುತ್ವ- ನಿಯಂತ್ರಣ ನೀತಿಗಳ ವ್ಯವಸ್ಥೆಗೆ ಒಳಪಡುವುದನ್ನು ತಡೆಯುವುದು ಮೆಟ್ರೋಪಾಲಿಟನ್ ಬಂಡವಾಳಶಾಹಿಗೆ ಸಾಧ್ಯವಾಗಲಿಲ್ಲ.

ಬಂಡವಾಳವು ಜಾಗತೀಕರಣಗೊಳ್ಳಲು ಕಾರಣವಾದ ಬಂಡವಾಳದ ಕೇಂದ್ರೀಕರಣವು ಒಂದು ಉನ್ನತ ಹಂತವನ್ನು ತಲುಪಿದ ನಂತರ, ಎಲ್ಲಕ್ಕಿಂತ ಮಿಗಿಲಾಗಿ ಜಾಗತೀಕರಣಗೊಂಡ ಹಣಕಾಸು ಬಂಡವಾಳದ ಉದಯವೂ ಸೇರಿದಂತೆ ಮತ್ತು ಹಣಕಾಸು ಬಂಡವಾಳದ ಜಾಗತೀಕರಣದೊಂದಿಗೆ ಸಂಬಂಧ ಹೊಂದಿದ ಸೋವಿಯತ್ ಒಕ್ಕೂಟದ ಕುಸಿತದೊಂದಿಗೆ ಸಾಮ್ರಾಜ್ಯಶಾಹಿಯ ಅದೃಷ್ಟ ಖುಲಾಯಿಸಿತು. ಸಾಮ್ರಾಜ್ಯಶಾಹಿಯು ದೇಶ ದೇಶಗಳನ್ನು ಜಾಗತೀಕರಣದ ಜಾಲದಲ್ಲಿ ಸಿಲುಕಿಸಿತು ಮತ್ತು ಅದರಿಂದಾಗಿ ಅವುಗಳನ್ನು ಜಾಗತಿಕ ಹಣಕಾಸು ಹರಿವಿನ ಮರ್ಜಿಗೆ ಒಳಪಡಿಸಿತು. ನವ-ಉದಾರವಾದಿ ನೀತಿಗಳನ್ನು ಅನುಸರಿಸುವಂತೆ ಒತ್ತಾಯಿಸಲು ಅವುಗಳಿಗೆ ಹಣಕಾಸು ಬಂಡವಾಳವು ಹೊರಹರಿಯುವ ಬೆದರಿಕೆಯನ್ನು ಒಡ್ಡಿತು. ಇದರ ಅರ್ಥವೆಂದರೆ, ನಿಯಂತ್ರಣ ನೀತಿಗಳ ಆಳ್ವಿಕೆಯ ಅಂತ್ಯವೇ. ಮತ್ತು, ಮೂರನೇ ಜಗತ್ತಿನ ಭೂ-ಬಳಕೆಯೂ ಸೇರಿದಂತೆ ಮೂರನೇ ಜಗತ್ತಿನ ಸಂಪನ್ಮೂಲಗಳ ಮೇಲೆ ನಿಯಂತ್ರಣವನ್ನು ಮೆಟ್ರೋಪಾಲಿಟನ್ ಬಂಡವಾಳವು ಮತ್ತೊಮ್ಮೆ ಸ್ವಾಧೀನಪಡಿಸಿಕೊಂಡಿತು.

ಬಂಡವಾಳಶಾಹಿಯ ವೈರುಧ್ಯಗಳಲ್ಲೇ ಅಡಗಿದೆ

ಸಾಮ್ರಾಜ್ಯಶಾಹಿಯು ತನ್ನ ಪ್ರಾಬಲವನ್ನು ಮತ್ತೆ ಸ್ಥಾಪಿಸಿದ ಹಿನ್ನೆಲೆಯಲ್ಲಿಯೇ ಅಮೆರಿಕಾ-ಚೀನಾ ನಡುವಿನ ವೈರುಧ್ಯವನ್ನು ಮತ್ತು ಉಕ್ರೇನ್ ಯುದ್ಧದಂತಹ ಅನೇಕ ಸಮಕಾಲೀನ ಬೆಳವಣಿಗೆಗಳನ್ನೂ ಅರ್ಥಮಾಡಿಕೊಳ್ಳಬಹುದು. ಸಾಮ್ರಾಜ್ಯಶಾಹಿಯ ಪ್ರಾಬಲ್ಯದ ಈ ಮರು-ಸ್ಥಾಪನೆಯಲ್ಲಿರುವ ಎರಡು ವೈಶಿಷ್ಟ್ಯಗಳನ್ನು ಗಮನಿಸಬೇಕಾಗಿದೆ: ಮೊದಲನೆಯದು, ಚೀನಾದಂತಹ ದೇಶಗಳ ಸರಕುಗಳಿಗೆ ಮೆಟ್ರೋಪಾಲಿಟನ್ ಮಾರುಕಟ್ಟೆ ಪ್ರವೇಶದ ಅವಕಾಶ. ಜಾಗತಿಕ ಬೇಡಿಕೆಯನ್ನು ಪೂರೈಸಲು ಮತ್ತು ಅಂತಹ ದೇಶಗಳಲ್ಲಿ ಕಡಿಮೆ ವೇತನದ ಲಾಭವನ್ನು ಪಡೆಯಲು ತನ್ನ ಉತ್ಪಾದನಾ ಘಟಕಗಳನ್ನು ಸ್ಥಾಪಿಸುವ ಮೆಟ್ರೋಪಾಲಿಟನ್ ಬಂಡವಾಳದ ಬಯಕೆಯೊಂದಿಗೆ, ಜಾಗತಿಕ ದಕ್ಷಿಣದ ಈ ಅರ್ಥವ್ಯವಸ್ಥೆಗಳಲ್ಲಿ (ಮತ್ತು ಈ ಅರ್ಥವ್ಯವಸ್ಥೆಗಳಲ್ಲಿ ಮಾತ್ರ) ಬೆಳವಣಿಗೆಯ ದರ ವೇಗ ಪಡೆದುಕೊಂಡಿತು. ಪ್ರಮುಖ ಮೆಟ್ರೋಪಾಲಿಟನ್ ಶಕ್ತಿಯಾದ ಅಮೆರಿಕವು ಚೀನಾವನ್ನು ಒಂದು ಬೆದರಿಕೆ ಎಂದು ಪರಿಗಣಿಸುವ ಪೂರ್ವದಲ್ಲಿ, ಚೀನಾದಲ್ಲಿ ಮಾಡಿದ್ದು ಇದನ್ನೇ. ಎರಡನೆಯ ಲಕ್ಷಣವೆಂದರೆ, ಅಮೆರಿಕದ ವಸತಿ "ಗುಳ್ಳೆ" ಕುಸಿತದ ನಂತರ ಉಗ್ರ ರೀತಿಯಲ್ಲಿ ಹೊರಹೊಮ್ಮಿದ ನವ-ಉದಾರವಾದಿ ಬಂಡವಾಳಶಾಹಿ ಬಿಕ್ಕಟ್ಟು.

ಈ ಎರಡೂ ಕಾರಣಗಳಿಗಾಗಿ ಅಮೆರಿಕ, ಈಗ ಚೀನಾದ ಮತ್ತು ಜಾಗತಿಕ ದಕ್ಷಿಣದ ಕೆಲವು ದೇಶಗಳ ಆಮದುಗಳಿಂದ ತನ್ನ ಅರ್ಥವ್ಯವಸ್ಥೆಯನ್ನು ರಕ್ಷಿಸಿಕೊಳ್ಳಲು ಬಯಸುತ್ತದೆ. ಈ ಆಮದುಗಳು ಭಾಗಶಃವಾದರೂ ಅಮೆರಿಕದ ಬಂಡವಾಳದ ಆಶ್ರಯದಲ್ಲಿ ಸಂಭವಿಸುತ್ತಿದ್ದರೂ, ಇದರಿಂದಾಗಿ ತಾನೇ "ಅಪ-ಕೈಗಾರಿಕೀಕರಣ"ದ ಅಪಾಯವನ್ನು ಎದುರಿಸಲಾರದು. ಚೀನಾವನ್ನು ಅದರ "ಆರ್ಥಿಕ ಸುಧಾರಣೆಗಳಿಗಾಗಿ" ಶ್ಲಾಘಿಸಿದ ಬೆನ್ನಲ್ಲೇ ಚೀನಾವನ್ನು ಅದರ "ಗಾತ್ರಕ್ಕೆ ಇಳಿಸಲು" ಅಮೆರಿಕಾ ಬಯಸುತ್ತಿದ್ದರೆ, ಅದಕ್ಕೆ ಕಾರಣ ನವ-ಉದಾರವಾದಿ ಬಂಡವಾಳಶಾಹಿಯ ವೈರುಧ್ಯಗಳಲ್ಲೇ ಅಡಗಿದೆ ಮತ್ತು ಸಾಮ್ರಾಜ್ಯಶಾಹಿ ಪ್ರಾಬಲ್ಯದ ಮರು-ಸ್ಥಾಪನೆಯ ತರ್ಕದಲಿಯ್ಲೇ ಅಂತರ್ಗತವಾಗಿದೆ. ಇದು ಅಂತರ್-ಸಾಮ್ರಾಜ್ಯಶಾಹಿ ಪೈಪೋಟಿ ಅಲ್ಲ, ಬದಲಾಗಿ, ಪಾಶ್ಚಾತ್ಯ ಸಾಮ್ರಾಜ್ಯಶಾಹಿಯು ಮತ್ತೆ ತನ್ನ ಪ್ರಾಬಲ್ಯವನ್ನು ಸ್ಥಾಪಿಸುವುದಕ್ಕೆ ಚೀನಾದ ಮತ್ತು ಅದರ ಮುನ್ನಡೆಯನ್ನು ಅನುಸರಿಸುತ್ತಿರುವ ಇತರ ದೇಶಗಳ ಪ್ರತಿರೋಧ-ಇದೇ ಅಮೆರಿಕ-ಚೀನಾ ನಡುವೆ ಹೆಚ್ಚುತ್ತಿರುವ ವೈರುಧ್ಯಗಳು ಹೆಚ್ಚುತ್ತಿರುವುದು ಏಕೆ ಎನ್ನುವುದಕ್ಕೆ ವಿವರಣೆ.

ಬಂಡವಾಳಶಾಹಿ ಬಿಕ್ಕಟ್ಟು ಉಲ್ಬಣಗೊಳ್ಳುತ್ತಿದ್ದಂತೆಯೇ, ಮೂರನೇ ಜಗತ್ತಿನ ದೇಶಗಳ ಮೇಲಿನ ಸಾಮ್ರಾಜ್ಯಶಾಹಿ ದಬ್ಬಾಳಿಕೆಯು ಐಎಂಎಫ್‌ನಂತಹ ಸಾಮ್ರಾಜ್ಯಶಾಹಿ ಸಂಸ್ಥೆಗಳು ತಮ್ಮ ಬಾಹ್ಯ ಸಾಲವನ್ನು ತೀರಿಸಲು ಅಸಮರ್ಥರೆಂಬ ಕಾರಣದ ಮೇಲೆ "ಮಿತವ್ಯಯ" ನೀತಿಗಳನ್ನು ಹೇರುವ ಮೂಲಕ ಹೆಚ್ಚುತ್ತದೆ. ಪ್ರತಿಯಾಗಿ, ಮೂರನೇ ಜಗತ್ತಿನ ದೇಶಗಳ ಪ್ರತಿರೋಧವೂ ಹೆಚ್ಚುತ್ತದೆ ಮತ್ತು ಅದಕ್ಕಾಗಿ ಅವು ಚೀನಾದಿಂದ ಹೆಚ್ಚಿನ ಸಹಾಯವನ್ನು ಕೋರುತ್ತವೆ. ಅಮೆರಿಕ-ಚೀನಾ ನಡುವಿನ ವೈರುಧ್ಯಗಳು ತೀವ್ರಗೊಳ್ಳುತ್ತವೆ ಮತ್ತು ಪಶ್ಚಿಮದ ದೇಶಗಳಲ್ಲಿ ಚೀನಾ ವಿರುದ್ಧದ ನಿಂದನೆಗಳು, ಬೈಗುಳಗಳು ಮತ್ತು ಚೀರಾಟಗಳು ಮತ್ತಷ್ಟು ಕರ್ಕಶಗೊಳ್ಳುತ್ತವೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE November 13-19, 2023 Price: Rs. 10/- Date of Publication: 10 November 2023 RNI No. KARKAN /2006/17926 Posted on 11-11-2023
Posted at BG PSO, BG - 560026 **Posted at Periodical Rate -** Rs. 2

ಸಂಯುಕ್ತ ಹೋರಾಟ ಸಮಿತಿ -ಕರ್ನಾಟಕ ವತಿಯಿಂದ

ನವೆಂಬರ್ 26, 27, 28 ಮೂರು ದಿನಗಳು, ಸತತ 72 ಗಂಟೆಗಳ 'ಮಹಾಧರಣಿ'ಗೆ ವ್ಯಾಪಕ ಸಿದ್ದತೆ

ಸಂಯುಕ್ತ ಕಿಸಾನ್ ಮೋರ್ಚಾ ನಡೆಸಿದ ದೆಹಲಿಯ ಐತಿಹಾಸಿಕ ರೈತರ ಹೋರಾಟದ ನಂತರ, ಕೇಂದ್ರ ಸರ್ಕಾರದ ಜನವಿರೋಧಿ ನೀತಿಗಳ ವಿರುದ್ಧ ಮತ್ತು ಕಾರ್ಪೊರೇಟ್ ಪರವಾದ ನೀತಿಗಳ ವಿರುದ್ಧ ದೇಶವ್ಯಾಪಿ ಮತ್ತೊಂದು ಮಹತ್ವದ ಹಾಗೂ ಐತಿಹಾಸಿಕ ಹೋರಾಟಕ್ಕೆ ದೇಶದ ರೈತರು, ಕಾರ್ಮಿಕರು ಮತ್ತು ಕೃಷಿ ಕಾರ್ಮಿಕರು ಸಿದ್ದರಾಗಿದ್ದಾರೆ. ಕೇಂದ್ರ ಕಾರ್ಮಿಕ ಸಂಘಗಳು (ಅಖಿಗ) ಮತ್ತು ಸಂಯುಕ್ತ ಕಿಸಾನ್ ಮೋರ್ಚಾ (SKM) ದೇಶಾದ್ಯಂತ ದೃಢವಾದ ಮತ್ತು ನಿರ್ಣಾಯಕ ಪ್ರತಿಭಟನಾ ಕ್ರಮಗಳಿಗೆ ಕರೆ ನೀಡಿರುವ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯದಲ್ಲಿಯೂ 'ಸಂಯುಕ್ತ ಹೋರಾಟ ಸಮಿತಿ– ಕರ್ನಾಟಕ' ನೇತೃತ್ವದಲ್ಲಿ ನವೆಂಬರ್ 26, 27 ಮತ್ತು 28 ಈ ಮೂರು ದಿನಗಳ ಕಾಲ, ರಾಜಭವನದ ಎದುರು ಸತತ 72 ಗಂಟೆಗಳ ಮಹಾಧರಣಿ ನಡೆಸಲು ಮುಂದಾಗಿವೆ.

'ಮಹಾಧರಣಿ'ಯ ಯಶಸ್ಸಿಗಾಗಿ ರಾಜ್ಯದಾದ್ಯಂತ ಭರದ ಸಿದ್ದತೆಗಳು ನಡೆಯುತ್ತಿವೆ. ಎಲ್ಲಡೆ ವ್ಯಾಪಕ ಪ್ರಚಾರ ನಡೆಯುತ್ತಿದೆ. ಲಕ್ಷಾಂತರ ಕರ ಪತ್ರಗಳನ್ನು ಮುದ್ರಿಸಿ ಹಂಚುವ ಮೂಲಕ ಚಳುವಳಿಯನ್ನು ಜನರ ನಡುವೆ ಕೊಂಡೊಯ್ಯಲು ರೈತ, ಕೃಷಿ ಕಾರ್ಮಿಕ ಹಾಗೂ ಕಾರ್ಮಿಕ ಸಂಘಟನೆಗಳ ಕಾರ್ಯಕರ್ತರು ಶ್ರಮಿಸುತ್ತಿದ್ದಾರೆ. ಕರ್ನಾಟಕ ಪ್ರಾಂತ ರೈತ ಸಂಘ, ಕೃಷಿ ಕೂಲಿಕಾರರ ಸಂಘ, ಮತ್ತು ಸಿಐಟಿಯು ಒಟ್ಟಾಗಿ ಪ್ರಚಾರದಲ್ಲಿ ತೊಡಗಿಕೊಂಡಿವೆ. ಗ್ರಾಮೀಣ ಭಾಗಗಳಲ್ಲಿ ಗ್ರಾಮ ಸಭೆಗಳನ್ನು ನಡೆಸಲಾಗುತ್ತಿದೆ. ನಗರಗಳಲ್ಲಿಯೂ ಸಭೆ, ಸಮಾವೇಶಗಳನ್ನು ನಡೆಸಲಾಗುತ್ತಿದೆ. ಜೀಪ್ ಜಾತಾಗಳ ಮೂಲಕ ಪ್ರಚಾರ ನಡೆಸಲಾಗುತ್ತಿದೆ. ಕಾರ್ಮಿಕರು ಮತ್ತು ರೈತರ ಸಂಘಟನೆಗಳ ಜಿಲ್ಲಾ ಸಮಿತಿಗಳು, ವಲಯ ಸಮಿತಿಗಳು ಸಮಾವೇಶಗಳನ್ನು ನಡೆಸುವ ಮೂಲಕ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜನವಿರೋಧಿ ನೀತಿಗಳ ಕುರಿತು, ವಿದ್ಯುತ್, ರೈಲ್ವೇ, ರಸ್ತೆ ಮತ್ತು ಸಾರ್ವಜನಿಕ ಉದ್ಯಮಗಳ ಖಾಸಗೀಕರಣ ನೀತಿಗಳಿಂದ ಜನರ ಮೇಲಾಗುವ ಪರಿಣಾಮಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಪ್ರಯತ್ನಗಳು ನಡೆಯುತ್ತಿವೆ. ಕೃಷಿಯನ್ನು ಕಾರ್ಪೊರೇಟೀಕರಣ ಮಾಡುವ ಕೇಂದ್ರ ಸರ್ಕಾರದ ನಿರ್ಧಾರ ಮತ್ತು ಇಂತಹ ನೀತಿಗಳನ್ನೇ ಅನುಸರಿಸುತ್ತಿರುವ ರಾಜ್ಯ ಸರ್ಕಾರದ ನೀತಿಗಳಿಂದಾಗಿ ರೈತರು, ಕೃಷಿ ಕಾರ್ಮಿಕರು, ಕಾರ್ಮಿಕರು, ಒಟ್ಟಾರೆಯಾಗಿ ಜನಸಾಮಾನ್ಯರ ಬದುಕಿನ ಮೇಲೆ ಬೀರುವ ಪರಿಣಾಮಗಳ ಕುರಿತು ಹಳ್ಳಿ ನಗರಗಳಲ್ಲಿ ಪ್ರಚಾರ ನಡೆಸತೊಡಗಿದ್ದಾರೆ.



ಎಲ್ಲವನ್ನೂ ಖಾಸಗಿಯವರಿಗೆ ಮಾರಾಟ ಮಾಡುವತ್ತ

ಕೇಂದ್ರ ಸರ್ಕಾರ 'ರಾಷ್ಟ್ರೀಯ ನಗದೀಕರಣ ಪೈಪ್ ಲೈನ್ ಯೋಜನೆ' ಮೂಲಕ ದೇಶದ ಸಂಪತ್ತಾದ ವಿದ್ಯುತ್, ರೈಲ್ವೇ, ಕಲ್ಲಿದ್ದಲು, ದೂರ ಸಂಪರ್ಕ, ವಿಮಾ ಕ್ಷೇತ್ರ, ವಿಮಾನಯಾನ, ರಕ್ಷಣಾ ಸಾಮಗ್ರಿ ಉತ್ಪಾದನಾ ಕೈಗಾರಿಕೆ ಸೇರಿದಂತೆ ಸಾರ್ವಜನಿಕ ಉದ್ಯಮಗಳನ್ನು ಖಾಸಗಿಯವರಿಗೆ ಮಾರಾಟ ಮಾಡಲಾಗುತ್ತಿದೆ. ಜನರಿಗೆ ಸೇವೆ ಒದಗಿಸಬೇಕಾದ ಅಗತ್ಯ ವಲಯಗಳಾದ ಆರೋಗ್ಯ, ಶಿಕ್ಷಣ, ಸಾರಿಗೆ, ಆಹಾರ, ನೀರು, ಭೂಮಿ, ಗಣಿ, ಅರಣ್ಯ ಸೇರಿದಂತೆ ಎಲ್ಲವನ್ನೂ ಕಾರ್ಪೊರೇಟ್ ವಲಯಕ್ಕೆ ಹಸ್ತಾಂತರಿಸಿ ಸೇವೆಯನ್ನು ಸರಕಾಗಿಸಲು ಹೊರಟಿದೆ. ಹಲವು ಸ್ಕೀಂ ಯೋಜನೆಗಳನ್ನು ದುರ್ಬಲಗೊಳಿಸುತ್ತಿದೆ. ಸರ್ಕಾರದ ಇಂತಹ ಜನವಿರೋಧಿ ಕ್ರಮಗಳು ಕಾರ್ಪೊರೇಟ್ ವರ್ಗದ ಸಂಪತ್ತು ಮತ್ತು ಆದಾಯವನ್ನು ಗಣನೀಯವಾಗಿ ಹೆಚ್ಚಿಸಿದ್ದರೆ, ಶೋಷಿತ ಜನ ಸಮೂಹದ ಜೀವನ ಮಟ್ಟವನ್ನು ದಾರಿದ್ಯಕ್ಕೆ ತಳ್ಳಲ್ಪಟ್ಟಿದೆ. ನಿರುದ್ಯೋಗ, ಬಡತನ, ಹಸಿವು, ಮಹಿಳಾ ಮತ್ತು ಮಕ್ಕಳ ಅಪೌಷ್ಟಿಕತೆ ಹೆಚ್ಚಾಗಿದೆ.

ಐತಿಹಾಸಿಕ ರೈತರ ಹೋರಾಟಕ್ಕೆ ಕಾರ್ಮಿಕ ವರ್ಗದ ಬೆಂಬಲ

ಮೋದಿ ಸರ್ಕಾರವನ್ನು ಮಣಿಸಿದ, ಸತತ ಒಂದು ವರ್ಷ ನಡೆದ ಐತಿಹಾಸಿಕ ರೈತರ ಹೋರಾಟವು, ಸಿಐಟಿಯು ನೇತೃತ್ವದಲ್ಲಿ ದೇಶಾದ್ಯಂತ ಕಾರ್ಮಿಕ ವರ್ಗದ ಚಳುವಳಿಗಳಿಂದ ಬೃಹತ್ ಪ್ರಮಾಣದಲ್ಲಿ ಸಕ್ರಿಯ ಬೆಂಬಲ ಮತ್ತು ಒಗ್ಗಟ್ಟಿನ ಕ್ರಮಗಳಿಗೆ ಸಾಕ್ಷಿಯಾಯಿತು. SKM ನೇತೃತ್ವದ ಧರಣಿ ಪ್ರತಿಭಟನೆಗಳು, ಆಂದೋಲನಗಳು, ಬಂದ್ಗಳ ಎಲ್ಲಾ ಕಾರ್ಯಕ್ರಮಗಳನ್ನು ಇಡೀ ಕಾರ್ಮಿಕ ವರ್ಗದ ಚಳುವಳಿಯಿಂದ ಗಾಢವಾಗಿ ಬೆಂಬಲಿಸಲಾಯಿತು. ಈ ಪ್ರಕ್ರಿಯೆಯಲ್ಲಿ, ನಂತರದ ಎಲ್ಲಾ ಸಂದರ್ಭಗಳಲ್ಲಿ, ಟ್ರೇಡ್ ಯೂನಿಯನ್ಗಳ ಜಂಟಿ ವೇದಿಕೆಯಿಂದ ಆಯೋಜಿಸಲಾದ ಹೋರಾಟಗಳು ಮತ್ತು ಆಂದೋಲನಗಳಿಗೆ ಖಿಏಒ ತಮ್ಮ ಅನಿಯಂತ್ರಿತ ಬೆಂಬಲವನ್ನು ನೀಡಿತು. ಎರಡು ಉತ್ಪಾದಕ ವರ್ಗಗಳ (ರೈತರು ಮತ್ತು ಕಾರ್ಮಿಕರು) ಈ ಹೋರಾಟಗಳು ಮತ್ತು ಆಂದೋಲನಗಳು ತಮ್ಮ ಸಾಮಾನ್ಯ ಶತ್ರುವಾದ ಕಾರ್ಪೊರೇಟ್–ಕೋಮುವಾದ ಸರ್ಕಾರದ ವಿರುದ್ಧದ ಕ್ರಿಯೆಯಲ್ಲಿ ಕಾರ್ಮಿಕ–ರೈತರ ಐಕ್ಯತೆಯನ್ನು ಮತ್ತಷ್ಟು ಬಲಪಡಿಸಿದವು. ಈ ಹಿನ್ನೆಲೆಯಲ್ಲಿ ಜುಲೈ 13, 2023 ರಂದು ಅಖಿಗ ಮತ್ತು SKM ನ ಜಂಟಿ ಸಭೆಯನ್ನು ನಡೆಸಲಾಯಿತು. ಇದರಲ್ಲಿ ಮೋದಿ ಸರ್ಕಾರದ ಕಾರ್ಮಿಕ ವಿರೋಧಿ, ರೈತ ವಿರೋಧಿ ಮತ್ತು ಜನವಿರೋಧಿ ನೀತಿಗಳ ವಿರುದ್ಧ ಜಂಟಿಯಾಗಿ ಹೋರಾಡುವ ಸಂಕಲ್ಪವನ್ನು ಪುನರುಚ್ಚರಿಸಿದವು.

ಮೊದಲ ಐತಿಹಾಸಿಕ ಜಂಟಿ ರಾಷ್ಟ್ರೀಯ ಸಮಾವೇಶ

ಆಗಸ್ಟ್ 24 ರಂದು ನವದೆಹಲಿಯ ಟಾಲ್ಕಟೋರಾ ಸ್ಟೇಡಿಯಂನಲ್ಲಿ ನಡೆದ ಮೊದಲ ಐತಿಹಾಸಿಕ ಜಂಟಿ ರಾಷ್ಟ್ರೀಯ ಸಮಾವೇಶದಲ್ಲಿ ಸಾವಿರಾರು ಕಾರ್ಮಿಕರು, ರೈತರು ಮತ್ತು ಕೃಷಿ ಕಾರ್ಮಿಕರು ಭಾಗವಹಿಸಿದ್ದರು. ಕೇಂದ್ರ ಕಾರ್ಮಿಕ ಸಂಘಗಳು (CTUs) ಮತ್ತು ಸಂಯುಕ್ತ ಕಿಸನ್ ಮೋರ್ಚಾ (SKM) – ಒಂದೇ ಆಶ್ರಯದಲ್ಲಿ ಸಮಾವೇಶಕ್ಕೆ ಕರೆ ನೀಡಲಾಯಿತು. ನೂರಾರು ರೈತ ಸಂಘಟನೆಗಳ ಜಂಟಿ ಸಮಾವೇಶವು ಜಂಟಿ ಚಳವಳಿಯನ್ನು ಹೆಚ್ಚಿಸಲು ಸರ್ವಾನುಮತದಿಂದ ನಿರ್ಧರಿಸಿತು ಮತ್ತು ದೇಶಾದ್ಯಂತ ದೃಢವಾದ ಮತ್ತು ನಿರ್ಣಾಯಕ ಪ್ರತಿಭಟನಾ ಕ್ರಮಗಳಿಗೆ ಕರೆ ನೀಡಿತು.

ಒಕ್ಕೂಟ ಸರ್ಕಾರದ ಆಕ್ರಮಣಕಾರಿ ನೀತಿ

2014 ರಿಂದ ಒಕ್ಕೂಟ ಸರ್ಕಾರವು ಆಕ್ರಮಣಕಾರಿಯಾಗಿ ಅನುಸರಿಸುತ್ತಿರುವ ವಿಧ್ವಂಸಕ ಮತ್ತು ವಿನಾಶಕಾರಿ ಕಾರ್ಪೊರೇಟ್ ಪರ ನೀತಿಗಳನ್ನು ಅನುಸರಿಸುತ್ತಿದೆ. ಇದರಿಂದಾಗಿ ಕಾರ್ಮಿಕರು, ರೈತರು ಮತ್ತು ದೇಶದ ಎಲ್ಲಾ ವರ್ಗದ ಸಾಮಾನ್ಯ ಜನರ ಮುಂದೆ ಆತಂಕಕಾರಿ ಪರಿಸ್ಥಿತಿ ಉಂಟಾಗಿದೆ. ಜನರ ಸಾಮರಸ್ಯ ಜೀವನಕ್ಕೆ ದಕ್ಕೆಯಾಗಿದೆ. ಇದು ಪ್ರಜಾಪ್ರಭುತ್ವ ಮತ್ತು ಜಾತ್ಯತೀತತೆಗೆ ಹಾನಿಕಾರಕವಾಗಿದೆ.

ಸರ್ಕಾರದ ವಿನಾಶಕಾರಿ ನೀತಿಗಳ ವಿರುದ್ಧ ವಲಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಹೋರಾಟವನ್ನು ಹೆಚ್ಚಿಸಲು ಈ ಸಂಘಟನೆಗಳು ನಿರ್ಧರಿಸಿದವು. 2023 ರ ಇಡೀ ವರ್ಷ ಎಲ್ಲಾ ಹಂತಗಳಲ್ಲಿ ಹೋರಾಟದ ಉನ್ನತ ಸ್ವರೂಪಗಳಿಗೆ ಕಾರಣವಾಗುವ ಅಭಿಯಾನಗಳು ಮತ್ತು ಹೋರಾಟದ ಆಂದೋಲನಗಳ ವರ್ಷವಾಗಿರಬೇಕು ಎಂದು ಪ್ರತಿಪಾದಿಸಿದವು.

ಹೋರಾಟಗಳಿಂದ ಖಾಸಗೀಕರಣ ಪ್ರಕ್ರಿಯೆಯು ಸದ್ಯಕ್ಕೆ ಮಾತ್ರ ಸ್ಥಗಿತ

ಸಂಯುಕ್ತ ಕಿಸಾನ್ ಮೋರ್ಚಾದ ಅದ್ಭುತ ಹೋರಾಟವು ಜಗತ್ತಿನಲ್ಲಿ ಯಾವುದೇ ಸಮಾನತೆಯನ್ನು ಹೊಂದಿಲ್ಲ. ಈ ಹೋರಾಟದಿಂದ ಮೋದಿ ಸರ್ಕಾರ ತನ್ನ ಕೃಷಿ ಕಾನೂನುಗಳನ್ನು ಹಿಂಪಡೆಯಬೇಕಾಯಿತು. ಕಾರ್ಮಿಕರ ಒಗ್ಗಟ್ಟಿನ ಹೋರಾಟಗಳ ಮೂಲಕ BPCL, CEL, ಕೆಲವು ಉಕ್ಕಿನ ಸ್ಥಾವರಗಳಂತಹ ಹಲವಾರು ಸಾರ್ವಜನಿಕ ಒಡೆತನದ ಉದ್ಯಮ (PSU)ಗಳಲ್ಲಿನ ಖಾಸಗೀಕರಣ ಪ್ರಕ್ರಿಯೆಯು ಸದ್ಯಕ್ಕೆ ಮಾತ್ರ ಸ್ಥಗಿತಗೊಳ್ಳಬಹುದು. ವೈಜಾಗ್ ಸ್ಟೀಲ್ ಪ್ಲಾಂಟ್ ಅನ್ನು ಖಾಸಗೀಕರಣದಿಂದ ಉಳಿಸುವುದು ಜನರ ಹೋರಾಟವಾಗಿದೆ. ಮಹಾರಾಷ್ಟ್ರ, ಉತ್ತರ ಪ್ರದೇಶ, ಪಾಂಡಿಚೇರಿ, ಜಮ್ಮು ಮತ್ತು ಕಾಶ್ಮೀರ, ಚಂಡೀಗಢ ಮತ್ತು ಹರಿಯಾಣದಲ್ಲಿ ವಿದ್ಯುತ್ ನೌಕರರ ಒಗ್ಗಟ್ಟಿನ ಹೋರಾಟವು ಸರ್ಕಾರಗಳನ್ನು ಹಿಮ್ಮೆಟ್ಟುವಂತೆ ಮಾಡಿತು. ಐಕ್ಯ ಹೋರಾಟಗಳ ಮೂಲಕ, ವಿವಿಧ ರಾಜ್ಯಗಳಲ್ಲಿನ ಸ್ಕೀಮ್ ವರ್ಕರ್ಗಳು ತಮ್ಮ ಸಂಭಾವನೆ ಹೆಚ್ಚಳ ಸೇರಿದಂತೆ ಅನೇಕ ಬೇಡಿಕೆಗಳನ್ನು ಸಾಧಿಸಿದರು. ರೈತರು ಮತ್ತು ಕಾರ್ಮಿಕರ ಪ್ರತಿರೋಧ ಚಳವಳಿಗಳ ಅನುಭವಗಳನ್ನು ಮೌಲ್ಯಮಾಪನ ಮಾಡುತ್ತಾ, ಕೋಟಿಗಟ್ಟಲೆ ದುಡಿಯುವ ಜನರನ್ನು ತೊಡಗಿಸಿಕೊಳ್ಳುವ ಏಕೀಕೃತ ಜಂಟಿ ಪ್ರತಿರೋಧ ಕ್ರಿಯೆಯು ಪ್ರಭುತ್ವದ ಆಡಳಿತವನ್ನು ಬಗ್ಗಿಸಬಹುದು ಮತ್ತು ನೀತಿ ದಾಳಿಗಳನ್ನು ನಿಲ್ಲಿಸಬಹುದು.

ಹಕ್ಕೋತ್ತಾಯಗಳು

1. ರೈತರಿಗೆ ನೀಡುವ, ಬೀಜ, ರಸಗೊಬ್ಬರ, ಹಾಗೂ ವಿದ್ಯುತ್ ಚ್ಛಕ್ತಿ ಮೇಲಿನ ಸಬ್ಸಿಡಿ ಮೊತ್ತ ಹೆಚ್ಚಳವಾಗಬೇಕು. ರೈತರ ಉತ್ಪನ್ನಗಳಿಗೆ ಎಂ.ಎಸ್. ಸ್ವಾಮಿನಾಥನ್ ಶಿಪಾರಸ್ಸಿನ ಸೂತ್ರ, C2+50% ಪ್ರಕಾರ ಕನಿಷ್ಟ ಬೆಂಬಲ ಬೆಲೆ ಹಾಗೂ ಖರೀದಿ ಖಾತರಿ ಒದಗಿಸುವ ಶಾಸನ ಜಾರಿ ಮಾಡಬೇಕು. ರೈತರ ಆತ್ಮಹತ್ಯೆ ತಡೆಯಲು ಎಲ್ಲಾ ರೀತಿಯ ಅಗತ್ಯ ಕ್ರಮ ಕೈಗೊಳ್ಳಬೇಕು. ರೈತ ವಿರೋಧಿ ರಾಜ್ಯ ಕೃಷಿ ಕಾಯ್ದೆಗಳಾದ "ಕರ್ನಾಟಕ ರಾಜ್ಯ ಭೂಸುಧಾರಣಾ ತಿದ್ದುಪಡಿ ಕಾಯ್ದೆ–2020", "ಕರ್ನಾಟಕ ಎ.ಪಿ.ಎಂ.ಸಿ. ತಿದ್ದುಪಡಿ ಕಾಯ್ದೆ–2020", "ಕರ್ನಾಟಕ ಜಾನುವಾರು ಸಂರಕ್ಷಣ ತಿದ್ದುಪಡಿ ಕಾಯ್ದೆ–2020" ರದ್ದು ಗೊಳಿಸಬೇಕು.
2. ರಾಷ್ಟ್ರೀಯ ಕನಿಷ್ಟ ವೇತನ ಮಾಸಿಕ 26000 ರೂ. ನಿಗದಿ, ಸಮಾನ ಕೆಲಸಕ್ಕೆ ಸಮಾನ ವೇತನ ಜಾರಿ, ಖಾಯಂ ಸ್ವರೂಪದ ಕೆಲಸದಲ್ಲಿ ತೊಡಗುವ ಕಾರ್ಮಿಕರ ಖಾಯಂ ಶಾಸನ ರೂಪಿಸಬೇಕು. ನಾಲ್ಕು ಕಾರ್ಮಿಕ ಸಂಹಿತೆಗಳನ್ನು, ನಿಗದಿತ ಅವಧಿ ಉದ್ಯೋಗ (ಎಫ್‌ಟಿಇ) ಪದ್ಧತಿಯನ್ನು ಹಾಗೂ ಕೆಲಸದ ಅವಧಿಯ ಹೆಚ್ಚಳವನ್ನು ರದ್ದುಪಡಿಸಬೇಕು. ಮಹಿಳೆಯರ ರಾತ್ರಿ ಪಾಳಿ ಕಡ್ಡಾಯ ಎಂಬ ತಿದ್ದುಪಡಿ ರದ್ದು ಪಡಿಸಬೇಕು.
3. ಕಾರ್ಪೊರೇಟ್ ಪರವಾದ ಪಿಎಂ ಫಸಲ್ ಭೀಮಾ ಯೋಜನೆಯನ್ನು ರದ್ದುಪಡಿಸಿ, ಹವಾಮಾನ ಬದಲಾವಣೆ, ಬರ, ಪ್ರವಾಹ, ಬೆಳೆ ರೋಗ ಮುಂತಾದ ವಿಕೋಪಗಳಿಗೆ ರೈತರಿಗೆ ಪರಿಹಾರ ಒದಗಿಸುವ, ಎಲ್ಲಾ ಬೆಳೆಗಳಿಗೂ ವಿಮೆ ಒದಗಿಸುವ, ಸಮಗ್ರ ಸಾರ್ವಜನಿಕ ವಿಮಾ ಯೋಜನೆಯನ್ನು ಜಾರಿಗೆ ತರಬೇಕು.
4. ಎಲ್ಲಾ ರೈತರು/ಕೃಷಿ ಕೂಲಿಕಾರರನ್ನು ಸಾಲಭಾದೆಯಿಂದ ರಕ್ಷಿಸಲು ಸಮಗ್ರ ಸಾಲ ಮನ್ನಾ ಯೋಜನೆ ಜಾರಿಗೆ ತರಬೇಕು. ಕೃಷಿ ಕೂಲಿಕಾರರ ಹಿತವನ್ನು ಸಮಗ್ರವಾಗಿ **ಪುಟ 15 ಕ್ಕೆ**

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**